
ಸಂಪುಟ 22 ಸಂಚಿಕೆ 40
ಅಕ್ಟೋಬರ್ 1, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ



ಸ್ವಯಂಸೇವಕ ವಾಜಪೇಯಿ



ಪ. ಬಂಗಾಳ: ಬಿಜೆಪಿ ಕುತಂತ್ರ



ಮೊಳಗಿದ ರೈತ ಕಹಳೆ

ಹಿಂದಿನ ಸಂಚಿಕೆಯಲ್ಲಿ ಕಾಂಗ್ರೆಸ್ ದುರಾಡಳಿದ ವಿರುದ್ಧ ರಾಷ್ಟ್ರಪತಿಗೆ ದೂರು, ಕೇರಳ ಚುನಾವಣೆ ಹಾಗೂ ಸರ್ಕಾರಿ ನೌಕರರ ಮುಷ್ಕರದ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಮೇ ದಿನದ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಂದ ಜ್ಯೋತಿಬಸು ಮೇಲೆ ಆಕ್ರಮಣ, ಅಸ್ಸಾಂನಲ್ಲಿನ ಬಂಗಾಳಿ-ಬಂಗಾಳಿಯೇತರ ಜನಾಂಗೀಯ ನಡುವೆ ಭುಗಿಲೆದ್ದ ಗಲಬೆ, ಸಾವು-ನೋವುಗಳ ಬಗ್ಗೆ ಓದಿ

ಅಸ್ಸಾಂನಲ್ಲಿ ಭುಗಿಲೆದ್ದ ಜನಾಂಗೀಯ ಗಲಭೆ

1960 ಏಪ್ರಿಲ್ 30, ಮೇ ದಿನಾಚರಣೆಯ ಸಂದರ್ಭ. ಬರಣಗೋರ್‌ನ ಕಾರ್ಖಾನೆಯೊಂದರಲ್ಲಿ ಕಾರ್ಮಿಕರ ಸಭೆಯಲ್ಲಿ ಭಾಗವಹಿಸಲು ನಾನು ತೆರಳುತ್ತಿದ್ದೆ. ಮುಂದೇನು ಕಾದಿದೆ ಎಂಬುದು ನನಗೆ ಕಿಂಚಿತ್ತೂ ಅರಿವಿರಲಿಲ್ಲ. ಸಭೆ ಸ್ಥಳದ ಪ್ರವೇಶದ್ವಾರದಲ್ಲಿ ಕಾಂಗ್ರೆಸ್ ಧ್ವಜಗಳನ್ನು ಹಿಡಿದಿದ್ದ ಸಮಾಜವಿರೋಧಿ ಶಕ್ತಿಗಳು ನನ್ನ ಕಾರಿನ ಮೇಲೆ ಹಠಾತ್ತನೆ ಎರಗಿದರು. ಕಾರಿನ ಹಿಂದಿನ ಗಾಜು ಪುಡಿಪುಡಿಯಾಯಿತು. ರೌಡಿಗಳು ಒಂದೇ ಸಮನೆ ಕಾರನ್ನು ಕಬ್ಬಿಣದ ಸರಳುಗಳಿಂದ ಹೊಡೆದರು. ನನ್ನ ಜತೆಗಿದ್ದ ಕೆಲವರು ಗಾಯಗೊಂಡರು.

ಕಾರನ್ನು ಸ್ಥಳೀಯ ಪೋಲೀಸ್ ಠಾಣೆಗೆ ಒಯ್ಯುವಂತೆ ಚಾಲಕನಿಗೆಸೂಚಿಸಿದೆ. ಭಾರೀ ಕಷ್ಟಪಟ್ಟು ಪೋಲೀಸ್ ಠಾಣೆ ತಲುಪಿದೆವು. ತಕ್ಷಣವೇ ಕ್ರಮ ಕೈಗೊಳ್ಳುವಂತೆ ನಾನು ಒತ್ತಾಯಿಸಿದೆ. ಬರಾಕಪುರದ ಎಸ್‌ಡಿಪಿಓ ಧಾವಿಸಿದರು. ನಾನು ಅವರಜತೆ ಮಾತನಾಡುತ್ತಿದ್ದಾಗ ಹೊರಗಡೆ ಪಟಾಕಿಗಳು ಮತ್ತು ಬಾಂಬ್‌ಗಳ ಸ್ಫೋಟದ ಸದ್ದು ಕೇಳಿಸಿತು. ಏನಿದ್ದರೂ ನಾವು ವಾಪಸು ಮರಳುತ್ತಿದ್ದಾಗ ಯಾವುದೇ ಹಲ್ಲೆ ನಡೆಯಲಿಲ್ಲ.

1960 ರ ದಶಕದ ಆರಂಭದಲ್ಲಿ ಅಸ್ಸಾಂನಲ್ಲಿ ಭ್ರಾತೃಹತ್ಯೆಯ ದೊಂಬಿಗಳು ನಡೆದವು. ಬಂಗಾಳಿಗಳು ಮತ್ತು ಬಂಗಾಳಿಯೇತರ ಜನಗಳ ಮಧ್ಯೆ ನಡೆಯುತ್ತಿದ್ದ ತಿಕ್ಕಾಟಗಳು ಜುಲೈನಲ್ಲಿ ತಾರಕಕ್ಕೇರಿತು. ಗಲಭೆಗಳಲ್ಲಿ ಅನೇಕ ಜನರು ಸತ್ತರು. ಅಲ್ಪಸಂಖ್ಯಾತರು ಅಭದ್ರತೆಯ ನಡುವೆ ದಿನಕಳೆಯುತ್ತಿದ್ದರೂ ವಿವಾದವನ್ನು ಬಗೆಹರಿಸಲು ರಾಜ್ಯ ಸರ್ಕಾರವಾಗಲೀ, ಕೇಂದ್ರ ಸರ್ಕಾರವಾಗಲೀ ಮುಂದಾಗಲಿಲ್ಲ. ಅಸ್ಸಾಂನಿಂದ ಹೊರಹಾಕಲಾದ 4000 ಕ್ಕೂ ಹೆಚ್ಚು ನಿರಾಶ್ರಿತರು ಪಶ್ಚಿಮ ಬಂಗಾಳಕ್ಕೆ ಬಂದರು. ಇದನ್ನು ಎದುರಿಸಲು ಒಂದು ಚಳುವಳಿ ಅಗತ್ಯ ಎಂದು ನಾವು ನಿರ್ಧರಿಸಿದೆವು. ಪಶ್ಚಿಮ ಬಂಗಾಳದ ಜನರು ಈ ಆಂದೋಲನವನ್ನು ಯಶಸ್ವಿಗೊಳಿಸ ಬೇಕೆಂದು ಕೋರಿ ಒಂದು ಸಂಯುಕ್ತ ಹೇಳಿಕೆಯನ್ನು ಹೊರಡಿಸಿದೆವು.

ಮಖನ್ ಪಾಲ್, ಅಮರ್ ಬೋಸ್, ನಿರ್ಮಲ್ ಸಿನ್ಹಾ, ವಿಮಲಾ ನಂದ ಮುಖರ್ಜಿ, ವರದಾ ಮುಕಟಮಣಿ, ನಿಹಾರ ಮುಖರ್ಜಿ ಮತ್ತು ನಾನು ಅದಕ್ಕೆ ಸಹಿ ಹಾಕಿದ್ದೆವು. ಅಸ್ಸಾಂನಲ್ಲಿ ಬಂಗಾಳಿ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳಿಗೆ ಸೂಕ್ತ ಉತ್ತರ ಕೊಡಬೇಕಿತ್ತು.

ಯಶಸ್ವಿ ಮುಷ್ಕರ

ಜುಲೈ 16 ರಂದು ಮುಷ್ಕರಕ್ಕೆ ಕರೆ ಕೊಟ್ಟೆವು. ಅಸ್ಸಾಂನಲ್ಲಿನ ಘಟನಾವಳಿಗಳಿಂದ ಚಿಂತಿತರಾದ ಪ.ಬಂಗಾಳದ ಜನರು ಈ ಮುಷ್ಕರವನ್ನು ಯಶಸ್ವಿಗೊಳಿಸಿದರು.

1960 ರ ಸೆಪ್ಟೆಂಬರ್‌ನಲ್ಲಿ ಪ.ಬಂಗಾಳ ವಿಧಾನಸಭೆಯಲ್ಲಿ ಈ ವಿಚಾರವಾಗಿ ಒಂದು ಸರ್ವಾನುಮತದ ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ಅಸ್ಸಾಂ ಪರಿಸ್ಥಿತಿಯ ಚರ್ಚೆಗಾಗಿ ವಿಶೇಷ ಅಧಿವೇಶನವನ್ನು ಕರೆಯಬೇಕೆಂಬ ನಮ್ಮ ಬೇಡಿಕೆಯನ್ನು ಡಾ.ರಾಯ್ ಒಪ್ಪಿದರು. ಆ ಅಧಿವೇಶನದಲ್ಲೇ ಈ ಗೊತ್ತುವಳಿ ಅಂಗೀಕಾರವಾದದ್ದು. ಸ್ವತಃ ಮುಖ್ಯಮಂತ್ರಿಯವರೇ ಗೊತ್ತುವಳಿ ಪ್ರಸ್ತಾವನೆಯನ್ನು ಮಂಡಿಸಿ ಅಸ್ಸಾಂ ಘಟನೆಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಯಬೇಕೆಂದು ಆಗ್ರಹಿಸಿದರು.

ನಿರಾಶ್ರಿತರಿಗೆ ಮನೆಗಳನ್ನು ಕಟ್ಟಿಸಿ ಕೊಡಬೇಕು, ಸೂಕ್ತ ಪರಿಹಾರ ವಿತರಿಸಬೇಕು, ಅಸ್ಸಾಂನಲ್ಲಿ ಕಾನೂನು ಸುವ್ಯವಸ್ಥೆಯನ್ನು ಪುನರ್‌ಸ್ಥಾಪಿಸಬೇಕು ಹಾಗೂ ಭಾಷೆ ವಿಷಯದ ಮೇಲಿನ ನಿರ್ಧಾರವನ್ನು ತಡೆಹಿಡಿಯಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಮಂಡಿಸಲಾಯಿತು.

ಗೊತ್ತುವಳಿಯನ್ನು ಅಂಗೀಕರಿಸಿದ ತಕ್ಷಣವೇ ದೆಹಲಿಯಲ್ಲಿದ್ದ ಪ್ರಧಾನಿಗೆ ತಂತಿ ಮೂಲಕ ಅದನ್ನು ಕಳಿಸಿಕೊಡಲಾಯಿತು. ಇದಾದ ನಂತರ, ಮತ್ತು ಸಾರ್ವಜನಿಕ ಅಭಿಪ್ರಾಯ ಮತ್ತು ವ್ಯಾಪಕ ಪ್ರತಿಭಟನೆಗಳ ಪರಿಣಾಮವಾಗಿ ಅಸ್ಸಾಂ ಸರ್ಕಾರ ರಾಜ್ಯಕ್ಕೆ ಸ್ವಲ್ಪ ಪರಿಹಾರ ತರಲು ಕೆಲವು ಆಡಳಿತಾತ್ಮಕ ಕ್ರಮಗಳನ್ನು ಕೈಗೊಂಡಿತು. ಕೆಲಕಾಲ ಶಾಂತಿ ನೆಲೆಸಿತು.

ಭುಗಿಲೆದ್ದ ಭಾಷೆ ಸಮಸ್ಯೆ - ಸಾವು ನೋವುಗಳು


ಆದರೆ ಆ ವರ್ಷ ಪೂರ್ಣಗೊಳ್ಳುವುದರೊಳಗೆ ಅಸ್ಸಾಂನಲ್ಲಿ ಮತ್ತೆ ಸಮಸ್ಯೆ ತಲೆದೋರಿತು. ಈ ಬಾರಿ ಬಂಗಾಳಿ ಭಾಷೆ ವಿವಾದದ ವಿಷಯವಾಗಿತ್ತು.

ಅಸ್ಸಾಂನಲ್ಲಿ ಬಂಗಾಳಿ ಭಾಷೆಗೆ ರಾಜ್ಯಸರ್ಕಾರದ ಮಾನ್ಯತೆ ನೀಡುವ ವಿಚಾರದಲ್ಲಿ ಬಂಗಾಳಿಗಳು ಹೆಚ್ಚಿದ್ದ ಕಚಾರ್ ಜಿಲ್ಲೆಯಲ್ಲಿ ಪರಿಸ್ಥಿತಿ ಉದ್ವಿಗ್ನವಾಗಿತ್ತು. ಚಳುವಳಿಯ ಮೊದಲ ದಿನವೇ ಒಬ್ಬ ಮಹಿಳೆಯ ಸಹಿತ 11 ಪ್ರದರ್ಶನಕಾರರು ಪೋಲೀಸ್ ಗೋಲಿಬಾರಿನಲ್ಲಿ ಮಡಿದರು. 50 ಕ್ಕೂ ಹೆಚ್ಚು ಜನರು ಗಾಯಗೊಂಡರು. ಸಿಲ್ಚಾರ್‌ನಲ್ಲಿ ಮುಷ್ಕರ ನಡೆಯಿತು. ಚಳುವಳಿ ಪಶ್ಚಿಮ ಬಂಗಾಳಕ್ಕೂ ಹಬ್ಬಿತು. ಗೋಲಿಬಾರ್ ಪ್ರತಿಭಟಿಸಿ ಅಸ್ಸಾಂ ವಿಧಾನಸಭೆಯ ಅನೇಕ ಸದಸ್ಯರು ರಾಜಿನಾಮೆ ನೀಡಿದರು. ಕಚಾರ್‌ನಲ್ಲಿ ಸ್ವಯಂಪ್ರೇರಿತವಾಗಿ ಮುಷ್ಕರ ನಡೆಯಿತು. ಪ್ರತಿದಿನ ಪಿಕೆಟಿಂಗ್ ಆರಂಭವಾಯಿತು.

1961 ಮೇ 25 ರಂದು ಪಶ್ಚಿಮ ಬಂಗಾಳದಲ್ಲಿ ಕೂಡ ಸಂಪೂರ್ಣ ಮುಷ್ಕರ ನಡೆಯಿತು. ಆ ವೇಳೆ ದುರ್ಗಾಪುರದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ(ಎಐಸಿಸಿ) ಅಧಿವೇಶನ ನಡೆಯುತ್ತಿತ್ತು. ಎಲ್ಲ ಕೇಂದ್ರ ಸಚಿವರು, ಪ್ರಧಾನಮಂತ್ರಿ ಅಲ್ಲಿ ಇದ್ದರು. ಎಐಸಿಸಿ ಅಧಿವೇಶನದ ಸ್ಥಳಕ್ಕೆ ಪ್ರಮೋದ್ ದಾಸ್ ಗುಪ್ತಾ ನೇತೃತ್ವದಲ್ಲಿ ಒಂದು ಪ್ರತಿಭಟನಾ ರ್‍ಯಾಲಿಯನ್ನು ಒಯ್ಯುವುದೆಂದು ನಿರ್ಧರಿಸಲಾಯಿತು.

ಸಿಲ್ಚಾರ್‌ನಲ್ಲಿ ಪಕ್ಷ ಸಂಘಟಿಸಿದ್ದ ರ್‍ಯಾಲಿಯಲ್ಲೇ 35,000 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಅಲ್ಲಿನ ಸಭೆಯಲ್ಲಿ ಭಾಗವಹಿಸಲು ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿ ಅಜಯ್ ಘೋಷ ಮತ್ತು ಸಂಸತ್ ಸದಸ್ಯರಾದ ರೇಣು ಚಕ್ರವರ್ತಿ ಹಾಗೂ ಮಹಮದ್ ಇಲಿಯಾಸ್ ಸಿಲ್ಚಾರ್‌ಗೆ ತೆರಳಿದರು

ಒತ್ತಡಕ್ಕೆ ಮಣಿದು ಕೇಂದ್ರ ಗೃಹಸಚಿವ ಲಾಲ ಬಹುದ್ದೂರ್ ಶಾಸ್ತ್ರಿ ಕೊನೆಗೂ ಅಸ್ಸಾಂಗೆ ಭೇಟಿ ನೀಡಲು ನಿರ್ಧರಿಸಿದರು. ಶಾಸ್ತ್ರಿ ಮರಳಿದ ಮೇಲೆ ಅಸ್ಸಾಂ ರಾಜ್ಯಪಾಲರು ಇಡೀ ಕಚಾರ್ ಜಿಲ್ಲೆಯನ್ನು 'ಗಲಭೆ ಪೀಡಿತ ಪ್ರದೇಶ' ಎಂದು ಘೋಷಿಸಿದರು. ಆದರೆ ಬಂಗಾಳಿಗೆ ರಾಜ್ಯಭಾಷೆ ಮಾನ್ಯತೆ ನೀಡಬೇಕೆಂದು ಬೇಡಿಕೆಯನ್ನು ತಳ್ಳಿಹಾಕಲಾಯಿತು.



ಮೂರನೇ ಸಾರ್ವತ್ರಿಕ ಚುನಾವಣೆಗೆ ಧುಮುಕಿದ ಪಕ್ಷ.....


(ಮುಂದಿನವಾರ)

ಒಡನಾಡಿ ಪಿ.ಆರ್.ನೆನಪು ಹಸಿರು.....ಉಸಿರು

ರಾಜ್ಯದಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಕಟ್ಟಿ ಬೆಳೆಸಲು ಶ್ರಮಿಸಿದ ಪಿ.ರಾಮಚಂದ್ರರಾವ್‌ರವರು ನಮ್ಮನ್ನಗಲಿ ಎರಡು ವರ್ಷಗಳು ಕಳೆದಿವೆಯಾದರೂ, ಅವರ ನೆನಪು ಮಾತ್ರ ದಿನನಿತ್ಯ ಅಚ್ಚ ಹಸಿರಾಗಿ ನಮ್ಮೆಲ್ಲರಲ್ಲೂ ಉಳಿದಿದೆ. ಪಿ.ಆರ್. ಮಾಸ್ತರು ಒಬ್ಬ ವ್ಯಕ್ತಿಯಾಗದೆ ಚಳುವಳಿಯಾಗಿ ಸಿದ್ಧಾಂತದ ಪ್ರತೀಕವಾಗಿದ್ದಾರೆ. ಸಂಗಾತಿಗಳೆಲ್ಲರಿಗೂ ಸ್ಫೂರ್ತಿಯಾಗಿದ್ದಾರೆ ಎಂದು ಮೆಲುಕು ಹಾಕಿತು ಶ್ರೀರಾಮಪುರದ ಸಿಪಿಐ(ಎಂ) ಪ್ರದೇಶ ಸಮಿತಿ. ಸೆ. 18 ರಂದು ನೆನಪಿನ ದಿನ ಆಚರಿಸಿತು. 'ಓ......, ನನ್ನ ಚೇತನ ಆಗು ನೀ ಅನಿಕೇತನ' ಎಂದು ಹಾಡುತ್ತಾ ಪಿ.ಆರ್.ಗೆ ನಮನ ಸಲ್ಲಿಸಿದವರು ಗೆಳೆಯ ಹಾಡುಗಾರ ಬೀಮ್‌ಜಿ. ಡಿವೈಎಫ್‌ಐನ ರಾತ್ರಿ ಶಾಲೆಯ ಮಕ್ಕಳು ಸ್ವಾತಂತ್ರ್ಯ ಸಮರದ ಹುತಾತ್ಮರನ್ನು ನೆನೆದು ಹಾಡಿದರೆ, ಡಿವೈಎಫ್‌ಐ ನ ಶ್ರೀರಾಮಪುರ ಸಮಿತಿಯ ಕಾರ್ಯದರ್ಶಿ ಎಸ್.ಹೆಚ್.ಧನರಾಜ್‌ರವರು 'ವಿಮೋಚನೆ ಸಮರದಿ ಅರಳಿದೆ ಹೂವೇ' ಎಂದು ಹಾಡುತ್ತಾ ಪಿ.ಆರ್.ರವರನ್ನು ಬಣ್ಣಿಸಿದರು, ಸಭಿಕರೆಲ್ಲರ ಮನವನ್ನು ಕಲಕಿದರು.

ಈ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಿಪಿಐ(ಎಂ) ಬೆಂ.ಜಿಲ್ಲಾ ಸದಸ್ಯ, ಶ್ರೀರಾಮಪುರ ಪ್ರದೇಶ ಸಮಿತಿ ಕಾರ್ಯದರ್ಶಿ ಗೋಪಾಲಕೃಷ್ಣ ಅರಳಹಳ್ಳಿಯವರು ಮಾಸ್ತರು ಎಲ್ಲರ ಒಡನಾಡಿಯಾಗಿ ಸಂಘಟನೆ ಬಲಗೊಳಿಸಲು ಬೆನ್ನು ತಟ್ಟಿದ್ದರು. ಪುಸ್ತಕಗಳೇ ಅವರ ಒಡನಾಡಿ. ಅಗಾಧ ಜ್ಞಾನ ತುಂಬಿದ ಪಿ.ಆರ್.ಗೆ ಅಭ್ಯಾಸ ಅವರ ಜೀವನದ ಭಾಗವಾಗಿತ್ತು. ನಮ್ಮೆಲ್ಲರಿಗೂ ಇಂದಿಗೂ ಅವರ ಮಾರ್ಗದರ್ಶನ ಸ್ಫೂರ್ತಿಯಾಗಿದೆ ಎಂದರು.

ಈ ಸಭೆಯ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಎಸ್.ವೈ.ಗುರುಶಾಂತ್ ತುಂಬು ಹೃದಯದಿಂದ ಮಾಸ್ತರರನ್ನು ನೆನಪಿಸುತ್ತಾ ಶ್ರದ್ಧಾಂಜಲಿ ಅರ್ಪಿಸಿದರು. ಪಿ.ಆರ್. ಜೊತೆ ಹಲವು ವರ್ಷಗಳ ಒಡನಾಟ ಹೊಂದಿದ್ದ ದಿನಗಳಲ್ಲಿ ಪಿ.ಆರ್. ಜನತೆಯ ಬಗ್ಗೆ ಹೋರಾಟಗಳ ಬಗ್ಗೆ ಸದಾ ಚಿಂತಿಸುತ್ತಿದ್ದರೆಂದು ತಿಳಿಸಿದರು.



ಮಾಸ್ತರರು ಅಗಾಧ ದೇಶಪ್ರೇಮಿಯಾಗಿದ್ದರು. ಶಿಕ್ಷಕರಾಗಿರುವಾಗಲೇ ದ.ಕನ್ನಡದಲ್ಲಿ ಬೀಡಿ, ಹೆಂಚಿನ ಕಾರ್ಮಿಕರ ದುಃಖ ದುಮ್ಮಾನಗಳಿಗೆ ಸ್ಪಂದಿಸಿದವರು. ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಿದ್ಧಾಂತಕ್ಕೆ ಆಕರ್ಷಿತರಾಗಿ ಸಿದ್ಧಾಂತವನ್ನು ಜೀವನದಲ್ಲಿ ಅರಗಿಸಿಕೊಂಡು ಜೀವನ ಪರ್ಯಂತ ಕಮ್ಯುನಿಸ್ಟ್ ಚಳುವಳಿಗೆ ಇಂಬು ಕೊಟ್ಟಿದ್ದರು. ಕರ್ನಾಟಕದ ಪ್ರಜಾಸತ್ತಾತ್ಮಕ ಚಳುವಳಿಗಳನ್ನು ಕಟ್ಟಿ ಬೆಳೆಸಲು ಪಿ.ಆರ್. ಕೊಡುಗೆ ಇದೆ. ಎಲ್ಲಾ ವಿಭಾಗಗಳ ಚಳುವಳಿ ಬೆಳೆಯಬೇಕು ಎಂಬುದು ಪಿ.ಆರ್.ಹಂಬಲವಾಗಿತ್ತು ಎಂದರು.

ದೇಶವಿಂದು ಅಪಾಯದ ಅಂಚಿನಲ್ಲಿದೆ. ಕೋಮುವಾದಿಗಳ ಮುಷ್ಟಿಯಲ್ಲಿ ಸಿಲುಕಿದೆ. ಪ್ರಧಾನಿ ವಾಜಪೇಯಿಯವರು ಅನಾರೋಗ್ಯವಿದ್ದರೂ ಅಮೆರಿಕಾ ಪ್ರವಾಸ ಮಾಡುತ್ತಿದ್ದಾರೆ. ಇದರ ಗುಟ್ಟೇನು? ದೇಶವನ್ನು ಅಮೆರಿಕಾಕ್ಕೆ ಒತ್ತೆ ಇಡುವುದು. ಸಾಮ್ರಾಜ್ಯಶಾಹಿ ಅಮೆರಿಕಾವನ್ನು ಒಲೈಸುವುದು. 'ಕಾಶ್ಮೀರ'ದ ವಿಷಯವನ್ನು ಅಂತರ್ರಾಷ್ಟ್ರೀಯ ಸಮಸ್ಯೆಯಾಗಿ ಮಾಡುವುದಾಗಿದೆ ಎಂಬುದನ್ನು ದೇಶದ ಜನತೆ ಮರೆಯಬಾರದು. ಖಾಸಗೀಕರಣ, ಉದಾರೀಕರಣದ ವಿರುದ್ಧ ಬೃಹತ್ ಚಳುವಳಿಗಳು ನಡೆಯಬೇಕು. ಜನತಾಚಳುವಳಿಯನ್ನು ಕಟ್ಟುವಲ್ಲಿ ನಮ್ಮನ್ನು ಅರ್ಪಿಸಿಕೊಳ್ಳಬೇಕು. ಆಗ ಮಾತ್ರ ಮಾಸ್ತರರಿಗೆ ಶ್ರದ್ಧಾಂಜಲಿ ಸಲ್ಲಿಸಿದಂತಾಗುತ್ತದೆಂದು ಗುರುಶಾಂತ್ ಅಭಿಪ್ರಾಯಪಟ್ಟರು.

ಡಿಎಸ್‌ಎಸ್ ನ ಚಂದ್ರಶೇಖರ ಸ್ವಾಮಿಯವರು ಮಾಸ್ತರರಿಗೆ ಶ್ರದ್ಧಾಂಜಲಿ ಸಲ್ಲಿಸಿ ಬಹುರಾಷ್ಟ್ರೀಯ ಕಂಪನಿಗಳು ಕರ್ನಾಟಕದಲ್ಲಿ ಪಾದಾರ್ಪಣೆ ಮಾಡುತ್ತಿವೆ. ಇಂತಹ ಅಪಾಯವನ್ನು ಎದುರಿಸಲು ನಾವೆಲ್ಲರೂ ಒಕ್ಕೊರಲಿನಿಂದ ಹೋರಾಟ ನಡೆಸಬೇಕೆಂದು ತಿಳಿಸಿದರು.

ಎಲ್‌ಐಸಿ ಕಾರ್ಮಿಕ ಸಂಘದ ಮುಖಂಡರಾದ ವಿಜಯಕುಮಾರ್, ಜನವಾದಿ ಮಹಿಳಾಸಂಘಟನೆಯ ಕೆ.ಎಸ್.ಶಾರದ, ಡಿವೈಎಫ್‌ಐ ನ ಶ್ರೀರಾಮಪುರ ಸ್ಥಳೀಯ ಸಮಿತಿ ಅಧ್ಯಕ್ಷರಾದ ಸುರೇಶ್ ಪಿ.ಆರ್. ರವರಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಸ್ವಾಗತವನ್ನು ಜಯಲಕ್ಷ್ಮಿ ಸಿಪಿಐ(ಎಂ) ಶ್ರೀರಾಮಪುರ ಶಾಖೆಯ ಕಾರ್ಯದರ್ಶಿ, ಸ್ವಾಗತಿಸಿದರು. ಶ್ರೀರಾಮಪುರ ಶಾಖೆಯ ಸದಸ್ಯೆ ಲಕ್ಷ್ಮಿ ನರಸಮ್ಮ ವಂದನೆ ಸಲ್ಲಿಸಿದರು.

▪ ಗೋಪಾಲಕೃಷ್ಣ ಅರಳಹಳ್ಳಿ

ಕರ್ನಾಟಕ ಈ ವಾರ

ಎಸ್.ವೈ.ಗುರುಶಾಂತ್

ರಾಜ್ ಅಪಹರಣ - ಸಂಯಮ ಅಗತ್ಯ

ಟಾಡಾ ಬಂಧಿತರ ಬಿಡುಗಡೆ ಪ್ರಕರಣದ ವಿಚಾರಣೆಯನ್ನು ಸುಪ್ರೀಂಕೋರ್ಟ್ ಅಕ್ಟೋಬರ್ 11 ಕ್ಕೆ ನಿಗದಿಗೊಳಿಸಿದೆ. ಹೀಗಾಗಿ ರಾಜ್ ಮತ್ತು ಸಂಗಡಿಗರ ಬಿಡುಗಡೆ 55 ದಿನಗಳ ನಂತರವೂ ಅನಿಶ್ಚಿತತೆಯಿಂದ ಕೂಡಿ ಇನ್ನು ಎಷ್ಟು ದಿನಗಳೋ ಎಂದು ಆತಂಕ ಸೃಷ್ಟಿಸಿದೆ. ನಾಲ್ಕನೇ ಬಾರಿ ಸಂಧಾನಕ್ಕೆ ಗೋಪಾಲ್ ಕಾಡಿಗೆ ತೆರಳಿದ್ದಾನೆ. ಆದರೆ ರಾಜ್‌ರನ್ನು ಕರೆದುತರುವ ಬಗ್ಗೆ ಯಾರಿಗೂ ಖಚಿತ ಭರವಸೆಯಿಲ್ಲವಾಗಿದೆ.

ರಾಜ್ ಪ್ರಕರಣದಲ್ಲಿ ಒಟ್ಟಾಗಿ ಕಾರ್ಯವೆಸಗುತ್ತಿರುವ ತಮಿಳುನಾಡು-ಕರ್ನಾಟಕ ಸರ್ಕಾರಗಳ ನಡುವೆ ಈಗೀಗ ವಾದ-ವಿವಾದಗಳು ಭಿತ್ತರಗೊಳ್ಳುತ್ತಿವೆ. ಇದಲ್ಲಿ ಪರಸ್ಪರರನ್ನು ದೂರುವುದರಲ್ಲಿ ಅರ್ಥವಿಲ್ಲ. ವೀರಪ್ಪನ್ ನಂತಹ ಕ್ರಿಮಿನಲ್ ಚಟುವಟಿಕೆಗಳು ಈ ಸ್ವರೂಪಕ್ಕೆ ಬೆಳೆದು ಬರುವಲ್ಲಿ ಉಭಯ ಸರ್ಕಾರಗಳು ರಾಜಕೀಯ ನಾಯಕರೂ, ಕ್ರಿಮಿನಲ್‌ಗಳ ನಡುವಿನ ಸಂಬಂಧದ ಹೊಣೆ ಹೊರಬೇಕಾಗುತ್ತದೆ. ಇದರಿಂದ ಎರಡೂ ಸರ್ಕಾರಗಳೂ ತಪ್ಪಿಸಿಕೊಳ್ಳುವಂತಿಲ್ಲ.

ರಾಜ್ ಬಿಡುಗಡೆಗೆ ಆಗ್ರಹಿಸಿ ಸೆಪ್ಟೆಂಬರ್ 21 ರಂದು ಸಿನಿಮಾ ರಂಗದವರು ನಡೆಸಿದ ಪ್ರತಿಭಟನೆ, ಜನರಲ್ಲಿಯೂ ಉಂಟಾಗಿರುವ ತೀವ್ರ ಹತಾಶೆ, ಅಸಹಾಯಕತೆ, ಪ್ರತಿಭಟನೆಯ ಭಾವನೆಗಳಸಂಕೇತ. ಮೆರವಣಿಗೆ ಬೃಹತ್ತಾಗಿದ್ದರೂ ಶಾಂತಿಯುತವಾಗಿ ಇರುವಾಗಲೇ ಕೆಲವು ಅಹಿತಕರ, ಅನುಚಿತ ಘಟನೆಗಳು ನಡೆದದ್ದು ಅದುಮಿ ಹಿಡಿದಿದ್ದ ಆಕ್ರೋಶದ ಪ್ರತೀಕ. ಸಭೆಯಲ್ಲಿ ಮಾತನಾಡಿದವರೂ ಸಂಯಮ ಕಳೆದುಕೊಳ್ಳಬಾರದಿತ್ತು. ಅದೇ ವೇಳೆ ಮಲ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಪಾರ್ವತಮ್ಮನವರು ನಿಧನರಾದರೆಂದು ಬೆಂಗಳೂರಿನ ತುಂಬಾ ಸುಳ್ಳು ಸುದ್ದಿ ಹಬ್ಬಿಸಲಾಯಿತು. ಸ್ವಲ್ಪ ಎಚ್ಚರ ತಪ್ಪಿದ್ದರೂ ಭಾರಿ ಅನಾಹುತವೇ ನಡೆದುಹೋಗಬಹುದಿತ್ತು. ಇದು ಸನ್ನಿವೇಶದ ದುರ್ಲಾಭ ಪಡೆಯಲು ಬಯಸುವವರ ಕೃತ್ಯವಾಗಿದೆ. ಮುಂದೆ 28 ಕ್ಕೆ ಕರ್ನಾಟಕದ ಬಂದ್‌ಗೂಕರೆ ನೀಡಲಾಗಿದೆ. 'ಅಹಿಂಸಾತ್ಮಕ' ಎಂದೇ ಹೇಳಲಾಗುತ್ತಿದ್ದರೂ 'ಹೇಳಲಿಕ್ಕಾಗದು' ಎಂಬುದೇ ಎಲ್ಲರ ಮಾತುಗಳು. ಈ ಪ್ರತಿಭಟನೆಗಳು ಭಾಷಾ ಅಲ್ಪಸಂಖ್ಯಾತರ ಮೇಲೆ ಇರಕೂಡದು. ಆದರೆ ಈ ಧಾಳಿಗಳಿಗೆ ಗುರಿಯಾಗುವವರು ಅವರೇ. ಹೀಗಾಗಿ ತಮಿಳರು ಊರು ಬಿಡುತ್ತಿದ್ದಾರೆಂಬ ವರದಿಗಳಿವೆ. ಆದ್ದರಿಂದ ಸರ್ಕಾರ ಹಾಗೂ ಬಂದ್‌ಗೆ ಕರೆ ನೀಡಿರುವ ಸಂಘಟನೆಗಳು ಅತಿ ಜಾಗರೂಕತೆ, ಜವಾಬ್ದಾರಿಯಿಂದ ವರ್ತಿಸಿ ಅಂತಹ ಘಟನೆಗಳು ನಡೆಯಲು ಅವಕಾಶ ಕಲ್ಪಿಸಬಾರದು. ಪುಂಡಾಟಿಕೆಗಳನ್ನು ತಡೆಯಬೇಕು. ಇಲ್ಲಿನ ಜನರ ಮೇಲಿನ ಧಾಳಿಗಳಿಂದ ವೀರಪ್ಪನ್‌ಗೆ ಏನೂ ಆಗುವುದಿಲ್ಲ ಎಂಬುದು ತಿಳಿದಿರಬೇಕು. ಆದ್ದರಿಂದ ಶಾಂತಿ, ಸೌಹಾರ್ದತೆ ಕಾಪಾಡುವುದು ಎಲ್ಲರ ಮೊದಲ ಆದ್ಯತೆ ಆಗಬೇಕು.

ಈ ವಿದ್ಯಮಾನಗಳ ನಡುವೆಯೇ ಕಾಂಗ್ರೆಸ್‌ನಲ್ಲಿ ಇರುವ ಭಿನ್ನಮತ ಬಹಿರಂಗಕ್ಕೆ ಬರುತ್ತಿದೆ. ದೆಹಲಿಯವರೆಗೂ ಹೋಗಿ ಬಂದಿದೆ. ವೀರಪ್ಪನ್ ಪ್ರಕರಣದಲ್ಲಿ ತಮ್ಮದೂ ಪ್ರಶ್ನೆಗಳು ಇತ್ಯರ್ಥವಾಗಿ ಬಿಡಲಿ ಎಂಬುದು ಹಲವು ಭಿನ್ನಮತೀಯ ಕಾಂಗ್ರೆಸ್ಸಿಗರ ಪ್ರಬಲ ಆಕಾಂಕ್ಷೆಯಂತೆ. ಈ ಕಾಂಗ್ರೆಸ್ ನಾಯಕರು ಕುರ್ಚಿಯ ಮೇಲಾಟದಲ್ಲಿ ಜನ, ರಾಜ್ಯದ ಹಿತಗಳು... ಎಲ್ಲವನ್ನೂ ಮರೆಯಬಲ್ಲರು ಎಂಬುದಕ್ಕೆ ಹಲವಾರು ಪ್ರಕರಣಗಳೇ ಇವೆ. ಇದಕ್ಕೆ ಜನರನ್ನು ಬಲಿಯಾಗಿಸಬೇಕೆ?

ತ್ರಿಶಂಕು ಸ್ವರ್ಗ ಬಿಡಲೂ ಆಗದ ಹೆಗಡೆ

ಮೌನಬಂಧಿಯಾಗಿ ಮೂಲೆಗೆ ಸೇರಿದ್ದಾರೆ ಎನ್ನುವಾಗಲೇ ಹಂಡೆಗೊಟ್ಟಿಲೆ ಹುಳಿ ಕಲೆಸಿಟ್ಟುಕೊಂಡು ಜನತಾದಳದ ವಿಲೀನದ ಹಾಲಿಗೆ ಹಿಂಡಲು ಕಸರತ್ತು ಆರಂಭಿಸಿರುವ ರಾಮಕೃಷ್ಣ ಹೆಗಡೆಯವರು ರಾಜ್ ಅಪಹರಣದ ಬಗ್ಗೆಯೂ ಮಾತನಾಡಬಲ್ಲವರಾಗಿದ್ದಾರೆ. ಒಂದು ಕಡೆ ತಮಿಳುನಾಡಿನ ಜನ ಹಾಗೂ ಕರುಣಾನಿಧಿ ಸರ್ಕಾರದ ಮೇಲೆ, ಇನ್ನೊಂದೆಡೆ ಕೃಷ್ಣರವರ ಮೇಲೆ ಹರಿಹಾಯುತ್ತಿರುವ ಮಾಜಿ ಕೇಂದ್ರ ಸಚಿವರು ತಮ್ಮ ಕೆಂಡದುಂಡೆಗಳ ವಾಗ್ಧಾಳಿಗಳಿಂದ ಏನನ್ನೂ 'ಹೇಳ' 'ಬಯಸುತ್ತಾರೆ' ಎಂದು ತಿಳಿಯುವುದೇ ಕಷ್ಟ. ಕರುಣಾನಿಧಿಯವರ ಕುರ್ಚಿಯ ಆಜನ್ಮ ವೈರಿ ಜಯಲಲಿತಾರನ್ನು ಹಿಂದೆ ಕನಿಷ್ಠ ಶಬ್ದ ಸೌಜನ್ಯವನ್ನು ಬಿಟ್ಟು ತಾವು ಬೈಯ್ದಾಡಿದ್ದರೂ, ತಾವೇ ಕೇಂದ್ರದ ಸಚಿವ ಸ್ಥಾನ ಕಳೆದುಕೊಳ್ಳುವಾಗ ಕರುಣಾನಿಧಿ ತಮ್ಮ ಬೆಂಬಲಕ್ಕೆ ಬರಲಿಲ್ಲವೆಂಬ ಆಕ್ರೋಶವೋ, ರಾಜ್ ಪ್ರಕರಣದಲ್ಲಿ ಕೃಷ್ಣರ ಸರ್ಕಾರ ಎಡವುತ್ತಿದೆಯೆಂದಾಗಲೂ ಏನನ್ನು 'ಕೊಡವದಿರುವ' ಬಗೆಗಿನ ತಳಮಳವೋ ತಿಳಿಯುವುದು ಕಷ್ಟ. ತಮಿಳುನಾಡು ಕರ್ನಾಟಕದ ಜನರ ನಡುವೆ ಕಿಚ್ಚು ಹಚ್ಚಲು ಕೆಲವರು ಅಹೋರತ ಯತ್ನಿಸುತ್ತಿರುವಾಗ ತಮ್ಮ ಮಾತುಗಳು ಏನು ಅರ್ಥ ಹೊರಡಿಸಬಹುದು ಎಂಬುದನ್ನು ತಿಳಿಯಲಾಗದಷ್ಟು ಮುಗ್ಧರಲ್ಲ ಈ ಮುತ್ಸದ್ದಿ. ಅಲ್ಲಿಯೂ ಇಲ್ಲಿಯೂ ಎಲ್ಲೂ ಸಲ್ಲದ ಅವರು ತ್ರಿಶಂಕು ಸ್ವರ್ಗದಲ್ಲೇ ಯಾಕೆ ಸುಖ ಪಡಬಾರದು?

ಅಭಿವೃದ್ಧಿಯ ಜುಟ್ಟು ಕೇಂದ್ರದಲ್ಲೇ ?

ರಾಜ್ಯದ ಯೋಜನಾ ಗಾತ್ರವನ್ನು 7250 ಕೋಟಿಗೆ ನಿಗದಿಪಡಿಸಲಾಗಿದೆ. ಇದು ಕೇಂದ್ರ ಯೋಜನಾ ಆಯೋಗದ ಉಪಾಧ್ಯಕ್ಷ ಕೆ.ಸಿ.ಪಂತ್ ಮತ್ತು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ನಡುವೆ ಆದ ಚರ್ಚೆಯ ಫಲ. ಈ ಸಂದರ್ಭದಲ್ಲಿ ಕೆ.ಸಿ.ಪಂತ್ ಆಡಿರುವ ಮಾತುಗಳ ಗಮನಾರ್ಹ. ನೀರಾವರಿ, ಶಿಕ್ಷಣದ ಶುಲ್ಕಗಳನ್ನು ವಸೂಲು ಮಾಡಲು ಕರ್ನಾಟಕ ಸರ್ಕಾರ ಮುಂದಾಗಿದೆಯೆಂದು ಶ್ಲಾಘಿಸಿದ್ದಾರೆ. ವಿದ್ಯುತ್ ಕ್ಷೇತ್ರದಲ್ಲಿ ಸುಧಾರಣೆ ತಂದು, ದರ ನಿಗದಿ ಪಡಿಸುವಷ್ಟು ಹಂತಕ್ಕೆ ಬಂದಿರುವುದು ಶ್ಲಾಘನೀಯ ಎಂದಿದ್ದಾರೆ. ಅಲ್ಲದೇ ಬೆಳೆಯ ವಿಧಾನ ಬದಲಾಯಿಸಬೇಕು ಎಂದು ಹೇಳಿದ್ದಾರೆ.

ಇವನ್ನೆಲ್ಲ ಗಮನಿಸಿದರೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ಮೇಲೆ ಸವಾರಿ ಮಾಡಿ, ದಬಾವಣೆ ಹಾಕಿ, ತನಗೆ ಬೇಕಾದಂತಹ ಅಭಿವೃದ್ಧಿ ಸಾಧಿಸಲು ಹವಣಿಸುತ್ತಿರುವುದು ಸ್ಪಷ್ಟ. ರಾಜ್ಯಗಳ ಸಂಪನ್ಮೂಲಗಳನ್ನು ಸೂರೆ ಮಾಡಿ, ಕೇಂದ್ರದ ಮುಂದೆ ರಾಜ್ಯಗಳು ಭಿಕ್ಷೆ ಕೇಳುತ್ತಾ ನಿಲ್ಲಬೇಕು ಎಂದೇ ಕೇಂದ್ರ ಯೋಜನಾ ಆಯೋಗವು ಬಯಸುತ್ತದೆ. ಕೇಂದ್ರದ ಅಣತಿಗಳನ್ನು ರಾಜ್ಯ ಸರ್ಕಾರ ಜಾರಿಮಾಡಬೇಕು, ಹಾಗೆಯೇ ಕೇಂದ್ರವೇ ಐಎಂಎಫ್-ವಿಶ್ವಬ್ಯಾಂಕ್ ಅಣತಿಗಳನ್ನು ಶಿರಸಾವಹಿಸಿ ಜಾರಿಗೆ ತರಬೇಕು ಎಂಬ ವ್ಯವಸ್ಥೆಯನ್ನೇ ಬಲವಾಗಿ ಸ್ಥಾಪಿಸುತ್ತಿದೆ. ವಿದ್ಯುತ್ ದರಗಳು, ಶಿಕ್ಷಣ ಶುಲ್ಕಗಳು ಏರುತ್ತಿರುವುದರ ಗುಟ್ಟು ಸಹ ಹೊರ ಬಂದಿದೆ. ವಿದ್ಯುತ್, ಕೃಷಿಯಂತಹ ಕ್ಷೇತ್ರಗಳು ರಾಜ್ಯ ಸರ್ಕಾರದ ಅಧಿಕಾರ ವ್ಯಾಪ್ತಿಯಲ್ಲಿ ಇರುವಂತಹವು. ಆದರೆ ಅವುಗಳ ಜುಟ್ಟನ್ನು ಕೇಂದ್ರವೇ ಹಿಡಿಯುತ್ತಿರುವುದು ಒಕ್ಕೂಟದ ವ್ಯವಸ್ಥೆ ಮತ್ತು ಪ್ರಜಾಸತ್ತಾತ್ಮಕ ಪದ್ಧತಿಯನ್ನೇ ಬುಡಮೇಲು ಮಾಡುವಂತಹದ್ದು. ಇದಕ್ಕೆ ಪ್ರತಿರೋಧದ ಚಕಾರವನ್ನೂ ಎತ್ತದಿರುವ ರಾಜ್ಯ ಸರ್ಕಾರದ ವರ್ತನೆ ಟೀಕಾರ್ಹ. ರಾಜ್ಯ ಕೇಂದ್ರದ ಸಂಬಂಧಗಳು ಸಂವಿಧಾನದ ಹಾಗೂ ಆಯೋಗಗಳ ಅಭಿಪ್ರಾಯಕ್ಕೆ ಅರ್ಥವಾದರೂ ಏನಿದೆ?

ಆದರೆ ಇತ್ತ ಕಡೆ ಇವೆಲ್ಲವನ್ನು ಮರೆ ಮಾಚಿಸಲು ಬಿಜೆಪಿ-ಸಂಘಪರಿವಾರ ಹೊರಟಿದೆ. ಶಿಕ್ಷಣದ ಶುಲ್ಕಗಳು ದುಬಾರಿಯೆಂದು ರಾಜ್ಯ ಸರ್ಕಾರವನ್ನು ಟೀಕಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ರಾಜ್ಯದ ರಾಜಧಾನಿಯಲ್ಲಿ ಬೊಬ್ಬೆ ಹೊಡೆದು ರ್‍ಯಾಲಿ ನಡೆಸಿತು. ಮಗುವನ್ನು ಚಿವುಟಿ, ತೊಟ್ಟಿಲನ್ನು ತೂಗುವ ಬಿಜೆಪಿ-ಸಂಘ ಪರಿವಾರದ ವೈಖರಿ ತಿಳಿದಿದ್ದೆ ಆಗಿದೆ.

ಪ್ರಯಾಣ ದರ ಹೆಚ್ಚಿಸಲು ಇಷ್ಟೇಕೆ ಆತುರ?

ವಾಜಪೇಯಿಯವರು ವಾಷಿಂಗ್ಟನ್ ವಾಸಿಗಳಾಗಿರುವಾಗಲೇ ಕೇಂದ್ರ ಸರ್ಕಾರದ ಇಂಧನ ಸಚಿವರು ಪೆಟ್ರೋಲ್, ಡೀಸೆಲ್ ಬೆಲೆ ಏರಿಸುವ ಇಂಗಿತ ವ್ಯಕ್ತಪಡಿಸಿದರು. ಮತ್ತೆ ಯಥಾ ರೀತಿ ಅಂತರ್ರಾಷ್ಟ್ರೀಯ ಮಾರುಕಟ್ಟೆಯ ಮೇಲೆ ನೆಪ ಹೂಡಿದರು. ಇದಕ್ಕಾಗಿ ಕಾದಿದ್ದರೋ ಎಂಬಂತೆ ಕರ್ನಾಟಕದ ಸಾರಿಗೆ ಸಚಿವ ಸಗೀರ್ ಅಹ್ಮದ್ ಒಂದಲ್ಲ, ನಾಲ್ಕು ಬಾರಿ ಬಸ್ ಪ್ರಯಾಣದ ದರಗಳನ್ನು ಏರಿಸಿಯೇ ಬಿಡಲಾಗುವುದು ಎಂದು ಸಾರಿದರು. ಜನರ ಜೇಬಿಗೆ ಕತ್ತರಿ ಹಾಕಲು ಎಷ್ಟೊಂದು ಆತುರ!

ಕೇಂದ್ರ ಸಚಿವರು ಡೀಸೆಲ್ ಬೆಲೆ ಏರಿಕೆ ಮಾಡಲಾಗುವುದು ಎಂದಾಗ ರಾಜ್ಯ ಸರ್ಕಾರ ಪ್ರತಿಭಟಿಸಬೇಕಿತ್ತು. ಮತ್ತು ಡೀಸೆಲ್ ದರಗಳ ಮಟ್ಟ ಕಾಯ್ದುಕೊಳ್ಳಲು ಸಹಾಯಧನ ನೀಡಿಕೆಗೆ ಆಗ್ರಹಿಸಬೇಕಿತ್ತು. ಕೇಂದ್ರಸರ್ಕಾರದ ಕ್ರಮ ಹಾಗೂ ರಾಜ್ಯ ಸರ್ಕಾರದ ಆತುರ ಖಂಡನಾರ್ಹ.

ಜನಸಾಮಾನ್ಯರನ್ನು ದೋಚುವ ರೈಲ್ವೆ ಕಂಪನಿ

ಕರ್ನಾಟಕದಲ್ಲಿನ ರೈಲ್ವೆ ಅಭಿವೃದ್ಧಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸೇರಿ ರೈಲು ಮೂಲ ಸೌಲಭ್ಯ ಅಭಿವೃದ್ಧಿ ನಿಗಮ(ಕರ್ನಾಟಕ)ಎಂಬ ಒಂದು ಹೊಸ ಕಂಪನಿಯನ್ನು ಸ್ಥಾಪಿಸಲು ನಿರ್ಧರಿಸಿದೆ. ಮಂಗಳೂರು-ಬೆಂಗಳೂರು, ಸೋಲಾಪುರ-ಗದಗ, ಗುಂತಕಲ್-ಹೊಸಪೇಟೆ, ಅಂಕೋಲಾ-ಹುಬ್ಬಳ್ಳಿ ಮಾರ್ಗಗಳ ರೂಪಿತ ಯೋಜನೆಗಳ ಅನುಷ್ಠಾನವನ್ನು ಕೈಗೆತ್ತಿಕೊಳ್ಳಲಿವೆ. ಈ ಯೋಜನೆಗಳಿಗೆ 1639 ಕೋಟಿ ಅಗತ್ಯವಿದೆಯೆಂದು ಅಂದಾಜಿದೆ.

ಈ ಹೊಸ ಕಂಪನಿಯಲ್ಲಿ ಎರಡೂ ಸರ್ಕಾರಗಳೂ ತಲಾ ಶೇ 26(ಒಟ್ಟು ಶೇ 52) ರಷ್ಟು ಪಾಲು ಬಂಡವಾಳ ಹೂಡುವುದು, ಉಳಿದ ಶೇ 48 ರಷ್ಟು ಮೊತ್ತವನ್ನು ಇತರೆ ಬ್ಯಾಂಕ್ ಹಾಗೂ ಹಣಕಾಸು ಸಂಸ್ಥೆಗಳಿಂದ ಪಡೆಯಲು ನಿರ್ಧರಿಸಿವೆ. ಅಂದರೆ ಬಹಳ ಗಣನೀಯವಾದ ಮೊತ್ತವನ್ನು ಬಾಂಡ್‌ಗಳೂ ಸೇರಿದಂತೆ ಹೊರಗಿನಿಂದ ಸಾಲಎತ್ತುವುದು. ಸಹಜವಾಗಿಯೇ ಎತ್ತಿದ ಸಾಲಕ್ಕೆ ಬಡ್ಡಿ ನೀಡಬೇಕಾಗುವುದು, ಇದು ಸುಲಭದ ಬಡ್ಡಿಯಲ್ಲ, ಬಂಡವಾಳಿಗಾರರನ್ನು ಆಕರ್ಷಿಸಲು ವಿಪರೀತ ಹೆಚ್ಚಳದ ಬಡ್ಡಿಗಳನ್ನೇ ತೆರಬೇಕಾಗುತ್ತದೆ ಎಂಬುದು ನಮ್ಮೆಲ್ಲರ ಅನುಭವ. ಅಂತಿಮವಾಗಿ ಬಡ್ಡಿ ನೀಡಿಕೆ, ಸಾಲ ಮರುಪಾವತಿ, ನಿಭಾವಣಾ ವೆಚ್ಚವೂ ಸೇರಿಕೊಂಡು ಇದರ ಸಂಪೂರ್ಣ ಹೊರೆಯನ್ನು ಸಾಮಾನ್ಯ ಜನರೇ ಭರಿಸಬೇಕಾಗುತ್ತದೆ. ಹೀಗಾಗಿ ರೈಲ್ವೆ ಪ್ರಯಾಣ ಅತ್ಯಂತ ದುಬಾರಿಯಾಗಲಿದೆ. ಈ ಸಂಕಷ್ಟಗಳನ್ನು ಹೇರುವ ಇದನ್ನು ವಿರೋಧಿಸಬೇಕಿದೆ.

ಉದಾರೀಕರಣದಲ್ಲಿ ಉಣ್ಣಬಯಸುವವರು

ಕೃಷ್ಣರವರು ಹೈಟೆಕ್ ಆಡಳಿತದ ಬಿರುದು ಉಳಿಸಿಕೊಳ್ಳಲೋ ಎಂಬಂತೆ ರಾಜ್ಯದ ವಿವಿಧ ಜಿಲ್ಲೆಗಳ ಯುವಜನರಿಗೆ ಕಂಪ್ಯೂಟರ್ ತರಬೇತಿ ನೀಡಲು, ಉದ್ಭವಿಸಿರುವ ಹೊಸ ಸ್ಕೀಂ 'ಯುವ ಡಾಟ್ ಕಾಮ್'. ಪ್ರತಿಯೊಬ್ಬರಿಗೆ ತರಬೇತಿ ನೀಡಲು ರೂ. 28.000 ವೆಚ್ಚ ಮಾಡಲಾಗುವುದಂತೆ. ಇದಕ್ಕಾಗಿ 10 ಕೋಟಿ 94 ಲಕ್ಷ ಮೀಸಲಿಡಲಾಗಿದೆ.

ವಿಶೇಷವೆಂದರೆ ಈ ತರಬೇತಿಯನ್ನು ನೀಡಲು ಅಪ್‌ಟೆಕ್, NIIT, SSI ಯಂತಹ ಖಾಸಗಿ ಸಂಸ್ಥೆಗಳಿಗೆ ವಹಿಸಿರುವುದು ಇದೇ ತರಬೇತಿಯನ್ನು ಸರ್ಕಾರದ ಸ್ವಾಮ್ಯದ 'ಕಿಯೋನಿಕ್ಸ್' ಗೆ ವಹಿಸಿದ್ದಲ್ಲಿ ಕಡಿಮೆ ಖರ್ಚಿನಲ್ಲಿ ತರಬೇತಿಯಲ್ಲದೆ, ಆ ಸಂಸ್ಥೆಯೂ ಬದುಕಲು ಸಾಧ್ಯವಾಗುತ್ತಿತ್ತು ಎಂಬುದು.

ಉದಾರೀಕರಣದ ಹಾವಳಿಯ ಸರಣಿಯ ಈ ಖಾಸಗೀ ಕಂಪನಿಗಳಿಗೆ ವಹಿಸುವುದರಲ್ಲಿ ಭ್ರಷ್ಟಾಚಾರ ನಡೆದಿದೆಯೆಂದು ಆರೋಪಿಸಲಾಗಿದೆ. ಖಾಸಗೀಕರಣ, ಉದಾರೀಕರಣ ಪ್ರಕ್ರಿಯೆಯಲ್ಲಿ ಹಣ ನುಂಗಲು ಸಣ್ಣದು, ದೊಡ್ಡದು ಎಂಬು ಭೇದವೇನಿಲ್ಲ ಎಂದು ಈ ವ್ಯವಹಾರ ತೋರಿಸುತ್ತದೆ.


ಹೊಣಗೇಡಿ ಶಾಸಕನ ಅಪಹರಣ ಪ್ರಸಂಗ!

ಭದ್ರಾವತಿಯ ಶಾಸಕ ಅಪ್ಪಾಜಿಗೌಡರನ್ನು ಅಪಹರಿಸಲಾಗಿದೆಯೆಂದು ಇದ್ದಕ್ಕಿದ್ದಂತೆಯೇ ಭದ್ರಾವತಿಬಂದ್‌ಗೆ ಕರೆ ನೀಡಿದ್ದು, ಸಾರ್ವಜನಿಕರಿಗೆ ತೊಂದರೆ ಸೃಷ್ಟಿಸಿದ್ದು, ನಂತರದಲ್ಲಿ 'ನಾನಿಲ್ಲೇ ಮೈಸೂರಿನಲ್ಲೇ ಇದ್ದೇನೆ ಮಹರಾಯ' ಎಂದು ಶಾಸಕರು ಹೇಳಿದ್ದು, ನಂತರ ಬೆಂಬಲಿಗರು ಜೈಕಾರ ಹಾಕಿ, ಗೌಡರು ಬಹುಕಾಲ ಬದುಕಲಿ ಎಂದು ಆಶೀರ್ವದಿಸಿದ್ದು ಒಂದು ವಿಚಿತ್ರ ಒಳಸುಳಿಗಳನ್ನು ಹೊರಡಿಸಿದೆ.

ಜನತೆಗೆ ಬಾಧ್ಯನಾಗಿ ತುಂಬಾ ಮಹತ್ವದ ಹೊಣೆ ಇರುವ ಒಬ್ಬ ಶಾಸಕ, ಮನೆಯಲ್ಲಿಯೂ ಹೇಳದೆ ಕೇಳದೇ ಒಂದು ವಾರ ಕಾಣೆಯಾಗಿರುವುದು ಎಂದರೆ ಏನರ್ಥ? ಇವರು ಅಪಹರಣಕ್ಕೊಳಗಾಗುವಂತಹ ವ್ಯವಹಾರಗಳಾದರೂ ಏನು? ಹೇಳದೇ ಕೇಳದೇ ಒಂದು ವಾರ ಅವಿತು ಕುಳಿತಿದ್ದಾದರೂ ಏಕೆ? ಇದು ಬೇಜವಾಬ್ದಾರಿತನದ ಪರಮಾವಧಿ.

ಈ ಶಾಸಕರು ಮೂರು 'ಮ'ಗಳ(ಎಂದರೆ ಮದಿರೆ, ಮದ....) ವ್ಯಾಮೋಹಿಗಳೆಂದೂ, ಇಸ್ಪೀಟ್ ಆಡುತ್ತಾ ಕಾಲ ಕಳೆದಿದ್ದಾರೆಂದು ಪತ್ರಿಕೆಗಳು ಪತ್ತೆ ಹಚ್ಚಿವೆ. ಇಂತಹ ಹೊಣೆಗೇಡಿ ಶಾಸಕರು ಸಾರ್ವಜನಿಕವಾಗಿ ಛೀಮಾರಿ ಹಾಕಿಸಿಕೊಳ್ಳಲು ಯೋಗ್ಯರು. ○

ಸೆಪ್ಟೆಂಬರ್ 14-15 ರಂದು ಶಿಡ್ಲಘಟ್ಟದಲ್ಲಿ ನಡೆದ ಎಐಕೆಎಸ್‌ನ 13ನೇ ಕೋಲಾರ ಜಿಲ್ಲಾ ಸಮ್ಮೇಳನದ ಸಂದರ್ಭದಲ್ಲಿ ನಡೆದ ಮೆರವಣಿಗೆಯ ದೃಶ್ಯ



ಮುಕ್ತ ಆಮದು ನೀತಿಯ ವಿರುದ್ಧ ಸಮರ-ರೈತರ ರಣನೀತಿಯ ಘೋಷಣೆ

"ಕರ್ನಾಟಕದ ರೈತರು ಆತ್ಮಹತ್ಯೆಯ ದಾರಿಯನ್ನು ಬಿಟ್ಟು ಕೇಂದ್ರ ಸರ್ಕಾರದ ಮುಕ್ತ ಆಮದು ನೀತಿಯ ವಿರುದ್ಧ ಸಮರದ ದಾರಿಯನ್ನು ಹಿಡಿಯಬೇಕು" ಎಂದು ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಕಾಂ. ಕೆ.ವರದರಾಜನ್ ಹೇಳಿದರು. ಅವರು ಕಲ್ಬುರ್ಗಿ ಸೂಪರ್ ಮಾರ್ಕೆಟ್ ಮೈದಾನದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ



12ನೇ ರಾಜ್ಯಸಮ್ಮೇಳನದ ಅಂಗವಾಗಿ ಏರ್ಪಡಿಸಲಾಗಿದ್ದ ಬೃಹತ್ ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

"ಬಳ್ಳಾರಿ ಜಿಲ್ಲೆಯ ಕುರುಗೋಡು ಗ್ರಾಮದ ಚಂದ್ರಪ್ಪ ಸಿಂಧವಾಳ ಎಂಬ 45 ವರ್ಷದ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂಬ ವರದಿಯನ್ನು ಪತ್ರಿಕೆಯಲ್ಲಿ ನಾನು ಇಂದು ಓದಿದೆ" ಎಂದು ತಮ್ಮ ಉದ್ಘಾಟನಾ ಭಾಷಣವನ್ನು ಆರಂಭವಾದ ಕಾಂ. ವರದರಾಜನ್ ಅವರು ಕಳೆದ ಒಂದೆರಡು ವರ್ಷಗಳಲ್ಲಿ 500 ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರೂ ಕೇಂದ್ರದಲ್ಲಿ ಪ್ರಧಾನಿಯಾಗಿರುವ ವಾಜಪೇಯಿಯವರ ಅಥವಾ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿರುವ ಕೃಷ್ಣಾರವರ ಕಣ್ಣುಗಳನ್ನು ಮಾತ್ರ ತೆರೆಯಿಸಲಿಲ್ಲ ಎಂದು ಖೇದ ವ್ಯಕ್ತಪಡಿಸಿದರು.

ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಕ್ಕೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಮುಕ್ತ ಆಮದು ನೀತಿಯೇ ಕಾರಣವೆಂದು ನೇರವಾಗಿ ಆರೋಪಿಸಿದ ಅವರು ನಮ್ಮ ದೇಶದ ರೈತ ಎಲ್ಲಾ ವಿಧದ ಆಹಾರ ಧಾನ್ಯಗಳನ್ನು ಮತ್ತಿತರ ಕೃಷಿ ಉತ್ಪನ್ನಗಳನ್ನು ಬೆಳೆಯುತ್ತಿರುವಾಗ ಇವುಗಳನ್ನೇ ಸರ್ಕಾರ ವಿದೇಶಗಳಿಂದ ಮುಕ್ತವಾಗಿ ಆಮದು ಮಾಡಿಕೊಳ್ಳುವುದರಿಂದ, ಅವುಗಳಿಗೆ ಸುಂಕ ರಿಯಾಯಿತಿಗಳನ್ನು ನೀಡಿ ದೇಶದ ಆಂತರಿಕ ಮಾರುಕಟ್ಟೆಗೆ ಪ್ರವೇಶಿಸಲು ಬಿಡುವುದರಿಂದ ದೇಶೀಯ ಕೃಷಿ ಉತ್ಪನ್ನಗಳಿಗೆ ಬೆಲೆ ಇಲ್ಲದಂತಾಗಿ, ರೈತರು ದಿವಾಳಿಯಾಗುತ್ತಿದ್ದಾರೆ. ಹಾಕಿದ ಬಂಡವಾಳ ಹಿಂತಿರುಗದಂತಾಗಿ, ಮಾಡಿದ ಸಾಲ ತೀರಸಲಾಗದೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದರು.

ನಮ್ಮ ಗೋದಾಮುಗಳಲ್ಲಿ 207 ಲಕ್ಷ ಟನ್ ಸಕ್ಕರೆ ಕೊಳೆಯುತ್ತಿದ್ದರೂ, ವಿದೇಶದಿಂದ ಮತ್ತೆ 21 ಲಕ್ಷ ಟನ್ ಸಕ್ಕರೆಯನ್ನು ಕೇಂದ್ರ ಸರ್ಕಾರ ಆಮದು ಮಾಡಿದೆ ಎಂದು ಸಕ್ಕರೆ ಕಾರ್ಖಾನೆಗಳ ಮಾಲೀಕರು

ಇದರಿಂದ ನಮ್ಮ ಕಬ್ಬುಬೆಳೆಗಾರರು ಹಾನಿಗೊಳಗಾಗಿದ್ದಾರೆ. ಖಾಸಗಿ ಹಾಗೂ ಸಹಕಾರಿ ಸಕ್ಕರೆ ಕಾರ್ಖಾನೆಗಳು ರೈತರಿಗೆ ಸಾವಿರಾರು ಕೋಟಿ ರೂ. ಬಾಕಿ ನೀಡಬೇಕಾಗಿದೆ. ಈ ಬಗ್ಗೆ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಚಹಾ, ಕಾಫಿ, ಅಡಿಕೆ, ತೆಂಗು, ಶೇಂಗಾ, ಸೂರ್ಯಕಾಂತಿ, ರಬ್ಬರ್, ಗೋಧಿ, ಭತ್ತ ಮತ್ತು ಹೈನು ಉತ್ಪನ್ನಗಳನ್ನು ಸಹ ಆಮದು ಮಾಡಿಕೊಳ್ಳಲಾಗುತ್ತಿರುವುದರಿಂದ ನಮ್ಮ ಇಡೀ ಕೃಷಿ ರಂಗವೇ ವಿನಾಶದ ಅಂಚಿಗೆ ತಲುಪಿದೆ.

ಕೇಂದ್ರ ಸರ್ಕಾರವು ವಿಶ್ವ ವ್ಯಾಪಾರ ಸಂಘಟನೆ ಹಾಗೂ ಬಹುರಾಷ್ಟ್ರೀಯ ಕಂಪನಿಗಳಿಗೆ ಶರಣಾಗಿ ದೇಶದ ಕೃಷಿ, ಕೈಗಾರಿಕೆಗಳ ಹಿತವನ್ನು ಕೈಬಿಟ್ಟಿದೆ. ಇದನ್ನು ಸಹಿಸಿಕೊಂಡು ಸುಮ್ಮನಿರಲು ಸಾಧ್ಯವಿಲ್ಲ. ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ನಡೆಸಿದ ಹೋರಾಟದ ಮಾದರಿಯಲ್ಲಿ ಇದೀಗ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ರೈತರು, ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿಗಳು ಹಾಗೂ ಯುವಜನರು ಸಂಘರ್ಷಕ್ಕೆ ಮುಂದಾಗಬೇಕು ಎಂದು ಕಾಮ್ರೇಡ್ ವರದರಾಜನ್ ಅವರು ಕಿಕ್ಕಿರಿದು ನೆರೆದಿದ್ದ ಜನಸ್ತೋಮವನ್ನು ಉದ್ದೇಶಿಸಿ ಮಾತನಾಡಿದರು.

ಮುಖ್ಯ ಅತಿಥಿಯಾಗಿ ಸಭೆಯಲ್ಲಿ ಭಾಗವಹಿಸಿದ್ದ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಜಂಟಿ ಕಾರ್ಯದರ್ಶಿ ಸುನಿತ್ ಛೋಪ್ರಾ ಅವರು ಮಾತನಾಡುತ್ತಾ ದೇಶದ ಹಸಿವನ್ನು ಹಿಂಗಿಸಲು ಆಹಾರ ಧಾನ್ಯಗಳನ್ನು ಬೆಳೆಯುತ್ತಿರುವ ರೈತನೇ ಇಂದು ಹಸಿದವನಾಗಿರುವುದು ದೊಡ್ಡ ದುರಂತ ಎಂದು ಬಣ್ಣಿಸಿದರು. ಹಿಂದೆ ನಿಜಾಮಶಾಹಿ ದಬ್ಬಾಳಿಕೆಯ ವಿರುದ್ಧ ರಜಾಕರ ಹಾವಳಿಯ ವಿರುದ್ಧ ಈ ಪ್ರದೇಶದ ಜನ ದಿಟ್ಟ ಹೋರಾಟ ಮಾಡಿದ್ದನ್ನು ಸ್ಮರಿಸಿದ ಅವರು ಇಂದು ನಮ್ಮ ವೈರಿಗಳು ನಮ್ಮ ನಡುವೆಯೇ ಇದ್ದಾರೆ, ಸಾಮ್ರಾಜ್ಯಶಾಹಿಗಳೊಂದಿಗೆ ಕೂಡಿಕೊಂಡು ನಮ್ಮ ಸುಲಿಗೆ ಮಾಡುತ್ತಿದ್ದಾರೆ. ರೈತರನ್ನು ಕೊಲ್ಲುತ್ತಿರುವ ಕೇಂದ್ರ ಸರ್ಕಾರದ ಕೃಷಿ ನೀತಿ, ಮುಕ್ತ ಆಮದು ನೀತಿ ಮತ್ತು ಉದಾರೀಕರಣ ನೀತಿಗಳ ವಿರುದ್ಧ ಕರ್ನಾಟಕ ರೈತರ ಈ ಸಮ್ಮೇಳನದಲ್ಲಿ ಒಂದು ರಣನೀತಿ ಸಿದ್ಧಪಡಿಸಬೇಕು ಎಂದು ಹೇಳಿದರು.

ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 27 ರಷ್ಟು ಜನ-ಕೃಷಿಕೂಲಿಕಾರರಾಗಿದ್ದು ಅವರ ಸಂಖ್ಯೆ ಇನ್ನೂ ಬೆಳೆಯುತ್ತಿದೆ. ಸಣ್ಣ ಸಣ್ಣ ರೈತರು ಭೂಮಿ

ಹಾಗೂ ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ನೀತಿಗಳಿಂದಾಗಿ ಕೃಷಿಕೂಲಿಕಾರರೂ ತುತ್ತು ಕೂಳಿಗೂ ಪರದಾಡುವಂತಾಗಿದೆ. ಜಾಗತೀಕರಣದ ನೀತಿಗಳನ್ನು ಬೆಂಬಲಿಸುವ ವಾಜಪೇಯಿ ಸರ್ಕಾರವು ಜಾಗತಿಕ ಮಟ್ಟದಲ್ಲಿ ಕಾರ್ಮಿಕರು, ಕೂಲಿಕಾರರು ಪಡೆಯುವ ಸೌಲಭ್ಯಗಳನ್ನು ಭಾರತದ ಕೂಲಿಕಾರರಿಗೆ ಏಕೆ ಒದಗಿಸಬಾರದು ಎಂದು ಕಾಮ್ರೇಡ್ ಛೋಪ್ರಾ ಪ್ರಶ್ನಿಸಿದರು.

ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ಸೂರ್ಯನಾರಾಯಣ ರಾವ್ ಅವರು ಮಾತನಾಡುತ್ತಾ ಸ್ವಾತಂತ್ರ್ಯ ಹೋರಾಟದ ಆಶಯಗಳಾದ ಉಳುವವನಿಗೆ ಭೂಮಿ, ಎಲ್ಲರಿಗೂ ಉದ್ಯೋಗ, ಎಲ್ಲರಿಗೂ ಶಿಕ್ಷಣ ಎಂಬ ಆಶಯಗಳು ಇನ್ನೂ ಈಡೇರಲಿಲ್ಲ ಎಂದು ವಿಷಾದಿಸಿದರು. ಸ್ವಾತಂತ್ರ್ಯ ನಂತರ ಕೇವಲ ಬಂಡವಾಳಗಾರರಿಗೆ ಮತ್ತು ಜಮೀನ್ದಾರರಿಗೆ ಅನುಕೂಲವಾಗಿದೆ. ಕಮ್ಯುನಿಸ್ಟ್ ಆಡಳಿತವಿರುವ ರಾಜ್ಯಗಳನ್ನು ಬಿಟ್ಟರೆ, ಬೇರೆ ಎಲ್ಲಿಯೂ ಭೂಸುಧಾರಣೆಗಳು ಪರಿಣಾಮಕಾರಿಯಾಗಿ ಜಾರಿಯಾಗಿಲ್ಲ. ಪಶ್ಚಿಮ ಬಂಗಾಳದಲ್ಲಿ ಸಾಧಿಸಲಾದ ಭೂಸುಧಾರಣಾ ಸಾಧನೆಗಳನ್ನು ನಾಶ ಮಾಡಲು ಬಿಜೆಪಿ ಪ್ರಯತ್ನ ಪಡುತ್ತಿದೆ. ಬಿಜೆಪಿ ಬೆಂಬಲದೊಂದಿಗೆ ಮಮತಾ ಬ್ಯಾನರ್ಜಿ ಮಾಜಿ ಜಮೀನ್ದಾರರನ್ನು ಕಟ್ಟಿಕೊಂಡು ರಾಜ್ಯದಲ್ಲಿ ಹಿಂಸಾಚಾರ ವನ್ನು ಹಬ್ಬಿಸುತ್ತಿದ್ದಾರೆ. ಭೂಸುಧಾರಣೆಯ ಅಡಿಯಲ್ಲಿ ಭೂಮಿಯನ್ನು ಪಡೆದುಕೊಂಡವರನ್ನು ಬಲವಂತವಾಗಿ ಓಡಿಸುವ ಪ್ರಯತ್ನ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರ ಪಶ್ಚಿಮ ಬಂಗಾಳದಲ್ಲಿ ಏನಾದರೂ ಪ್ರಜಾಪ್ರಭುತ್ವ ವಿರೋಧಿ ಹಸ್ತಕ್ಷೇಪ ಮಾಡಿದರೆ ಅದನ್ನು ಕರ್ನಾಟಕದಲ್ಲಿಯೂ ತೀವ್ರವಾಗಿ ವಿರೋಧಿಸಲಾಗುವುದು ಎಂದರು.

ವರದಿ: ನಿತ್ಯಾನಂದ ಸ್ವಾಮಿ

ವಿದ್ಯುತ್ ದರಗಳ ಹೆಚ್ಚಳದ ವಿರುದ್ಧ ಚಳುವಳಿ ನಡೆಸುತ್ತಿದ್ದ ಎಡ ಸಂಘಟನೆಗಳ ಕಾರ್ಯಕರ್ತರ ಮೇಲೆ ಆಂಧ್ರಪ್ರದೇಶದ ತೆಲುಗುದೇಶಂ ಸರ್ಕಾರ ನಡೆಸಿದ ದೌರ್ಜನ್ಯವನ್ನು ಕಟುವಾಗಿ ಟೀಕಿಸಿದ ಕಾಮ್ರೇಡ್ ಸೂರಿಯವರು ಕೇಂದ್ರದ ವಿದ್ಯುತ್ ನೀತಿಗೆ ಅನುಗುಣವಾಗಿ ಕರ್ನಾಟಕದಲ್ಲಿಯೂ ವಿದ್ಯುತ್ ಖಾಸಗೀಕರಣ ಹಾಗೂ ದರ ಏರಿಕೆ ಮಾಡಲು ಹೊರಟಿರುವ ಕೃಷ್ಣ ಸರ್ಕಾರದ ವಿರುದ್ಧವೂ ಆಂಧ್ರ ಮಾದರಿಯಲ್ಲಿ ತೀವ್ರ ಚಳುವಳಿ ನಡೆಸಬೇಕಾಗುವುದು ಎಂದು ಹೇಳಿದರು.

ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಎನ್.ನಾಗರಾಜ ಅವರು ಮಾತನಾಡಿ ಕೇಂದ್ರ ಸರ್ಕಾರದ ಉದಾರೀಕೃತ ಆಮದು ನೀತಿಯ ವಿರುದ್ಧ ರಾಜ್ಯದಲ್ಲಿ ನರಗುಂದ-ನವಲಗುಂದ ಬಂಡಾಯದ ಮಾದರಿಯಲ್ಲಿ ಮತ್ತೊಂದು ಚಳುವಳಿ ನಡೆಯಬೇಕಾಗಿದೆ ಎಂದರು. ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಜಗನ್ನಾಥ್, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ.ನೀಲಾ ಈ ಸಂದರ್ಭದಲ್ಲಿ ಮಾತನಾಡಿದರು. ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷ ಕಾಮ್ರೇಡ್ ಮಾರುತಿ ಮಾನ್ಪಡೆ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರು, ರಾಜ್ಯ ಲಲಿತ ಕಲಾ ಅಕಾಡೆಮಿಯ ಅಧ್ಯಕ್ಷರೂ ಆಗಿರುವ ಪ್ರೊ. ಪಿ.ಜಿ.ಅಂದಾನಿ ಅವರು ಸ್ವಾಗತಿಸಿದರು.

ಇದಕ್ಕೂ ಮೊದಲು ರಾಜ್ಯ ವಿವಿಧ ಜಿಲ್ಲೆಗಳಿಂದ ಮುಖ್ಯವಾಗಿ ಬೀದರ್, ಗುಲ್ಬರ್ಗ, ಬಿಜಾಪುರ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಿಂದ ಬಂದಿದ್ದ ಸಾವಿರಾರು ರೈತರು ಹಾಗೂ ರೈತ ಮಹಿಳೆಯರು ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು. ಅಖಿಲ ಭಾರತ ಕಿಸಾನ್ ಸಭಾದ ಮುಖಂಡರಾಗಿದ್ದ ಕಾಮ್ರೇಡ್ ಹರಿಕಿಶನ್ ಸಿಂಗ್ ಸುರ್ಜಿತ್, ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾಗಿದ್ದ ದಿವಂಗತ ಕಾಮ್ರೇಡ್ ಪಿ.ರಾಮಚಂದ್ರರಾವ್ ಮೊದಲಾದವರ ಬೃಹತ್ ಚಿತ್ರಗಳನ್ನು ಮೆರವಣಿಗೆಯ ಮುಂದೆ ಕೊಂಡೊಯ್ಯುವುದು ಎಲ್ಲರ ಗಮನವನ್ನು ಸೆಳೆಯುತ್ತಿತ್ತು. ಹಿಂದಿನ ರಾತ್ರಿ ಇಡೀ ಸುರಿದ ಮಳೆ ಮೆರವಣಿಗೆ ಆರಂಭವಾಗುತ್ತಿದ್ದಂತೆ ಸುಮ್ಮನಾಗಿ ಬಹಿರಂಗ ಸಭೆ ಅಡಚಣೆಯಾಗದೆ ನಡೆಯಲು ಅವಕಾಶ ಮಾಡಿಕೊಟ್ಟಿತು.

ಭಿನೋಯ್ ಕೃಷ್ಣ ಚೌಧರಿ ನಗರದ ಪಿ. ರಾಮಚಂದ್ರರಾವ್ ವೇದಿಕೆಯಲ್ಲಿ

ಸಮ್ಮೇಳನದ ಕಲಾಪಗಳು ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಕಾಮ್ರೇಡ್ ಮಾರುತಿ ಮಾನ್ಪಡೆ ಅವರು ಎಐಕೆಎಸ್‌ನ ಧ್ವಜಾರೋಹಣ ಮಾಡುವುದರೊಂದಿಗೆ ಆರಂಭ ವಾದವು. ಕಾಮ್ರೇಡ್ ಜಿ.ಸಿ.ಬಯ್ಯಾ ರೆಡ್ಡಿ ಅವರು ಶ್ರದ್ಧಾಂಜಲಿ ನಿರ್ಣಯವನ್ನು ಮಂಡಿಸಿದರು. ಕಳೆದ ಐದು ವರ್ಷಗಳಲ್ಲಿ ನಮ್ಮನ್ನು ಅಗಲಿದ ಹಿರಿಯ ಕಾಮ್ರೇಡ್ ಗೋದಾವರಿ ಪರುಳೇಕರ್, ಕಾಮ್ರೇಡ್ ವಿಮಲರಣದಿವೆ, ಕಾಮ್ರೇಡ್ ಬಿನೋಯ್ ಕೃಷ್ಣ ಚೌಧರಿ, ಕಾಮ್ರೇಡ್ ಪಿ.ರಾಮಚಂದ್ರರಾವ್, ಕಾಂ. ಜನಾರ್ಧನ್ ನಾಯಕ್ ಹಾಗೂ ಕಾಮ್ರೇಡ್ ಚೆನ್ನಪ್ಪ ಅವರುಗಳಿಗೆ ಅಧಿವೇಶನ ಎರಡು ನಿಮಿಷಗಳ ಮೌನ ಆಚರಿಸಿ ಶ್ರದ್ಧಾಂಜಲಿ ಸಲ್ಲಿಸಿತು.


ಅನಂತರ ಅಧಿವೇಶನವನ್ನು ಮರುದಿನ ಬೆಳಿಗ್ಗೆ 9.30 ಕ್ಕೆ ಮುಂದೂಡಲಾಯಿತು.

ಸೆಪ್ಟೆಂಬರ್ 19 ರಂದು ಬೆಳಿಗ್ಗೆ 9.30 ಕ್ಕೆ ಕಾಮ್ರೇಡ್ ಮಾರುತಿ ಮಾನ್ಪಡೆ, ಭೀಮಸಿ ಕಲಾದಗಿ, ಅಬ್ರಾಹಂ ಕರ್ಕಡ, ಕೆ.ಎಂ.ವೆಂಕಟೇಶ ಅವರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿಯನ್ನು ಆಯ್ಕೆ ಮಾಡುವ ಮೂಲಕ ಅಧಿವೇಶನ ಆರಂಭವಾಯಿತು. ಕಾಮ್ರೇಡ್ ಯು.ಬಸವರಾಜ ಅವರ ಸಂಚಾಲಕತ್ವದ ನಿರ್ಣಯ ಸಮಿತಿಯನ್ನು ಕಾಮ್ರೇಡ್ ಅಣ್ಣಾರಾಯ ಈಳಿಗೇರ ಅವರ ಸಂಚಾಲಕತ್ವದ ಪರಿಚಯ ಪತ್ರ ಪರಿಶೀಲನಾ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಪ್ರತಿನಿಧಿಗಳ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿದ ಕಾಮ್ರೇಡ್ ಕೆ.ವರದರಾಜನ್ ಅವರು ಕಳೆದ 10 ವರ್ಷಗಳ ಜಾಗತೀಕರಣ, ಉದಾರೀಕರಣದ ಅನುಷ್ಠಾನದ ನಂತರ ಈಗ


ಪುಟ 9 ಕ್ಕೆ

ಹೊಸ ಪದಾಧಿಕಾರಿಗಳು




ಮಾರುತಿ ಮಾನ್ಪಡೆ

ಅಧ್ಯಕ್ಷರು:	ಮಾರುತಿ ಮಾನ್ಪಡೆ
ಉಪಾಧ್ಯಕ್ಷರು	ಪಿ.ಜಗನ್ನಾಥ್
	ಭೀಮಸಿ ಕಲಾದಗಿ
	ಕೆ.ಎಂ.ವೆಂಕಟೇಶ್
ಪ್ರ.ಕಾರ್ಯದರ್ಶಿ	ಜಿ.ಸಿ.ಬಯ್ಯಾರೆಡ್ಡಿ
ಖಜಾಂಚಿ	ಅಬ್ರಾಹಂ ಕರ್ಕಡ
ಕಾರ್ಯದರ್ಶಿ:	ಯು.ಬಸವರಾಜು
	ರಾಮಚಂದ್ರ ಉಬ್ಚಿಲ್
	ಚೆನ್ನಪ್ಪ ಆನೆಗುಂದಿ
	ವೆಂಕಟಾಚಲಯ್ಯ



ಜಿ.ಸಿ.ಬಯ್ಯಾರೆಡ್ಡಿ



ಸತ್ಯವಾದ ಸ್ವಯಂ ಸೇವಕ ಭಾಷಣ

ವಾಜಪೇಯಿಯವರ ಅಮೆರಿಕಾ ಪ್ರವಾಸದ ಕಾರ್ಯಕ್ರಮಗಳಲ್ಲೆಲ್ಲ ಮಹತ್ತರವಾದ ರಾಜಕೀಯ ಘಟನೆ ಸೆಪ್ಟೆಂಬರ್ 10 ರಂದು ನ್ಯೂಯಾರ್ಕ್ ಹತ್ತಿರದ ಸ್ಟೇಟನ್ ಐಲ್ಯಾಂಡ್ ಎಂಬಲ್ಲಿ ಜರುಗಿತು. ಈ ಸಭೆಯನ್ನು ಸಾಗರದಾಚೆಯ, ಬಿಜೆಪಿ ಹಾಗೂ ವಿಶ್ವಹಿಂದು ಪರಿಷತ್ ಸಂಘಟಿಸಿತ್ತು. ಈ ಕಾರ್ಯಕ್ರಮದಲ್ಲಿ ಭಾರತೀಯ ಮೂಲದ 3000 ಜನರ ಭಾಗವಹಿಸಿದ್ದರು.

ಸಾಗರದಾಚೆಯ ಗೆಳೆಯರು ಭಾರತದ ಪ್ರಧಾನಿಗಳನ್ನು ಅಭಿನಂದಿಸುವ ಸಾಧಾರಣ ಕಾರ್ಯಕ್ರಮ ಇದಾಗಿರಲಿಲ್ಲ. ಆರ್.ಎಸ್.ಎಸ್. ಮತ್ತು ವಿಹೆಚ್‌ಪಿಯ ಕಾರ್ಯಕ್ರಮಗಳನ್ನು ಅಮೆರಿಕಾದಲ್ಲಿ ಸಾರ್ವಜನಿಕವಾಗಿ ಪ್ರಚುರಪಡಿಸುವುದೇ ಸಭೆಯ ಉದ್ದೇಶವಾಗಿತ್ತು. ವಾಜಪೇಯಿಯವರು ಪ್ರಧಾನಿಯಾದ ನಂತರ ವಿಹೆಚ್‌ಪಿ ಮುಖಂಡರ ಜೊತೆ ವೇದಿಕೆ ಹಂಚಿಕೊಂಡ ಪ್ರಥಮ ಕಾರ್ಯಕ್ರಮವೂ ಇದಾಗಿತ್ತು.

ಸ್ಟೇಟನ್ ಐಲ್ಯಾಂಡ್ ಸಭೆಯಲ್ಲಿ ಭಾಗವಹಿಸಿದ್ದ ಮಹಾನುಭಾವರು ಯಾರೆಂದು ಗಮನಿಸಿದರೆ ಸಾಕು ಆ ಸಭೆಯ ಕಥೆ ತಿಳಿಯುತ್ತದೆ.

1992 ರಲ್ಲಿ ಅಯೋಧ್ಯೆಯ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸುವಲ್ಲಿ ಮುಂಚೂಣಿಯಲ್ಲಿದ್ದ ವಿಹೆಚ್‌ಪಿಯ ಅಶೋಕ್ ಸಿಂಘಾಲ್, ಗಿರಜಾ ಕಿಶೋರ್‌ರಂತಹ ಕೆಲವು ನಾಯಕರುಗಳು ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ರಾಮಜನ್ಮ ಭೂಮಿ ಗಲಾಟೆಯಲ್ಲಿ ಪ್ರಧಾನ ಪಾತ್ರ ವಹಿಸಿದ್ದ ಕೆಲವು ಸಾಧುಗಳು, ವಿಹೆಚ್‌ಪಿಗೆ ಹಣಕಾಸು ನೆರವು ನೀಡುವ ಬಿ.ಕೆ.ಮೋದಿಯಂತಹ ಕೈಗಾರಿಕೋದ್ಯಮಿಗಳು ಮತ್ತು ಒಂದಲ್ಲಒಂದು ಸಂದರ್ಭದಲ್ಲಿ ಸಂಘ ಪರಿವಾರದ 'ಹಿಂದುತ್ವ' ಅಜೆಂಡಾವನ್ನು ಪ್ರತಿಪಾದಿಸಲು ನೆರವಾದ ಹಿರಿಯ ಅಧಿಕಾರಿಗಳು ಸಮಾರಂಭದಲ್ಲಿ ಹಾಜರಿದ್ದರು.

1992 ರ ಡಿಸೆಂಬರ್ 6 ರಂದು ಬಾಬ್ರಿ ಮಸೀದಿ ಧ್ವಂಸವಾದ ಮೇಲೆ ವಿಶ್ವಹಿಂದು ಪರಿಷತ್ತನ್ನು ಎರಡು ವರ್ಷದ ಅವಧಿಗೆ ರದ್ದು ಮಾಡಲಾಗಿತ್ತು. ಆರ್.ಎಸ್.ಎಸ್. ಮತ್ತು ಭಜರಂಗದಳ ಘಟನೆಯ ಹೊಣೆಯನ್ನು ವಿಶ್ವ ಹಿಂದು ಪರಿಷತ್ ಮೇಲೆ ಹೊರಿಸಲಾಗಿ ಈ ನಿರ್ಬಂಧ ಹೊರಿಸಲಾಗಿತ್ತು. ಆದರೆ ಕೇಂದ್ರದ ನರಸಿಂಹರಾವ್ ಸರ್ಕಾರದ



ಕೃಪೆ: ದಿ ಹಿಂದು

ನಿರ್ಲಕ್ಷ್ಯದಿಂದಾಗಿ ವಿಹೆಚ್‌ಪಿಯ ಚಟುವಟಿಕೆಗಳು ಮುಂದುವರೆದವು.

ಅಯ್ದ ಸಭಿಕ ವರ್ಗ: ವಾಜಪೇಯಿಯವರ ಭಾಷಣಕ್ಕೆ ವಿಹೆಚ್‌ಪಿಯವರು ಪ್ರಬಲವಾದ 'ಸಾಧು-ಸಂತರ' ಬಳಗವನ್ನು ಸಂಘಟಿಸಿದ್ದರು. ವಿಶ್ವ ಮುಖಂಡರುಗಳ 'ಮಿಲೆನಿಯಂ ಸಮಿತಿ'ಗೂ ಮುಂಚೆ ವಿಶ್ವಸಂಸ್ಥೆ ನ್ಯೂಯಾರ್ಕಿನಲ್ಲಿ ಆಯೋಜಿಸಿದ್ದ 'ಶಾಂತಿಸಭೆ'ಯನ್ನು ಪ್ರತಿನಿಧಿಸಿದ್ದವರಾಗಿದ್ದರು ಈ ಸಾಧುಸಂತರು.

ವಿಶ್ವಸಂಸ್ಥೆ ಆಯೋಜಿಸಿದ್ದ 'ವಿಶ್ವಶಾಂತಿ' ಸಭೆಗೆ ಭಾರತದಿಂದ ದೊಡ್ಡ ನಿಯೋಗವೊಂದನ್ನು ಪಾಲ್ಗೊಳಿಸುವ ಕೆಲಸವನ್ನು ವಿಹೆಚ್‌ಪಿ ವಹಿಸಿಕೊಂಡಿತ್ತು. ದೊಡ್ಡ ವಾಣಿಜ್ಯ ಕುಟುಂಬವಾದ ಮೋದಿಸ್‌ನ ಬಿ.ಕೆ.ಮೋದಿಯವರು ವಿಹೆಚ್‌ಪಿಯ ಬಾಹ್ಯ ಸಂಘಟಕರು. ಮೋದಿ ಫೌಂಡೇಶನ್ ಮಾತ್ರವಲ್ಲದೆ ಹಿಂದೂಜಾ ಫೌಂಡೇಷನ್‌ನವರು ಮನಗಂಡ ವಾಜಪೇಯಿ ತಾನೊಬ್ಬ ಪ್ರಧಾನಿ ಎಂಬುದನ್ನು ನೆನಪಿಸಿಕೊಂಡು, ಸ್ವಯಸೇವಕನೆಂದರೆ ಯಾವುದೋ ಒಂದು ಸಂಘಟನೆಗಲ್ಲ. ಇಡೀ ದೇಶಕ್ಕೆ ನಾನೊಬ್ಬ ಸ್ವಯಂ ಸೇವಕನೆಂದು ಸ್ಪಷ್ಟೀಕರಣದ ನಾಟಕವಾಡಿದರು. ಆದರೆ ಸಭೆಯ ವೇದಿಕೆ ಮತ್ತು ಸುತ್ತ-ಮುತ್ತಲ ನಡವಳಿಕೆಗಳನ್ನು ಗಮನಿಸುತ್ತಿದ್ದವರನ್ನಂತು ಈ ಸ್ಪಷ್ಟೀಕರಣದ ಹೇಳಿಕೆ ತಿಳಿಗೊಳಿಸಲಿಲ್ಲ.

ಅಮೆರಿಕಾದಲ್ಲಿ ವಿಶ್ವ ಹಿಂದೂ ಪರಿಷತ್ ಸಂಘಟಿಸಿದ್ದ ವೇದಿಕೆಯಲ್ಲಿ ಭಾಗವಹಿಸಿದ ಭಾರತದ ಪ್ರಧಾನಿ, ಭಾರತದ ಸಂವಿಧಾನದ ಜಾತ್ಯಾತೀತ, ಪ್ರಜಾಸತ್ತಾತ್ಮಕ ನಿಯಮಗಳಿಗೆ ವಿರುದ್ಧವಾಗಿ ಒಂದು ಜನಾಂಗದ ಪರವಾಗಿ ತಮ್ಮ ನಿಲುವನ್ನು ಎತ್ತಿ ಹಿಡಿದಿರುತ್ತಾರೆ.

ವ್ಯವಸ್ಥಿತವಾಗಿ ಯೋಜಿಸಿದ್ದ ಸಭೆ

ಈ ರೀತಿಯ ಭಂಡ ಹೇಳಿಕೆಗಳನ್ನು ನೀಡಲು ಮಾನ್ಯ ಪ್ರಧಾನಿಗಳು ಅಂತರರಾಷ್ಟ್ರೀಯ ಸೇರಿಕೊಂಡಂತೆ ವಿಶ್ವ ಮಟ್ಟದ ಧಾರ್ಮಿಕ ಮುಖಂಡರ ಸಭೆ ನಡೆಯಿತು.

ಜೀವನಪರ್ಯಂತ ಆರ್.ಎಸ್.ಎಸ್. ಜೊತೆ ಸಾಂಗತ್ಯ, ಹಿಂದುತ್ವವನ್ನು ಬೆಳೆಸುವುದು, ಬಾಬ್ರಿ ಮಸೀದಿ ಜಾಗದಲ್ಲಿ ರಾಮಮಂದಿರ ನಿರ್ಮಾಣ ಮುಂತಾದ ಭಯಾನಕ ಘೋಷಣೆಗಳನ್ನು ವಿಹೆಚ್‌ಪಿಯ ಪರಿವಾರ ಹಾಗೂ ಅಂತರರಾಷ್ಟ್ರೀಯ ಮಾಧ್ಯಮಗಳ ಮುಂದೆ ವಾಜಪೇಯಿ ಮೊಳಗಿಸಿದರು.(ಸ್ಟೀವನ್ ಐಲ್ಯಾಂಡ್ ಸಭೆಯ ಮೂಲಕ)

ಹಿಂದುತ್ವದ ಗುರಿ:

"ಸಾಯುವವರೆಗೆ ನಾನೊಬ್ಬ ಸ್ವಯಂ ಸೇವಕ"ನೆಂದು ವಾಜಪೇಯಿಯವರು ಸಾರಿದರು. ಇದು ಆಶ್ಚರ್ಯವೇನಲ್ಲ. ಅವರು 5 ವರ್ಷಗಳ ಹಿಂದೆಯೇ ಸಂಘವೇ ನನ್ನ ಗುರಿಯೆಂದು

ಅಮೆರಿಕಾದಲ್ಲಿ ವಾಜಪೇಯಿ

ಘೋಷಿಸಿಕೊಂಡಿದ್ದರು. ಇದೇ ಸಂದರ್ಭದಲ್ಲಿ ಸಾಧುವೊಬ್ಬರ ಬೇಡಿಕೆಗೆ ಉತ್ತರವಾಗಿ, 'ಅಯೋಧ್ಯೆಯಲ್ಲಿ ರಾಮಮಂದಿರವನ್ನು ಶೀಘ್ರವಾಗಿ ಕಟ್ಟಲಾಗುತ್ತದೆಂದು ಪ್ರಧಾನಿ ಭರವಸೆ ನೀಡಿದರು.

ಮುಂದುವರೆದು ಮಾತನಾಡಿ ನಾವು ಅಲ್ಪಮತ ಹೊಂದಿದ್ದರು ಸಾಧಿಸಬೇಕಾದದ್ದು ಬಹಳಷ್ಟಿದೆ ಎಂದರು. ಒಂದು ಪಕ್ಷ ನಾವು 2/3 ಬಹುಮತ ಪಡೆದಲ್ಲಿ "ನಮ್ಮ ಕನಸಿನ ಭಾರತವನ್ನು ನನಸು ಮಾಡುವೆವು" ಎಂದು ತಿಳಿಸಿದರು.

ಬಿಜೆಪಿ ಹಿಂದುತ್ವವನ್ನು ದೃಢವಾಗಿ ಕಾಪಾಡಿಕೊಂಡು ಬರುತ್ತಿದೆ. ಸಮ್ಮಿಶ್ರ ಸರ್ಕಾರವಾದ್ದರಿಂದ ಪೂರ್ಣವಾಗಿ ಹಿಂದುತ್ವವನ್ನು ಜಾರಿಗೊಳಿಸಲು ಬಿಜೆಪಿಗೆ ಸಾಧ್ಯವಾಗುತ್ತಿಲ್ಲವಷ್ಟೆ.

ಬಿಜೆಪಿ 2/3 ಬಹುಮತ ಗಳಿಸಿದ್ದೇ ಆದಲ್ಲಿ ರಾಮಮಂದಿರ ನಿರ್ಮಾಣ ಮಾಡುವುದಲ್ಲದೆ ಆರ್.ಎಸ್.ಎಸ್. ಕನಸಾದ ಮಹತ್ವದ ಗುರಿಯನ್ನು ಪೂರೈಸುವುದಾಗಿ ಘೋಷಿಸಿರುವ ಪ್ರಧಾನಿಗಳು ನಿಜವಾದ ಸ್ವಯಂ ಸೇವಕನಂತೆ ಮಾತನಾಡಿದ್ದಾರೆ.

ಪ್ರಧಾನಿಯವರ ಈ ನೇರ ಮಾತುಗಳಿಂದಾಗಿ ಸಭೆಯಲ್ಲಿ ಉಪಸ್ಥಿತರಿದ್ದ ಪತ್ರಿಕಾ ವರದಿಗಾರರು ಸಂಪಾದಕರು ಮುಜುಗರಕ್ಕೆ ಒಳಗಾದರು. ಇದನ್ನು ವೇದಿಕೆಯನ್ನು ಅದರಲ್ಲೂ ವಿಹೆಚ್‌ಪಿ ಸಂಘಟಿಸಿದ್ದ ಸಮಾರಂಭವನ್ನು ಏಕೆ ಬಳಸಿಕೊಂಡರು ಎಂದು ವಾಜಪೇಯಿಯವರ ಬಗ್ಗೆ ಕೆಲವರಾದರು ಅನುಮಾನ ಪಡಬಹುದು. ಆದರೆ ಇದು ಶುದ್ಧ ಸುಳ್ಳು. ಏಕೆಂದರೆ ಸಾಧು-ಸಂತರ ವಿಹೆಚ್‌ಪಿ ಮುಖಂಡರುಗಳ ಸಭೆಯನ್ನು ಪೂರ್ವಯೋಜಿತವಾಗಿಯೇ ಸಂಘಟಿಸಲಾಗಿತ್ತು. ವಿ.ಹೆಚ್.ಪಿ. ಮುಖಂಡರ ಸಭೆಯನ್ನು ನಿಯೋಜಿಸುವಂತೆ ಜೊತೆಗೆ ಪ್ರಧಾನಿ ಕಚೇರಿಯ ಅಧಿಕಾರಿಗಳು ಸಹಕರಿಸುವಂತೆ ವಿಶೇಷ ಗಮನ ಸಹ ನೀಡಲಾಗಿತ್ತು. ಬಿಜೆಪಿಯ ಪ್ರಧಾನ ಕಾರ್ಯದರ್ಶಿಗಳಲ್ಲೊಬ್ಬರಾದ ನರೇಂದ್ರ ಮೋದಿಯವರು ಸಭೆಯಲ್ಲಿ ಉಪಸ್ಥಿತರೂ ಇದ್ದರು. ವಿಶ್ವಹಿಂದು ಪರಿಷತ್‌ನವರು ಸಭೆಯ ಇಂಚಿಂಚು ನಡವಳಿಕೆಗಳನ್ನು ಪೂರ್ವಬಾವಿಯಾಗಿಯೇ ಗೊತ್ತುಪಡಿಸಿದ್ದರು. ಮಾನ್ಯ ಪ್ರಧಾನಿಗಳಿಗೂ ಸಹ ಎಲ್ಲಿಗೆ ಹೋಗುತ್ತಿದ್ದೇನೆ, ಯಾರನ್ನು ಕುರಿತು ಮಾತನಾಡುತ್ತಿದ್ದೇನೆ ಎಂಬ ಪೂರ್ವಭಾವಿ ವಿವೇಚನೆ ಇತ್ತು.

ಗಟ್ಟಿಕುಳದ ಹಣಕಾಸಿಗರು

ವಿಶ್ವ ಹಿಂದು ಪರಿಷತ್ ಅಮೆರಿಕಾದಲ್ಲಿ 'ವಿಶ್ವ ಹಿಂದು ಪರಿಷತ್ -ಅಮೆರಿಕಾ' (ವಿಹೆಚ್‌ಪಿಎ)ದ ಮೂಲಕ ಗಟ್ಟಿ ನೆಲೆ ಮಾಡಿಕೊಂಡಿದೆ. ಅಮೆರಿಕಾ ಹಾಗೂ ಭಾರತದ ಆರ್.ಎಸ್.ಎಸ್.ಗೆ ಮುಖ್ಯ ಹಣಕಾಸುದಾರರು ಈ ವಿಹೆಚ್‌ಪಿಎದವರು. 1993 ರೊಂದರಲ್ಲೇ ವಿಹೆಚ್‌ಪಿಯ ಆದಾಯ 1.06 ಮಿಲಿಯನ್ ಡಾಲರ್. ಇದರಸಹಗುಂಪಾದ 'ದ ಇಂಡಿಯಾ ಡವಲಪ್‌ಮೆಂಟ್ ಮತ್ತು ರಿಲೀಫ್ ಫಂಡ್' 1990 ರಲ್ಲಿ ಎರಡು ಮಿಲಿಯನ್ ಡಾಲರ್ ನಷ್ಟು ಹಣ ಸಂಗ್ರಹಿಸಿತ್ತು. ಸಾಗರದಾಚೆಯ ಬಿಜೆಪಿ ಹಾಗೂ ವಿಹೆಚ್‌ಪಿಎ ಸೇರಿ ರಾಮಜನ್ಮಭೂಮಿ ಚಳುವಳಿಗೆ ಹೇರಳವಾಗಿ ಹಣ ಸಂಗ್ರಹಿಸಿ ಕೊಟ್ಟಿದ್ದವು.

ಸಾಗರದಾಚೆಯ ಬಿಜೆಪಿ, ಬಿಜೆಪಿಗೆ ಮಾತ್ರವಲ್ಲದೆ ಆರ್‌ಎಸ್‌ಎಸ್‌ಗೆ ಸಹ ಹಣ ಒದಗಿಸಿತು.

ಪ್ರಕಾಶ ಕಾರಟ್
ಅನು: ಎನ್.ಪ್ರಭಾ

ಅಮೆರಿಕಾದಲ್ಲಿ ಹಿಂದುತ್ವವನ್ನು ಕ್ರಿಯಾಶೀಲಗೊಳಿಸಲು ವಿಹೆಚ್‌ಪಿ ಮಾತ್ರವೇ ಕೆಲಸ ಮಾಡದೆ ಹಿಂದೂಜಾ ಫೌಂಡೇಷನ್ ಸಹ ಮುಂಚೂಣಿಯಲ್ಲಿದೆ. ಹೀಗಾಗಿ ವಿಹೆಚ್‌ಪಿಎ ಹಾಗೂ ಸಾಗರದಾಚೆಯ ಬಿಜೆಪಿಯವರು ಸಂಘಟಿಸಿದ್ದ ಸ್ಟೇಟನ್ ಐಲ್ಯಾಂಡ್ ಸಭೆಯು ವಾಜಪೇಯಿಯವರಿಗೆ ಸಹಜವಾಗಿಯೇ ಆದ್ಯತೆಯ ಸಮಾರಂಭವಾಗಿತ್ತು.

ನೆನಪುಗಳ ಮೆಲುಕು

ವೇದಿಕೆಯನ್ನು ಹಂಚಿಕೊಂಡಿದ್ದ ಮಹಾನುಭಾವರೆಲ್ಲರು ಬಾಬ್ರಿ ಮಸೀದಿಯನ್ನು ಉರುಳಿಸಲು ರೂಪಿಸಿದ ಪಿತೂರಿಯನ್ನು ಪರಸ್ಪರ ಮೆಲುಕುಹಾಕಿಕೊಂಡರು. ವಿಹೆಚ್‌ಪಿಯ ಮುಖಂಡರಾದ ಸಿಂಘಾಲ್, ಗಿರಿಜಾ ಕಿಶೋರ್ ಮತ್ತು ಅನೇಕ ಸಾಧುಗಳು ಯಾರೆಲ್ಲಾ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಲು ನೇರವಾಗಿ ಹೊಣೆಯಾಗಿದ್ದಾರೋ ಅವರೆಲ್ಲಾ ಹಿಂದಿನ ನೆನಪುಗಳನ್ನು ಕೆದಕಿದರು.

ಭಾರತದ ಅಮೆರಿಕಾ ಪ್ರಸಕ್ತ ರಾಯಭಾರಿ ನರೇಶ್ ಚಂದ್ರ ಸಹ ಪ್ರಧಾನಿಗಳೊಂದಿಗೆ ವೇದಿಕೆಯಲ್ಲಿ ಆಸೀನರಾಗಿದ್ದರು. ನರೇಶ್ ಚಂದ್ರ, ಪಿ.ವಿ.ನರಸಿಂಹರಾವ್ ಸರ್ಕಾರದ ಕಾರ್ಯದರ್ಶಿ ಹಾಗೂ ಅಯೋಧ್ಯಾ ವಿವಾದಕ್ಕೆ ಸಂಬಧಿಸಿ ಹಿರಿಯ ಸಲಹೆಗಾರರು ಆಗಿದ್ದರು.

ಆರ್.ಎಸ್.ಎಸ್., ವಿಹೆಚ್‌ಪಿ, ಬಿಜೆಪಿಗಳು ಅಯೋಧ್ಯೆಗೆ ಜಂಟಿಯಾಗಿ ಕರಸೇವೆಯನ್ನು ಸಂಘಟಿಸಿದ ಮಹತ್ತರ ದಿನಗಳಲ್ಲಿ ನರಸಿಂಹರಾವ್ ಸರ್ಕಾರ ಆರ್.ಎಸ್.ಎಸ್. ಆಟಗಳನ್ನು ಮೊಟಕುಗೊಳಿಸುವಲ್ಲಿ ಹಿಂದೇಟು ಹಾಕಿದ್ದರಿಂದ ಆರ್.ಎಸ್.ಎಸ್. ಯಶಸ್ವಿಯಾಯಿತು.

"ಪ್ರಧಾನ ಮಂತ್ರಿಗಳ ಕಾರ್ಯಾಲಯವು ದೇವಾಲಯದ ರಚನೆಗೆ ಯಾವುದೇ ರೀತಿಯ ಹಾನಿಯಾಗುವುದಿಲ್ಲವೆಂದು ಬಲವಾಗಿ ನಂಬಿದೆ. ಯಾಕೆಂದರೆ ಆರ್‌ಎಸ್‌ಎಸ್ ಹಾಗೂ ವಿಹೆಚ್‌ಪಿಗಳು ಈಗಾಗಲೇ ಅದನ್ನು ದೇವಾಲಯ ಎಂದು ಪರಿಗಣಿಸಿರುವುದರಿಂದ ಆ ಜಾಗದಲ್ಲಿ ಹಿಂದೂಗಳ ಪೂಜೆ ಮಾಡುತ್ತಿರುವುದರಿಂದ ಅದರ



ಕೃಪೆ: ದೇಶಾಭಿಮಾನಿ

ರಚನೆಗೆ ಯಾವುದೇ ರೀತಿಯ ಧಕ್ಕೆ ಬರುವುದಿಲ್ಲ. ಅದು ಮಸೀದಿಯಲ್ಲ, ಮಂದಿರವೆಂದು ಈಗಾಗಲೇ ಪರಿಗಣಿಸುವುದರಿಂದ ಅದನ್ನು ಕೆಡುವುವ ಪ್ರಶ್ನೆಯೇ ಬರುವುದಿಲ್ಲ" ವೆಂದು ಅಂದು ಗೃಹ ಕಾರ್ಯದರ್ಶಿಯಾಗಿದ್ದ ಮಾಧವ್ ಗೋಡ್‌ಬೋಲೆ ಹೇಳಿಕೆ ಹೊರಡಿಸಿದ್ದರು. "ಆರ್.ಎಸ್.ಎಸ್. ಉನ್ನತ ಶಿಸ್ತಿನ, ತರಬೇತು ಆಧಾರಿತ ಸಂಘಟನೆಯಾಗಿರುವುದರಿಂದ ಗೂಂಡಾಗಿರಿ ಮಾಡುವ ಮೂಲಕ ದೇವಾಲಯದ ರಚನೆಗೆ ಧಕ್ಕೆ ಮಾಡಲು ಖಂಡಿತ ಮುಂದಾಗುವುದಿಲ್ಲವೆಂದು" ನರೇಶ್ ಚಂದ್ರ ಗೋಡ್‌ಬೋಲೆ ಹೇಳಿಕೆಯನ್ನು ಗಟ್ಟಿಗೊಳಿಸಿದ್ದರು.

ಆರ್.ಎಸ್.ಎಸ್. ಕಾರ್ಯಕರ್ತರು ಹಾಗೂ ಅದರ ಮುಖಂಡರು ದೇವಾಲಯವನ್ನು ಹಾನಿಗೊಳಿಸಿಯೇಬಿಟ್ಟಿದ್ದು ಈಗ ಇತಿಹಾಸ.

ಕಾಂಗ್ರೆಸ್ ಸರ್ಕಾರದ ಅಧಿಕಾರಾವಧಿಯಲ್ಲಿಯೇ ಕೇಂದ್ರ ಕಛೇರಿಗಳಲ್ಲಿ ಕೆಲಸ ಮಾಡುತ್ತಿದ್ದ ಅಧಿಕಾರಿಗಳು ಆರ್.ಎಸ್.ಎಸ್.ನ ಧೋರಣೆಗಳನ್ನು ಜಾರಿಗೊಳಿಸಲು ರಾಜ್ಯದ ಅಧಿಕಾರಿಗಳನ್ನು ಹೇಗೆ ಬಳಸಿಕೊಂಡಿದ್ದಾರೆ, ಅಧಿಕಾರಿಗಳನ್ನು ಹಾಗೂ ಸರ್ಕಾರಿ ಯಂತ್ರವನ್ನು ಆರ್.ಎಸ್.ಎಸ್. ಹೇಗೆ ಉಪಯೋಗಿಸಿಕೊಂಡಿದೆ ನೋಡಿ?

ಈಗ ವಾಜಪೇಯಿ ನೇತೃತ್ವದ ಸಮ್ಮಿಶ್ರ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದೆ. ಅಲ್ಪಮತದ ಬಿಜೆಪಿಯ ಪರವಾಗಿ ವಾಜಪೇಯಿ "ನಾವು ಸಾಧಿಸಬೇಕಾಗಿರುವುದು ಬೇಕಾದಷ್ಟಿದೆ" ಎಂದು ಹೇಳಿದ್ದಾರೆ.

ಏನಿದರ ಅರ್ಥ? 2/3 ರಷ್ಟು ಬಹುಮತವನ್ನು ಬಿಜೆಪಿ ಗಳಿಸುವುದು ಆ ಮೂಲಕ ಪೂರ್ಣ ಅಧಿಕಾರ ಹಿಡಿಯುವುದು, ಭಾರತವನ್ನು 'ಹಿಂದುತ್ವ' ರಾಷ್ಟ್ರವಾಗಿ ಪರಿವರ್ತಿಸುವುದು, ಅಮೆರಿಕಾದಲ್ಲೂ ಹಿಂದುತ್ವ ಹರಡುವುದು ಎಂದಲ್ಲವೇ ಇದರ ಅರ್ಥ.

ಅಧಿಕಾರದ ಆಸೆಯಿಂದ ಬಿಜೆಪಿಗೆ ಕೇಂದ್ರದಲ್ಲಿ ಬೆಂಬಲ ನೀಡಿರುವ ಅವರ ಅಂಗ ಪಕ್ಷಗಳಿಗೆ ಇದೊಂದು ಎಚ್ಚರಿಕೆಯ ಸಭೆ. ಇನ್ನೂ ಬಿಜೆಪಿಗೆ ಅಧಿಕಾರ ನಡೆಸಲು ಬೆಂಬಲ ಮುಂದುವರೆಸುತ್ತಾ ಹೋದರೆ ಅಂಗ ಪಕ್ಷಗಳು ಅವಸಾನದ ದಿನಗಳನ್ನು ಎಣಿಸಬೇಕಾಗುತ್ತದಷ್ಟೆ.

ಅಮೆರಿಕನ್ ಸಾಮ್ರಾಜ್ಯಶಾಹಿಯ ಕಡೆಗೆ ಬಿಜೆಪಿ ವಾಲುತ್ತಿರುವ ಸೂಚನೆಯನ್ನು ಸ್ಟೇಟನ್ ಐಲ್ಯಾಂಡ್ ಸಭೆಯು ಮತ್ತೊಮ್ಮೆ ತೋರಿಸಿದೆ. ಈಗಾಗಲೇ ಮಂಡಿ ನೋವಿನಿಂದ ಬಳಲುತ್ತಿರುವ. ವಾಜಪೇಯಿ ಹೀಗೇ ತಮ್ಮ ನಿಲುವನ್ನು ಮುಂದುವರೆಸಿದ್ದೇ ಆದರೆ ಮಂಡಿಯನ್ನು ಮತ್ತಷ್ಟು ಬಾಗಿಸಿ ವ್ಯಥೆ ಪಡಬೇಕಾಗುತ್ತದೆ ಮಾತ್ರವಲ್ಲ ಭಾರತದ ಜನತೆ ಸಹ ಮುಂದಿನ ದಿನಗಳಲ್ಲಿ ಅಸಹನೀಯ ದಿನಗಳನ್ನು ಎದುರಿಸಬೇಕಾಗುತ್ತದೆ.

ಪಶ್ಚಿಮ ಬಂಗಾಳದಲ್ಲಿ ಬಿಜೆ

ಅಮೆರಿಕಾದ ರಾಜಕೀಯ ವಲಯಕ್ಕೆ ಪೂಸಿ ಹೊಡೆಯಲೆಂದೇ ವಿದೇಶಿ ಪ್ರವಾಸಕ್ಕೆ ಹೋಗಿರುವ ಪ್ರಧಾನಿಯವರ ಅಮೆರಿಕಾ ಭೇಟಿಯನ್ನು ಹೊಸ ಶತಮಾನದ ವಿಶ್ವಸಂಸ್ಥೆಯ ಶೃಂಗಸಭೆಯಲ್ಲಿ ಪಾಲ್ಗೊಂಡು ವಿದೇಶಾಂಗ ನೀತಿಯಲ್ಲಿ ದೊಡ್ಡ ಸಾಧನೆಯನ್ನು ಮಾಡಲು ಹೋಗಿದ್ದಾರೆಂದು ಮಾಧ್ಯಮದ ಮೂಲಕ ಅಬ್ಬರದ ಪ್ರಚಾರ ಮಾಡಲಾಗುತ್ತಿದೆ. ಅದೇ ಸಂದರ್ಭದಲ್ಲಿ ನಮ್ಮ ನೆಲದಲ್ಲಿ ಪ.ಬಂಗಾಳದ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರವನ್ನೇ ಗುರಿಯಾಗಿಟ್ಟುಕೊಂಡು ದೇಶದ ಪ್ರಜಾಪ್ರಭುತ್ವ ಚಳುವಳಿಯ ವ್ಯವಸ್ಥೆಗೆ ಕೊಡಲಿ ಪೆಟ್ಟು ಹಾಕಲಾಗುತ್ತಿದೆ.

ಭಯಭೀತವಾದ ಎನ್‌ಡಿಎ: ಪ.ಬಂಗಾಳದಲ್ಲಿನ ಎಡರಂಗ ಸರ್ಕಾರವನ್ನು ಅಸ್ಥಿರಗೊಳಿಸಲು ಹಲವಾರು ಪ್ರಯತ್ನ ಮಾಡಿ ವಿಫಲವಾಗಿ ಬಿಜೆಪಿಯ ಜೊತೆ ಕೈಜೋಡಿಸಿ ಕೇಂದ್ರದಲ್ಲಿ ರೈಲ್ವೆ ಖಾತೆಯ ಮಂತ್ರಿಯಾದ ಕುಮಾರಿ ಮಮತಾ ಬ್ಯಾನರ್ಜಿ ಪ.ಬಂಗಾಳದಲ್ಲಿ 356ನೇ ಕಲಮನ್ನು ಜಾರಿಗೆ ತರದಿದ್ದರೆ ರಾಜಿನಾಮೆ ಕೊಡುವುದಾಗಿ ಬೆದರಿಕೆ ಹಾಕಿದರು. ನಂತರ ಪ್ರಧಾನಿಯವರು ಹಿಂದಿರುಗಿ ಬರುವವರೆಗೆ ಕಾಯುವುದಾಗಿ ಭರವಸೆ ನೀಡಿದರು. ಆದರೂ ಮಮತಾರ ಬೆದರಿಕೆಯಿಂದ ಹೆದರಿದ ಎನ್‌ಡಿಎ ಧಣಿಗಳು ಪ್ರಧಾನಿಯವರ ಬರವಿಕೆಗೆ ಕಾಯದೇ ತಕ್ಷಣ ಕಾರ್ಯಪ್ರವೃತ್ತರಾಗಿ ಐದು ಜನರ ಸಮಿತಿಯನ್ನು ಪ.ಬಂಗಾಳದ ಕಾನೂನು ವ್ಯವಸ್ಥೆಯ ಪರಿಸ್ಥಿತಿಯ ತೋರಿಕೆಯ ಅಧ್ಯಯನಕ್ಕಾಗಿ ಕಳಿಸಿದರು. ಆ ಸಮಿತಿ ಪ.ಬಂಗಾಳದ ಐದು ಜಿಲ್ಲೆಗಳನ್ನು ಗಲಭೆಗ್ರಸ್ತವೆಂದು ಘೋಷಿಸುವ ಶಿಫಾರಸು ನೀಡಿತು. ಇದಿಷ್ಟರಿಂದಲೇ ತೃಪ್ತರಾಗದ ಗೃಹಮಂತ್ರಿಗಳು ರಕ್ಷಣಾಮಂತ್ರಿ ಜಾರ್ಜ್ ಫರ್ನಾಂಡೀಸ್‌ರನ್ನು ರವಾನೆಮಾಡಿದರು.

ಜಾರ್ಜ್ ಮಾಡಿದ್ದೇನು? ಮಿಡ್ನಾಪುರ ಜಿಲ್ಲೆಯ ಕೇವಲ ಮೂರು ಹಳ್ಳಿಗಳಿಗೆ ಹಾಸ್ಯಾಸ್ಪದ ರೀತಿಯಲ್ಲಿ ಕೆಲವೇ ಗಂಟೆಗಳ ಭೇಟಿ ನೀಡಿ ರಾಜ್ಯದ ಕಾನೂನು-ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಮತ್ತು ಸ್ವತಃ ಮಮತಾ-ಜೀಯವರ ಪ್ರಾಣಕ್ಕೇ ಅಪಾಯವಿದೆ ಎಂಬ ಸ್ಪಷ್ಟ(!) ನಿರ್ಧಾರಕ್ಕೆ ಬಂದರು.

ಫರ್ನಾಂಡೀಸರ ದುರಂತ ಪ್ರಹಸನ: ಫರ್ನಾಂಡಿಸ್ ಒಂದು ಗಾಳಿ ಚೀಲ- ತನ್ನ ಸಚಿವ ಗದ್ದುಗೆ-ಯನ್ನು ಉಳಿಸಿಕೊಳ್ಳಲು ಯಾವ ಮಟ್ಟಕ್ಕೆ ಬೇಕಾದರೂ ಹೋಗಿ ಬಿಡುತ್ತಾರೆಂಬುದನ್ನು ಯಾರೂ ಅರ್ಥಮಾಡಿಕೊಳ್ಳಬಹುದು. 'ದಿಹಿಂದು' ಪತ್ರಿಕೆ ಸೆಪ್ಟೆಂಬರ್ 13 ರ ಸಂಪಾದಕೀಯದಲ್ಲಿ ಪ.ಬಂಗಾಳದ ಕಾನೂನು ವ್ಯವಸ್ಥೆಯ ಜಾರ್ಜರ ವರದಿಯ ಕುರಿತಂತೆ ಬರೆಯುತ್ತಾ ಬೇಕೆನಿಸಿದರೆ ಸ್ಥಳದಲ್ಲಿಯೇ ತೀರ್ಪು ನೀಡುವ ಗುಣಲಕ್ಷಣವನ್ನು - ಗ್ರಹಾಂ ಸ್ಟೈನ್ ಮತ್ತು ಇಬ್ಬರು ಮಕ್ಕಳ ಸಜೀವ ದಹನದ ಪ್ರಕರಣದಲ್ಲಿ ಅಂತರರಾಷ್ಟ್ರೀಯ ಕುತಂತ್ರವಿದೆ-ಭಜರಂಗದಳವನ್ನು ಈ ಅಪವಾದದಿಂದ ಮುಕ್ತಗೊಳಿಸಬೇಕೆಂದು ಹೇಳಿದ ಮಾತನ್ನು ಉದಾಹರಿಸುತ್ತ ಸರಿಯಾಗಿಯೇ ವಿವರಿಸಿದೆ.

ಆದ್ದರಿಂದ ಫರ್ನಾಂಡೀಸರ ಈ ನಾಟಕಾಭಿನಯದ ಬಗ್ಗೆ ಯಾರಿಗೂ ಆಶ್ಚರ್ಯವೆನಿಸುವುದಿಲ್ಲ. ಅಂತೆಯೆ 'ಬಿಜೆಪಿಯ ಮಹಾರಥಿ, ಕೇಂದ್ರ ಗೃಹಮಂತ್ರಿ ಎಲ್.ಕೆ.ಅಡ್ವಾಣಿಯವರು ಪ.ಬಂಗಾಳದಲ್ಲಿ ರಾಷ್ಟ್ರಪತಿ ಆಳ್ವಿಕೆಯೂ ಸೇರಿದಂತೆ ಎಲ್ಲಾ ಸಾಧ್ಯತೆಗಳು ತೆರೆದಿಟ್ಟಿವೆ ಎಂಬ ಮಾತಿಗಾಗಲಿ ಅಥವಾ ಪ್ರತಿದಿನ ಒಂದಲ್ಲ ಒಂದು ಸಮಸ್ಯೆ ಎತ್ತಿ ತಮ್ಮ ಬೇಡಿಕೆ ಈಡೇರಿಸಿಕೊಳ್ಳಲು ಬೆದರಿಕೆ ಒಡ್ಡುವ ಮಿತ್ರಪಕ್ಷಗಳಿಂದ ಅಸಹಾಯಕರಾಗುವ ಬಿಜೆಪಿಯ ಬಗ್ಗೆಯಾಗಲಿ ಅಚ್ಚರಿ ಪಡಲು ಸಾಧ್ಯವಿಲ್ಲ. ವಾಜಪೇಯಿ ಅಂಡ್ ಕಂಪನಿಯ ಸರ್ಕಾರದಷ್ಟು ದಯನೀಯ ಸ್ಥಿತಿಗೆ ಬಹುಶಃ ಯಾವುದೇ ಸಂಯುಕ್ತ ಸರ್ಕಾರವೂ ಬರಲು ಸಾಧ್ಯವಿಲ್ಲ. ವಿಷಯ ವಿಷ್ಟೆ- 543 ಜನ ಸದಸ್ಯರನ್ನು ಹೊಂದಿದ ಸಂಸತ್ತಿನಲ್ಲಿ ಬಿಜೆಪಿಯ ಬಲ ಕೇವಲ 182. ಆದ್ದರಿಂದ ಅಧಿಕಾರದಲ್ಲಿ ಉಳಿಯಬೇಕೆಂದರೆ ತನ್ನ ಎರಡು ಡಜನ್ ಮಿತ್ರ ಪಕ್ಷಗಳ ಮರ್ಜಿಯನ್ನ ನುಸರಿಸಿ ನಡೆಯಬೇಕು. ಬಿಜೆಪಿ ಫೆಡರಲ್ ಸ್ವರೂಪದ ಹುಟ್ಟಾ ವಿರೋಧಿಯಾಗಿದ್ದು ಈಗಾಗಲೇ ಭಾರತದ ಫೆಡರಲ್ ಸ್ವರೂಪಕ್ಕೆ ಧಕ್ಕೆ ತಂದಿದೆ. ದೇಶದ ಫೆಡರಲ್ ಸ್ವರೂಪವನ್ನು ತೆಗೆದುಹಾಕಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಕೊಡಲಿಪೆಟ್ಟು ಹಾಕಿ, ಅಧ್ಯಕ್ಷೀಯ ಆಳ್ವಿಕೆಯನ್ನು ಜಾರಿಗೆ ತರಲು ಅನುಕೂಲವಾಗುವಂತೆ ಸಂವಿಧಾನ ಪರಾಮರ್ಶೆ ಮಾಡಲು ಆಯೋಗವನ್ನು ನೇಮಿಸಿದೆ. ಹಾಗೆಯೇ ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಿಗೆ ಆಗಾಗ ಬೆದರಿಕೆ ಒಡ್ಡುವ ರೀತಿಯಲ್ಲಿ ಕಳೆದ 2 ವರ್ಷಗಳಲ್ಲಿ ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವ ಪ್ರಯತ್ನವನ್ನು ಮಾಡಲಾಯಿತು. ಅದೇ ವೇಳೆಗೆ ಅಪಹಾಸ್ಯಕ್ಕೀಡೆ ಮಾಡುವಂತೆ - ಮುಖಭಂಗವನ್ನೂ ಅನುಭವಿಸಬೇಕಾಗಿ ಬಂತು. ಈಗ ಅವರ ಕಾಕ ದೃಷ್ಟಿ ಕಳೆದ 23 ವರ್ಷಗಳಿಂದ ಆಡಳಿತ ನಡೆಸುತ್ತಿರುವ ಪ.ಬಂಗಾಳದ ಎಡರಂಗ ಸರ್ಕಾರದ ಮೇಲೆ ಬಿದ್ದಿದೆ.

ಕಾನೂನು-ವ್ಯವಸ್ಥೆ-ರಾಜ್ಯದ ವಿಷಯವೆಂಬುದನ್ನು ಹೇಳುವ ಸಂವಿಧಾನದ ಪ್ರಥಮ ಪಾಠವನ್ನೂ ಮರೆತು, ಪ.ಬಂಗಾಳದಲ್ಲಿ ಕಾನೂನು ವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಬಿದ್ದಿದೆ ಎಂಬ ಕಾರಣವನ್ನು ಅವರು ನೀಡುತ್ತಿದ್ದಾರೆ. ಕಲ್ಕತ್ತದ ರಾಜಭವನವೇನಾದರೂ ಈ ಕುರಿತು ವರದಿ ಕಳಿಸಿದೆಯೇ?



ಕೃಪೆ: ಜನವಾಹಿನಿ

ವಾಸ್ತವಾಂಶವೆಂದರೆ ಬಿಜೆಪಿಯ ಆಡಳಿತವೂ ಇರುವ ರಾಜ್ಯಗಳಲ್ಲಿ ಸೇರಿದಂತೆ ಇತರ ಹಲವಾರು

ಪಶ್ಚಿಮ ಬಂಗಾಳಕ್ಕೆ ಜನಾಭಿಪ್ರಾಯ

ಕಳೆದ ವರ್ಷ ಬಿಹಾರದ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಅನುಸರಿಸಿದ ನೀತಿ ಮತ್ತು ಅನುಭವಿಸಿದ ಮುಖಭಂಗ ಇನ್ನೂ ಸಾರ್ವಜನಿಕರ ನೆನಪಿನಲ್ಲಿ ಉಳಿದಿವೆ. ಈ ಅನುಭವದಿಂದ ಕೇಂದ್ರ ಸರ್ಕಾರ ಪಾಠ ಕಲಿಯಲಿಲ್ಲ ಎಂಬುದು ಈಗಿನ ಅದರ ವರ್ತನೆಯಿಂದ ಸ್ಪಷ್ಟವಾಗುತ್ತದೆ.

ಜಾರ್ಜ್ ಫರ್ನಾಂಡೀಸ್ ಅವರು ತಮ್ಮ ವರದಿಯಲ್ಲಿ ತಿಳಿಸಿರುವಂತೆ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿ ಬಿಹಾರದ ಪರಿಸ್ಥಿತಿಗಿಂತ ಹದಗೆಟ್ಟಿಲ್ಲ. ಜಾರ್ಜ್ ಪಶ್ಚಿಮ ಬಂಗಾಳದ ಕೆಲವೇ ಹಳ್ಳಿಗಳಿಗೆ ಭೇಟಿ ನೀಡಿದ್ದಾರೆ. ಕೆಲವಾರು ಗಂಟೆಗಳನ್ನು ಮಾತ್ರ ಅಲ್ಲಿ ಕಳೆದಿದ್ದಾರೆ. ಹೀಗಿರುವಾಗ ಅವರಿಗೆ ಪಶ್ಚಿಮ ಬಂಗಾಳದ ಸಮಗ್ರ ಪರಿಸ್ಥಿತಿಯ ಬಗ್ಗೆ ಒಂದು ಸ್ಪಷ್ಟ ಚಿತ್ರ ಸಿಕ್ಕಿರುವ ಸಾಧ್ಯತೆ ಇಲ್ಲ. ತಮ್ಮ ವರದಿಯಲ್ಲಿ ಅವರು ಪ್ರಸ್ತಾಪಿಸಿರುವ ಅಂಶಗಳನ್ನು ಗಮನಿಸಿದರೆ ಅದರ ಉದ್ದೇಶ ಸ್ಪಷ್ಟವಾಗಿಯೇ ಇದೆ. ಹಿಂಸಾಚಾರಕ್ಕೆ ಕಾರ್ಯಕರ್ತರೇ ಕಾರಣ ಎಂದು ವರದಿಯಲ್ಲಿ ತಿಳಿಸಿರುವುದು ಮತ್ತು ಮಮತಾ ಬ್ಯಾನರ್ಜಿ ಅವರ ಅಭಿಪ್ರಾಯವನ್ನು ಸಂಪೂರ್ಣವಾಗಿ ಒಪ್ಪಿರುವುದನ್ನು ಗಮನಿಸಿದರೆ ರಾಷ್ಟ್ರಪತಿ ಆಡಳಿತ ಹೇರುವುದು ಈ ವರದಿಯ ಹಿಂದಿರುವ ಉದ್ದೇಶ ಎಂಬುದು ಸ್ಪಷ್ಟ. ಎರಡು ಅಂಶಗಳಂತೂ ಸ್ಪಷ್ಟ : ಮೊದಲನೆಯದು-ಪಶ್ಚಿಮ ಬಂಗಾಳದಲ್ಲಿ ಆಡಳಿತ ಕುಸಿದುಬಿದ್ದಿಲ್ಲ, ಎರಡನೆಯದು ಸಂವಿಧಾನದ ವಿಧಿ 356 ರ ಅನ್ವಯ ರಾಷ್ಟ್ರಪತಿಗಳ ಆಳ್ವಿಕೆ ಹೇರುವುದೂ ಅಸಾಧ್ಯ. ಒಂದು ವೇಳೆ ರಾಷ್ಟ್ರಪತಿಗಳ ಅನುಮತಿ ದೊರೆತರೂ ಸಂಸತ್ತಿನ ಅನುಮೋದನೆ ಕಷ್ಟಸಾಧ್ಯ.

ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್
ಸಂಪಾದಕೀಯದಿಂದ, ಸೆ.13,2000

★ ★ ★

ಪಶ್ಚಿಮ ಬಂಗಾಳದಲ್ಲಿನ ಕಾನೂನು ಮತ್ತು ಶಿಸ್ತು ಪರಿಸ್ಥಿತಿ ಮತ್ತೊಮ್ಮೆ ಚರ್ಚಾ ವಿಷಯವಾಗಿದೆ. ರಾಜ್ಯದಲ್ಲಿ ಬಿಹಾರಕ್ಕಿಂತ ಪರಿಸ್ಥಿತಿ ಕೆಟ್ಟಿದೆ ಎಂದು ಎನ್‌ಡಿಎ ಸಂಚಾಲಕ ಹಾಗೂ ರಕ್ಷಣಾ ಸಚಿವರಾಗಿರುವ ಜಾರ್ಜ್ ಫರ್ನಾಂಡೀಸ್ ಅಭಿಪ್ರಾಯಪಟ್ಟಿದ್ದಾರೆ. ಇದರೊಂದಿಗೆ ರಾಜ್ಯದಲ್ಲಿನ ಕಾನೂನು ಮತ್ತು ಶಿಸ್ತು ಪರಿಸ್ಥಿತಿ ವಿಷಯ ಕುರಿತಂತೆ ಬಿಜೆಪಿ ಮತ್ತು ವಿರೋಧ ಪಕ್ಷಗಳ ಮಧ್ಯೆ ಬಹಿರಂಗ ವಾಗ್ವಾದ ಆರಂಭಗೊಂಡಿದೆ.

ಕಾಂಗ್ರೆಸ್ ಪಕ್ಷದಿಂದ ಸಿಡಿದುಹೋಗಿ ತನ್ನದೇ ಆದ ತೃಣಮೂಲ ಕಾಂಗ್ರೆಸ್ ಪಕ್ಷವನ್ನು ಹುಟ್ಟು ಹಾಕಿರುವ ಮಮತಾ ಬ್ಯಾನರ್ಜಿ ಅವರು ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರಬೇಕೆಂದು ಬಲವಾಗಿ ಒತ್ತಾಯಿಸುತ್ತಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ರಾಜಕೀಯ ಹಿಂಸಾಚಾರ ನಡೆಸುತ್ತಿರುವುದನ್ನು ಎಲ್ಲಾ ರಾಜಕೀಯ ಪಕ್ಷಗಳು ಪಕ್ಷ ಭೇದ ಮರೆತು ಖಂಡಿಸಬೇಕು. ರಾಜಕೀಯ ಲಾಭಕ್ಕಾಗಿ ಹಿಂಬಾಗಿಲಿನಿಂದ ಹಿಂಸೆಯನ್ನು ಪ್ರೋತ್ಸಾಹಿಸುವ ಮಂದಿ ಬಹಿರಂಗವಾಗಿ ಅದನ್ನು ಟೀಕಿಸುವುದನ್ನು ಪಶ್ಚಿಮ ಬಂಗಾಳದಲ್ಲಿ ಕಾಣಬಹುದು.

ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಬಿಹಾರದಲ್ಲಿ ಈ ಹಿಂದೆ ರಾಷ್ಟ್ರಪತಿ ಆಡಳಿತ ಹೇರಿ ಕೈಸುಟ್ಟುಕೊಂಡಿರುವ ಘಟನೆ ಇನ್ನೂ ನೆನಪಿನಿಂದ ಮಾಸಿಲ್ಲ. ಬಂಗಾಳದಲ್ಲಿ ಕಳೆದ 24 ವರ್ಷಗಳಿಂದ ಸಿಪಿಎಂ ನೇತೃತ್ವದ ಎಡರಂಗ ಆಡಳಿತ ನಡೆಸುತ್ತಿರುವುದನ್ನು ಎನ್‌ಡಿಎ ನಾಯಕರು ಮೊದಲಿಗೆ ತಿಳಿದಿರಬೇಕು. ಕಾನೂನು ಮತ್ತು ಶಿಸ್ತು ಪಾಲನೆ ಹದಗೆಡದಂತೆ ಕೇಂದ್ರ ಸರ್ಕಾರ ರಾಜ್ಯಗಳಿಗೆ ಎಚ್ಚರಿಕೆ ಕೊಡಬಹುದು. ಆದರೆ ಅದನ್ನೇ ರಾಜಕೀಯ ಗುರಿ ಈಡೇರಿಸಿಕೊಳ್ಳಲು ಯತ್ನಿಸುವುದು ಅಪಾಯಕಾರಿ.

ಜನವಾಹಿನಿ-ಸೆ.12, 2000

★ ★ ★

ನಾಲ್ಕೈದು ದಿನಗಳ ಹಿಂದೆಯಷ್ಟೆ ಇದೆ ಜಾರ್ಜ್ ಫರ್ನಾಂಡೀಸರು ಸಂವಿಧಾನದ 356ನೇ ವಿಧಿ ಅನ್ವಯಕ್ಕೆ ಪಶ್ಚಿಮ ಬಂಗಾಳ ಅರ್ಹವಾಗಿಲ್ಲ ಎಂದಿದ್ದರು. ಆದರೆ ತಮ್ಮಹೇಳಿಕೆಯು ಜನಮನದಲ್ಲಿನ್ನೂ ಹಸಿರಿರುವಾಗಲೇ ತಿಪ್ಪರಲಾಗ ಹಾಕಿ ಬಂಗಾಲದಲ್ಲಿನ ಪರಿಸ್ಥಿತಿಯು ಬಿಹಾರಕ್ಕಿಂತ ಹೆಚ್ಚು ಹದಗೆಟ್ಟಿದೆ ಎಂದು ಹೇಳಿದ್ದಾರೆ. ಬಹುಶಃ ಮಮತಾ 'ದೀದಿ'ಯನ್ನು ತೃಪ್ತಿಪಡಿಸಲು ಅವರು ತಮ್ಮ ಮುಂಚಿನ ಹೇಳಿಕೆಯನ್ನು ತಾವೆ ಅಲ್ಲಗಳೆದು ಅವಲಕ್ಷಣಕ್ಕೆ ಒಳಗಾದರಷ್ಟೆ. ಬಂಗಾಳ ಕೋಟೆಯನ್ನು ಮಾರ್ಕ್ಸಿಸ್ಟರಿಂದ ಕಿತ್ತುಕೊಳ್ಳುವ ತಮ್ಮ ಹೋರಾಟಕ್ಕೆ ಕೇಂದ್ರ ಸಕ್ರಿಯವಾಗಿ ಸ್ಪಂದಿಸುತ್ತಿಲ್ಲ ಎಂಬ ಅಳಲಿನಿಂದ ಮಮತಾ ಹತಾಶರಾಗಿದ್ದಾರೆ. ಅದು ಮೈತ್ರಿಕೂಟದಿಂದ ಹೊರಬರುವ ಬೆದರಿಕೆಗೆ ಕಾರಣವಾಗಿ ಪರಿಣಮಿಸಿದೆ.

ಸಂಯುಕ್ತ ಕರ್ನಾಟಕ, ಸೆ 12, 2000

★ ★ ★

ಎಡ ಚಳುವಳಿಯ ವಿರೋಧಿಯಾದ 'ಟೈಂಸ್ ಆಫ್ ಇಂಡಿಯಾ' ಸೆ. 15 ರ ಸಂಪಾದಕೀಯದಲ್ಲಿ ಈ ಮಾತನ್ನು ಹೇಳಬೇಕಾಗಿ ಬಂದಿದೆ.

"ರಾಜಕೀಯವಾಗಿ ಪಶ್ಚಿಮ ಬಂಗಾಳವು ಎರಡು ಶಕ್ತಿಗಳ ಮಧ್ಯೆ ಧ್ರುವೀಕರಣಗೊಂಡಿದೆ. ಭೂಸುಧಾರಣೆಯ ಜಾರಿಯಿಂದ ಇದು ಸಾಧ್ಯವಾಗಿದ್ದು, ಬಡ ರೈತರು ಮತ್ತು ಕೃಷಿಕೂಲಿಕಾರರು ಒಂದೆಡೆಯಾದರೆ ಶ್ರೀಮಂತ ರೈತರು ಇನ್ನೊಂದೆಡೆ ಇದ್ದಾರೆ"

★ ★ ★

ಬಿಜೆಪಿ ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ ಆಡಳಿತ ಪಶ್ಚಿಮ ಬಂಗಾಳ ಸರ್ಕಾರದ ಆಡಳಿತಕ್ಕಿಂತ ಅಸಹನೀಯವಾಗಿದೆ.

ಹೆಚ್.ಡಿ.ದೇವೇಗೌಡ,
ಮಾಜಿ ಪ್ರಧಾನ ಮಂತ್ರಿ

★ ★ ★

ಒಂದು ಸರ್ಕಾರವನ್ನು ಉಳಿಸುವ ಬದಲು ಅದನ್ನು ಇಳಿಸಲು ಹೊರಟಿರುವ ಸರ್ಕಾರದ ಕ್ರಮ ಕಾನೂನು ಬಾಹಿರವಾಗಿದೆ. ಚುನಾಯಿತ ಪ್ರತಿನಿಧಿಗಳಿರುವ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರಲು ಹೊರಟಿರುವ ಕೇಂದ್ರ ಸರಕಾರದ ಕ್ರಮ ಖಂಡನೀಯವಾಗಿದೆ. ತನ್ನ ಮಿತ್ರ ಪಕ್ಷಗಳನ್ನು ಓಲೈಸುವ ಸಲುವಾಗಿ ಎನ್‌ಡಿಎ ಸರ್ಕಾರ ಮಾಡುತ್ತಿರುವ ಈ ಹುನ್ನಾರಗಳನ್ನು ಜನತೆ ಪ್ರತಿಭಟಿಸಬೇಕು. ಪಶ್ಚಿಮ ಬಂಗಾಳದಲ್ಲಿ ಮುಂದೆ ನಡೆಯಲಿರುವ ಚುನಾವಣೆಯಲ್ಲಿ ಜನತೆಯೇ ಈ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾರೆ.

ಬಿ.ಬಿ.ಶಿವಪ್ಪ,
ಬಿಜೆಪಿ ಉಚ್ಚಾಟಿತ ನಾಯಕ

★ ★ ★

ಅನಾವಶ್ಯಕವಾಗಿ ಪ್ರಜಾತಂತ್ರ ಸರ್ಕಾರವನ್ನು ಅಸ್ಥಿರಗೊಳಿಸಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ. ಈ ಸಂವಿಧಾನ ಬಾಹಿರ ಚಟುವಟಿಕೆಗಳಿಂದ ಕೇಂದ್ರ ಸರ್ಕಾರ ಹಿಂದೆ ಸರಿಯಬೇಕು. ರಾಷ್ಟ್ರಪತಿ ಆಡಳಿತ ಹೇರಿದರೆ ನಮ್ಮ ಜನರೇ ಅವರಿಗೆ ಉತ್ತರ ನೀಡುತ್ತಾರೆ ಎಂದು ಅಲ್ಲಿನ ಮುಖ್ಯಮಂತ್ರಿ ಜ್ಯೋತಿಬಸು ಅವರು ಹೇಳಿದ್ದಾರೆ. ಅವಧಿ ಮುಗಿಯುವ ಮುಂಚೆಯೇ ಪ್ರಜಾತಂತ್ರ ಸರ್ಕಾರವನ್ನು ಅಸ್ಥಿರಗೊಳಿಸುವ ಕೇಂದ್ರ ಸರ್ಕಾರದ ಕ್ರಮಕ್ಕೆ ಅಲ್ಲಿನ ಜನತೆ ತಕ್ಕ ಪಾಠ ಕಲಿಸುತ್ತಾರೆ. ರಾಜ್ಯದ ಜನತೆಯ ಆಶೋತ್ತರಗಳಿಗೆ ಕೊಡಲಿ ಏಟು ನೀಡಲು ಕೇಂದ್ರ ಸರ್ಕಾರ ಹೊರಟಿದೆ. ಜಾರ್ಜ್ ಫರ್ನಾಂಡೀಸ್ ಅವರು ನೀಡಿರುವ ವರದಿ ಏಕಪಕ್ಷೀಯವಾಗಿದೆ. ಅವರು ವಿಪರೀತ ಕಲ್ಪನೆಗಳನ್ನು ಇರಿಸಿಕೊಂಡು ಈ ಕೆಲಸ ಮಾಡಿದ್ದಾರೆ.

- ಡಿ.ಬಿ.ಚಂದ್ರೇಗೌಡ,
ಕಾನೂನು ಸಚಿವರು

★ ★ ★

ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವುದು ಎರಡು ಪಕ್ಷಗಳ ಸಮರವಲ್ಲ. ಅಲ್ಲಿ ಭೂ ಜಗಳ ನಡೆಯುತ್ತಿದೆ. ಭೂಮಿ ಇಲ್ಲದವರಿಗೆ ಭೂಮಿ ನೀಡಲು ಹೊರಟಿರುವ ಸರ್ಕಾರ ಉರುಳಿಸಲು ತೃಣಮೂಲ ಕಾಂಗ್ರೆಸ್‌ನವರು ಪಿತೂರಿ ನಡೆಸಿದ್ದಾರೆ. ಅಲ್ಲಿ ರಾಷ್ಟ್ರಪತಿ ಆಡಳಿತ ಹೇರಿದರೆ ದೊಡ್ಡ ಪ್ರಮಾಣದ ಪ್ರತಿಭಟನೆ ನಡೆಸುತ್ತೇವೆ.

- ಎಸ್. ಸೂರ್ಯನಾರಾಯಣ ರಾವ್,
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ

★ ★ ★

ಬೇರೆ ರಾಜ್ಯಗಳಿಗೆ ಹೋಲಿಸಿದರೆ ಪಶ್ಚಿಮ ಬಂಗಾಳದಲ್ಲಿ ಕಾನೂನು ಸುವ್ಯವಸ್ಥೆ ಚೆನ್ನಾಗಿಯೇ ಇದೆ. ತೃಣಮೂಲ ಕಾಂಗ್ರೆಸ್ ಹಾಗೂ ಕಾಂಗ್ರೆಸ್ ಪಕ್ಷಗಳೆರಡೂ ಕಾರಣ ಇಲ್ಲದೆ ಎಡ ರಂಗದ ಮೇಲೆ ಆರೋಪ ಮಾಡುತ್ತಿವೆ. ಕೇಂದ್ರ ಸರ್ಕಾರ ಸಂವಿಧಾನ 356ನೇ ವಿಧಿಯನ್ನು ದುರುಪಯೋಗ ಮಾಡಲು ಹೊರಟಿದೆ. ಸಮಾಜವಾದಿ ಮುಖವಾಡ ಹಾಕಿರುವ ರಕ್ಷಣಾ ಸಚಿವರು ಈಗ ಆರ್.ಎಸ್.ಎಸ್. ಸಂಘಟನೆಯ ಮುಖವಾಣಿಯಾಗಿದ್ದಾರೆ. ರಾಜಕೀಯ ದುರುದ್ದೇಶದಿಂದ ಕೂಡಿರುವ ಕೇಂದ್ರ ಸರ್ಕಾರದ ಕ್ರಮವನ್ನು ನಾವು ಖಂಡಿಸುತ್ತೇವೆ.

- ಅನಂತಸುಬ್ಬರಾವ್,
ಸಿಪಿಐ ಸಹ ಕಾರ್ಯದರ್ಶಿ.

ಕುತಂತ್ರ

ರಾಜ್ಯಗಳಿಗಿಂತ ಪ.ಬಂಗಾಲದ ಕಾನೂನು ವ್ಯವಸ್ಥೆ ಉತ್ತಮವಾಗಿದೆ. ಗೃಹಮಂತ್ರಾಲಯದ, ಅಪರಾಧ ಶೋಧ ವಿಭಾಗದ ವಾರ್ಷಿಕ ವರದಿ ಕೂಡಾ ಕಣ್ಣಿಗೆ ರಾಚುವಂತೆ ತನ್ನ ವರದಿಯಲ್ಲಿ ಈ ಅಂಶವನ್ನು ಹೇಳಿದೆ. ಅಲ್ಪಸಂಖ್ಯಾತರ ಮೇಲೆ ನಿರ್ಭಯವಾಗಿ ನಡೆಯುತ್ತಿರುವ ಅತ್ಯಂತ ಘೋರ ಆಕ್ರಮಣಗಳನ್ನು ನಿಯಂತ್ರಿಸಲಾಗದೇ ಬಿಜೆಪಿಯೇ ಆಳುತ್ತಿರುವ ಗುಜರಾತ್ ರಾಜ್ಯ ಕೆಟ್ಟ ಹೆಸರು ಹೊತ್ತಿದೆ. ಅಧಿಕಾರದಲ್ಲಿ ಉಳಿಯಬೇಕೆನ್ನುವ ಒಂದೇ ಕಾರಣದಿಂದ 'ಮಾಫಿಯಾ'ಗಳೊಂದಿಗೆ ನೇರ ಸಂಬಂಧ ಹೊಂದಿ, ಅವರಿಗೆ ಸಚಿವ ಸ್ಥಾನವನ್ನೂ ಕೊಟ್ಟಿರುವ ಉತ್ತರ ಪ್ರದೇಶದಲ್ಲಿ ಏನು ನಡೆಯುತ್ತಿದೆ. ಈ ರಾಜ್ಯಗಳ ಬಗ್ಗೆ ಇವರೇನು ಹೇಳುತ್ತಾರೆ. ಇದು ಅವರ ಪ್ರಹಸನದ ದುರಂತದ ಅಂಶ.

ಪ.ಬಂಗಾಲಕ್ಕೆ ಸಂಬಂಧಿಸಿದಂತೆ ಎಲ್ಲ ಜನರಿಗೂ ಗೊತ್ತಿರುವಂತೆ ಕಾನೂನು-ವ್ಯವಸ್ಥೆಯ ಸಮಸ್ಯೆಯನ್ನು ಸೃಷ್ಟಿಸುತ್ತಿರುವುದು ಮಿಸ್ ಮಮತಾ ಬ್ಯಾನರ್ಜಿ ಮತ್ತವರ ತೃಣಮೂಲ ಕಾಂಗ್ರೆಸ್ ಪಕ್ಷ. 'ದಿ ಹಿಂದು' ಪತ್ರಿಕೆಯೇ ಬರೆಯುವಂತೆ, "ಅವರ ಪ್ರಚಾರದ ಕ್ರಮ ಸಹಜವಾಗಿಯೇ ಅವರ ಮತ್ತು ಆಡಳಿತಾರೂಢ ಎಡರಂಗ ಪಕ್ಷದ ಕಾರ್ಯಕರ್ತರ ಮಧ್ಯೆ ಕದನ ತಂದಿಟ್ಟಿದೆ.

ವಾಸ್ತವತೆಯ ಎರಡು ಅಂಶಗಳು: ಕೇಂದ್ರ ಸಚಿವ ಫರ್ನಾಂಡೀಸ್, ಎಲ್.ಕೆ.ಅಡ್ವಾಣಿ ಅಂಡ್ ಕಂಪನಿಯವರ ಹೇಳಿಕೆಗಳಿಗೆ ಪ.ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸು ತೀವ್ರವಾಗಿ ಪ್ರತಿಕ್ರಿಯಿಸಿ ಅವರ ಹೇಳಿಕೆಯಲ್ಲಿ ಲವಲೇಶವೂ ಹುರುಳಿಲ್ಲವೆಂದು ತಿಳಿಸಿದ್ದಾರೆ. ಎನ್‌ಡಿಎ ನಾಯಕರು ಪ.ಬಂಗಾಲದ ಎಡರಂಗ ಸರ್ಕಾರದ ಮೇಲೆ ಈ ರೀತಿಯ ದೋಷಾರೋಪವನ್ನು ಹೊರಿಸಲು ಎರಡು ಕಾರಣಗಳಿವೆ.

ಕಳೆದ 23 ವರ್ಷಗಳಿಂದ ಭಾರತದ ಸಂವಿಧಾನದ ಚೌಕಟ್ಟಿನೊಳಗೇ ಇರುವ ಅವಕಾಶಗಳನ್ನೆಲ್ಲ ಬಳಸಿಕೊಂಡು, ಬೇರೆಯೇ ಆದ ಜನಪರವಾದ ನೀತಿಗಳನ್ನು ಎಡರಂಗ ಜಾರಿಗೆ ತರುತ್ತಿದೆ. 77 ರಿಂದಲೂ ಆಳ್ವಿಕೆ ನಡೆಸುತ್ತಿರುವ ಸರ್ಕಾರ. ಎಡರಂಗದ ನೀತಿಗಳು ಇತರ ಬಂಡವಾಳಶಾಹಿ ಭೂಮಾಲಕ ಪರ ಸರ್ಕಾರಗಳಿಗಿಂತ ಭಿನ್ನವಾಗಿದೆ ಎಂಬುದನ್ನು ಸಾಬೀತು ಪಡಿಸಿದೆ. ಅಲ್ಲಿ ಜಾರಿಗೆ ತಂದ ಸಮಗ್ರ ಭೂ ಸುಧಾರಣಾ ನೀತಿ, ಅಧಿಕಾರ-ವಿಕೇಂದ್ರೀಕರಣದ ಮೂಲಕ ಅತ್ಯಂತ ಕೆಳಹಂತದವರೆಗೂ ಅಧಿಕಾರ ವಿಸ್ತರಣೆ, ದುರ್ಬಲ ಮತ್ತು ಅತ್ಯಂತ ಕೆಳಜಾತಿಯ ಜನರೂ ಗೌರವದಿಂದ ತಲೆ ಎತ್ತಿ ನಡೆಯುವಂತಹ ವಾತಾವರಣ ನಿರ್ಮಾಣ, ಜಾತ್ಯಾತೀತ ಮೌಲ್ಯಗಳ ರಕ್ಷಣೆಯಿಂದಾಗಿ ಅಲ್ಪಸಂಖ್ಯಾತರ ಬದುಕು ಮತ್ತು ಆಸ್ತಿ-ಪಾಸ್ತಿ ರಕ್ಷಣೆ, ಅಲ್ಲದೇ ಅತ್ಯಂತ ದೀರ್ಘಕಾಲದ ಕಳಂಕ ರಹಿತ ಆಡಳಿತ.... ಇವು ಅಂತರಾಷ್ಟ್ರೀಯ ಗಮನ ಸೆಳೆದಿದೆ ಮತ್ತು ಎಲ್ಲಾ ಪ್ರಜಾಪ್ರಭುತ್ವ ಪ್ರೇಮಿ ಜನರ ಮೆಚ್ಚುಗೆ ಗಳಿಸಿದೆ. ಈ ಕಾರಣದಿಂದಾಗಿಯೇ ಪ.ಬಂಗಾಳದ ಜನ ಕಳೆದ 5 ಬಾರಿಯಿಂದ ಎಡರಂಗ ಸರ್ಕಾರವನ್ನೇ ಅಧಿಕಾರಕ್ಕೆ ತರುತ್ತಿದ್ದಾರೆ.

ಇನ್ನೆರಡು ಎಡರಂಗ ಸರ್ಕಾರಗಳನ್ನು ಹೊಂದಿರುವ ತ್ರಿಪುರಾ, ಕೇರಳ ರಾಜ್ಯಗಳು ಕೂಡ ಕಳಪೆಯವಲ್ಲ. ತ್ರಿಪುರಾ ರಾಜ್ಯದಲ್ಲಿ, ಉಳಿದೆಲ್ಲ ವಿಷಯಗಳೊಂದಿಗೆ ಅಲ್ಲಿನ ಸಿಪಿಐ(ಎಂ) ಕಾರ್ಯಕರ್ತರು ತಮ್ಮ ಜೀವವನ್ನೇ ಒತ್ತೆ ಇಟ್ಟು, ದೇಶದ ಐಕ್ಯತೆ, ಸಮಗ್ರತೆಗಾಗಿ ಹೋರಾಟ ನಡೆಸುತ್ತಿದ್ದಾರೆ. ಆದಿವಾಸಿ ಮತ್ತು ಆದಿವಾಸಿಗಳಲ್ಲದವರ ಮಧ್ಯೆ ಮೈತ್ರಿ ಮತ್ತು ಆದಿವಾಸಿ ಮತ್ತಿತರ ಕುಲಸಂಬಂಧಿ (Ethnic)ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವುದನ್ನು ತೋರಿಸಿಕೊಟ್ಟಿದ್ದು ತ್ರಿಪುರಾದ ಎಡರಂಗ ಸರ್ಕಾರ.

ಎರಡನೇಯ ಅಂಶ - ಎಡರಂಗ ಸರ್ಕಾರ ಮತ್ತು ಬಿಜೆಪಿ ಸರ್ಕಾರಗಳ ನಡುವೆ ಇರುವ ಭಿನ್ನತೆಗಳು. ಕಳೆದ ಎರಡೂವರೆ ವರ್ಷಗಳಲ್ಲಿ ಬಿಜೆಪಿ ಆಳುತ್ತಿರುವ ರಾಜ್ಯಗಳಲ್ಲಿ ಅಲ್ಲಿನ ಸರ್ಕಾರಗಳು ತಮ್ಮ ದಿವಾಳಿಕೋರ ನೀತಿಯನ್ನು ತೋರಿಸಿವೆ. ದೊಡ್ಡ ಬಂಡವಾಳಿಗರನ್ನು/ಬಹುರಾಷ್ಟ್ರೀಯ ಕಂಪನಿಗಳನ್ನು ಸಂತುಷ್ಟಗೊಳಿಸಲು ದೇಶದ ಸಂಪತ್ತನ್ನೇ ಲೂಟಿ ಹೊಡೆಯುವ, ಪ್ರತೀಕಾರ ಭಾವದಿಂದ ಜನವಿರೋಧಿ, ದೇಶ-ವಿರೋಧಿ ನೀತಿಗಳನ್ನು ಜಾರಿಗೆ ತರುವ, ವಿಶ್ವದ ಕಣ್ಣಿನಲ್ಲಿ ಸಣ್ಣವರಾದರೂ ಪರವಾಗಿಲ್ಲ ಎಂಬಂತೆ ಸಾಮ್ರಾಜ್ಯಶಾಹಿ ಪರ ವಿದೇಶಾಂಗ ನೀತಿಯನ್ನು ಅನುಸರಿಸುವ(ಉದಾ: ಇತ್ತೀಚಿನ ಅಮೆರಿಕಾ ಭೇಟಿಯ ಸಂದರ್ಭದಲ್ಲಿ ವಾಜಪೇಯಿಯವರೊಂದಿಗೆ ಕ್ಲಿಂಟನ್ ಜೊತೆಯ ಭೇಟಿಯ ಅವಧಿಯನ್ನು ಸಾಧ್ಯವಾದಷ್ಟು ಹೆಚ್ಚಿಸುವುದು, ಕ್ಲಿಂಟನ್‌ಗೆ ನಿಕಟವಾಗಿ ಭೋಜನ ಕೂಟದಲ್ಲಿ ಇರಲು ಕಲ್ಪಿಸುವುದು ಅಧಿಕಾರ ವರ್ಗದ ಪ್ರಥಮ ಆದ್ಯತೆಯಾಗಿತ್ತು) ಇದುವರೆಗೆ ನಡೆಸಿಕೊಂಡುಬಂದ ಅಲಿಪ್ತ ನೀತಿ, ಶಾಂತಿ ಮತ್ತು ಅಣ್ವಸ್ತ್ರ ವಿರೋಧಿ ನೀತಿ, ವಸಾಹತು ಶಾಹಿ ಸಾಮ್ರಾಜ್ಯಶಾಹಿ ವಿರೋಧಿ ನೀತಿ, ಪಕ್ಷಪಾತವಿಲ್ಲದ ವಿಶ್ವ ಆರ್ಥಿಕ ನೀತಿಗಾಗಿ ಪ್ರಯತ್ನಗಳಿಗೆ ತಿಲಾಂಜಲಿ ನೀಡುವ, ಈ ಸರ್ಕಾರವಿರುವವರೆಗೆ ನಿರ್ಭಯವಾಗಿ ಕೊಳ್ಳೆ ಹೊಡೆಯಬಹುದೆನ್ನುವ ಕೋಮುವಾದಿ, ಫ್ಯಾಸಿಸ್ಟ್ ಶಕ್ತಿಗಳಿಗೆ ಸಮ್ಮತಿ ಸೂಚನೆಗಳು ಬಿಜೆಪಿ ಸರ್ಕಾರದಲ್ಲಿ ನಾವು ನೋಡುವ ಅಂಶಗಳು.

ಎಡರಂಗ ಮತ್ತು ಬಿಜೆಪಿ ಸರ್ಕಾರಗಳ ಮಧ್ಯೆ ಇರುವ ಈ ಭಿನ್ನತೆ ಅವುಗಳ ನಡುವಳಿಕೆಯ ಮಾದರಿಯನ್ನು ತೋರಿಸುತ್ತದೆ. ಇದುವರೆಗೂ ಎಡರಂಗ ಈ ವಿಶ್ವಾಸದ ಮೂಲಕವೇ ಜನರ ಬಳಿಗೆ ಹೋಗುತ್ತಿದೆಯಾದರೆ ಬಿಜೆಪಿ ಸದಾ ಅಧಿಕಾರ ಕಳೆದುಕೊಳ್ಳುವ ಭಯದೊಂದಿಗೇ, ಮಿತ್ರಕೂಟದ ಒಂದಲ್ಲ ಒಂದು ಪಕ್ಷದ ಬೇಡಿಕೆಗಳನ್ನು ಮಾನ್ಯ ಮಾಡಲು ಗೋಣು ಅಲ್ಲಾಡಿಸುತ್ತಲೇ ಬಂದಿವೆ. ಇತ್ತೀಚಿನ ತೃಣಮೂಲ ಕಾಂಗ್ರೆಸ್ಸಿನ ನಾಯಕಿ ಮಿಸ್ ಮಮತಾ ಬ್ಯಾನರ್ಜಿಯವರನ್ನು ತೃಪ್ತಿಗೊಳಿಸಲು ಮಾಡುತ್ತಿರುವ ಪ್ರಯತ್ನವಂತೂ, ಬಿಜೆಪಿ ತರಗೆಲೆಗೂ ಹೆದರುವ ಒಂದು ಕನಿಷ್ಟಪ್ರಾಣಿಗಿಂತಲೂ ಕಳಪೆ! ಎಂಬುದನ್ನು ಖಚಿತಪಡಿಸುತ್ತದೆ.

ಪ.ಬಂಗಾಳದ ಎಡರಂಗ ಸರ್ಕಾರವನ್ನು ಬೆದರಿಸ ಹೊರಟಿರುವ ಬಿಜೆಪಿ ಹೊಂದಿರುವ ಮೂರ್ಖತನದ ಈ ಪ್ರಯತ್ನ ಭಾರತದ ರಾಜಕೀಯದ ಅತ್ಯಂತ ದುರಂತ ಪ್ರಹಸನ.

ಪ್ರಜಾಪ್ರಭುತ್ವ ಅಪಾಯದಲ್ಲಿದೆ: ಇವತ್ತಿನ ಸಮಸ್ಯೆ ಕೇವಲ ಎಡರಂಗದ್ದು ಮಾತ್ರವಲ್ಲ. ಬದಲಿಗೆ ಇಡೀದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯೇ ಅಪಾಯದಲ್ಲಿದೆ ಎಂಬುದನ್ನು ರಾಷ್ಟ್ರದ ರಾಜಕೀಯದಲ್ಲಿರುವ ಎಲ್ಲರೂ ಅರ್ಥಮಾಡಿಕೊಳ್ಳಬೇಕು. ನಡೆಯುತ್ತಿರುವ ವಿದ್ಯಮಾನಗಳಿಂದ ಎಡರಂಗ ಸರ್ಕಾರವೇನೂ ಅಧೀರವಾಗಿಲ್ಲ. ಕಾರಣ ಇಂತಹ ದಾಳಿ, ದಬ್ಬಾಳಿಕೆಗಳು ಕಮ್ಯುನಿಸ್ಟರಿಗೆ ಹೊಸತೇನಲ್ಲ. ಬ್ರಿಟಿಷರು ಕಮ್ಯುನಿಸ್ಟರ ಮೇಲೆ ಸತತ ಧಾಳಿ-ದೌರ್ಜನ್ಯ ನಡೆಸುತ್ತಿದ್ದಾಗ. ದೂರವರ್ತಿ ನಿಯಂತ್ರಕ(Remote control)ದ ಮೂಲಕ ಬಿಜೆಪಿಯನ್ನು ನಿಯಂತ್ರಿಸುತ್ತಿರುವ ಆರ್.ಎಸ್.ಎಸ್. ದೇಶದಲ್ಲಿ ಕೋಮುಗಲಭೆ ಎಬ್ಬಿಸುವ ಮೂಲಕ ತಾವು ನಿಮ್ಮ ಪರ ಇದ್ದೇವೆ ಎಂಬ ಸೂಚನೆಯನ್ನು ಬ್ರಿಟಿಷರಿಗೆ ಕೊಡುತ್ತಾ ಅವರ ಕೃಪಾಕಟಾಕ್ಷಕ್ಕೆ ಹವಣಿಸುತ್ತಿತ್ತು.

ತೆಲಂಗಾಣ ಮತ್ತಿತರ ಹೋರಾಟದ ಸಂದರ್ಭಗಳಲ್ಲಿ ಕಮ್ಯುನಿಸ್ಟರು ತೀವ್ರ ಪ್ರತಿಘಾತವನ್ನೆದುರಿಸಿದ್ದಾರೆ. ಮಾರ್ಚ್ 71 ರಿಂದ ಜೂನ್ 77 ರವರೆಗೆ ಬಂಗಾಲದಲ್ಲಿ ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯನ್ನು ಎದುರಿಸಿದ್ದಾರೆ. 1200 ಕ್ಕೂ ಹೆಚ್ಚು ಸಿಪಿಐ(ಎಂ) ಕಾರ್ಯಕರ್ತರ ಹತ್ಯೆಯಾಗಿದೆ. 20000 ಕ್ಕೂ ಹೆಚ್ಚು ಜನ ಮನೆ, ಆಸ್ತಿ, ಪಾಸ್ತಿ ಕಳೆದುಕೊಂಡಿದ್ದಾರೆ. ಪಕ್ಷದ ಅನೇಕ ಕಛೇರಿಗಳ ಮೇಲೆ ಧಾಳಿ ನಡೆದು, ಕಬ್ಜಾ ಆಗಿದ್ದವು. ಪಕ್ಷದ ಸಾರ್ವಜನಿಕ ಚಟುವಟಿಕೆಗಳ ಮೇಲೆ ಅನಧಿಕೃತ ನಿಷೇಧ ಹೇರಲಾಗಿತ್ತು. (1988 ರಿಂದ 93 ರವರೆಗೆ ತ್ರಿಪುರಾದಲ್ಲಿಯೂ ಅರೆಫ್ಯಾಸಿ ದಬ್ಬಾಳಿಕೆ ಎದುರಿಸಲಾಗಿದೆ.) ವಾಸ್ತವಾಂಶವೆಂದರೆ ಇಂತಹ ಧಾಳಿ-ದಬ್ಬಾಳಿಕೆಗಳ ಮಧ್ಯದಲ್ಲಿಯೇ ಸಶಕ್ತ ಎಡರಂಗ 77 ರಲ್ಲಿ ಹುಟ್ಟಿ ಬಂದಿದ್ದು. ಆದ್ದರಿಂದ ಎಡರಂಗಕ್ಕೆ ಎನ್‌ಡಿಎ-ದುಷ್ಟಕೂಟದ ಈ ಪ್ರಯತ್ನದ ಬಗ್ಗೆ ಭಯವೂ ಇಲ್ಲ. ವಿಷಣ್ಣತೆಯೂ ಇಲ್ಲ ಎಂಬುದನ್ನು ನಾವು ಪುನರುಚ್ಚರಿಸುತ್ತೇವೆ. ಬದಲಿಗೆ ಯಾವುದೇ ವ್ಯರ್ಥ ಸಾಹಸ ಮಾಡಲು ಹೊರಟರೆ ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್‌ಗಳು ಜನರಿಂದ ಅದಕ್ಕೆ ಪ್ರತಿ ಏಟನ್ನು ತಿನ್ನುತ್ತಾರೆ. ತೆಭಾಗ ಹೋರಾಟದ ಮೂಲಕ ಸಿಕ್ಕ ಹಕ್ಕುಗಳನ್ನು ಬರ್ಗಾದಾರರು, ಭೂಸುಧಾರಣೆಯಿಂದ ಬದುಕನ್ನು ಪಡೆದ ಹಳ್ಳಿಯ ಬಡ ಕೃಷಿಕರು ರಾಜಕೀಯ ಪ್ರಜ್ಞೆಯುಳ್ಳ ರಾಜ್ಯದ



ಜನತೆ ಹಲವು ವರ್ಷಗಳಿಂದ ಎಡರಂಗದ ಜನಪರ ನೀತಿಯಿಂದ ಪಡೆದ ಹತ್ತು ಹಲವು ಸೌಕರ್ಯಗಳನ್ನು ಅಷ್ಟು ಸುಲಭವಾಗಿ ಮರೆತುಬಿಡುವರೇ?

ನಿಜವೇನೆಂದರೆ ಮಮತಾ ಬ್ಯಾನರ್ಜಿಯ ಕುತಂತ್ರದಿಂದ ಈಗ ಇಲ್ಲಿ ನಡೆಯುತ್ತಿರುವ ವರ್ಗಸಂಘರ್ಷದಲ್ಲಿ ಸ್ಥಾಪಿತ ಹಿತಾಸಕ್ತಿಗಳು ತಾವು ಕಳೆದುಕೊಂಡ ಸ್ಥಾನಮಾನಗಳನ್ನು ಪುನರ್‌ಗಳಿಸಿಕೊಂಡು ಶೋಷಿತ ಜನರನ್ನು ಗುಲಾಮಗಿರಿಗೆ ನೂಕಲು ಪ್ರಯತ್ನಿಸುತ್ತಿದ್ದಾರೆ.

ರಾಜ್ಯದಲ್ಲಿ ಪ್ರಜಾಪ್ರಭುತ್ವದ ಕೊಲೆಯಾಗಿದೆ ಎಂದು ಬೊಬ್ಬಿಡುತ್ತಿರುವ ಈ ಮಹಾಮಹಿಳೆ, ಅದುಹೇಗೆ ವಿರೋಧ ಪಕ್ಷಗಳು ಚುನಾವಣೆಯಲ್ಲಿ ಕೇವಲ 42 ರಿಂದ 50 ಪ್ರತಿಶತ ಮತಗಳನ್ನಷ್ಟೇ ಗಳಿಸುತ್ತಿವೆ ಎಂಬುದಕ್ಕೆ ನಿರುತ್ತರರಾಗಿದ್ದಾರೆ. ಬಿಜೆಪಿ-ಮಮತಾ ಬ್ಯಾನರ್ಜಿಯವರ ಈ ದುಷ್ಟ ತಂತ್ರಕ್ಕೆ ಸರ್ವರೀತಿಯ ಬೆಂಬಲ ನೀಡುತ್ತಿರುವ ಮಾಧ್ಯಮಗಳು ಈ ಮೇಲಿನ ಸತ್ಯವನ್ನು ಅಲ್ಲಗಳೆಯಲಿಲ್ಲವೇ?

ಎಲ್ಲರಿಗೂ ಇದು ಪರೀಕ್ಷಾ ಕಾಲ: ಒಕ್ಕೂಟ ರಚನೆ ಮತ್ತು ಸ್ವಾಯತ್ತತೆಗಳನ್ನು ಪ್ರತಿಪಾದಿಸುವ ಪ್ರಾದೇಶಿಕ ಪಕ್ಷಗಳು ಬಿಜೆಪಿಯ ಮಿತ್ರ ಕೂಟದಲ್ಲಿವೆ. ರಾಷ್ಟ್ರಪತಿ ಆಳ್ವಿಕೆಯನ್ನು ರಾಜ್ಯಗಳ ಮೇಲೆ ಹೇರ ಹೊರಟಾಗ, ಇದೇ ಕೆಲವು ಪಕ್ಷಗಳು ಅದನ್ನು ವಿರೋಧಿಸಿದ್ದವು. ಒಕ್ಕೂಟ ರಚನೆ(Fedaral structure)ಯ ರಕ್ಷಣೆಗಾಗಿ, ಎನ್.ಟಿ.ಆರ್.ರವರು ಬದುಕಿದ್ದಾಗ ಆಂಧ್ರ ಪ್ರದೇಶದಲ್ಲಿ ತೆಲುಗುದೇಶಂ ಹೋರಾಟ ನಡೆಸಿದ್ದನ್ನು ಯಾರೂ ಮರೆಯಲು ಸಾಧ್ಯವಿಲ್ಲ.

ಕೇಸರೀ ಪಡೆ ನಮ್ಮ ಜಾತ್ಯಾತೀತ ಪದರವನ್ನೇ ಹರಿಯಲು ಹೊರಟಾಗ ನಮ್ಮ ಸ್ವತಂತ್ರ ವಿದೇಶಾಂಗ ನೀತಿಗೆ ತಿಲಾಂಜಲಿ ಇಡುವಾಗ, ತಮ್ಮ ದೊಡ್ಡಣ್ಣ! ಜನವಿರೋಧಿ ಆರ್ಥಿಕ ನೀತಿಗಳನ್ನು ಜಾರಿಗೆ ತರುವಾಗ ಮೌನ ಸಮ್ಮತಿ ನೀಡಿದ ಈ ಸರ್ಕಾರದ ಮಿತ್ರ ಪಕ್ಷಗಳು ನಮ್ಮ ಒಕ್ಕೂಟ ಸ್ವರೂಪಕ್ಕೇ ಅಪಾಯ ಬಂದೊದಗಿದಾಗ ಹೇಗೆ ವರ್ತಿಸುತ್ತಿವೆ ಎಂಬುದನ್ನು ಜನ ಕಾದು ನೋಡುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಬಗ್ಗೆ ಕೂಡ, ಬಂಗಾಲದಲ್ಲಿ ನಿಜವಾದ ಪರೀಕ್ಷೆ ಬಂದರೆ ಅದರ ನಿಲುವೇನು ಎಂಬ ಬಗ್ಗೆ ಈಗಾಗಲೇ ಗೊಂದಲ ಹುಟ್ಟಿದೆ. ಅಧಿಕಾರದಲ್ಲಿದ್ದಾಗ ಅನುಸರಿಸಿದ ತಪ್ಪು ನೀತಿಗಳಿಂದ, ಜನವಿರೋಧಿ ಧೋರಣೆಗಳಿಂದ ಮತ್ತು 90 ಬಾರಿ ಸಂವಿಧಾನದ 356ನೇ ಕಲಮನ್ನು ವಿರೋಧ ಪಕ್ಷಗಳು ಆಳುತ್ತಿರುವ ಬೇರೆ ಬೇರೆ ರಾಜ್ಯಗಳ ಮೇಲೆ ಪ್ರಯೋಗಿಸುವ ಮೂಲಕ ಈಗಾಗಲೇ ಜನ ಬೆಂಬಲವನ್ನು ಕಳೆದುಕೊಂಡಿರುವ ಕಾಂಗ್ರೆಸ್ ತನ್ನ ಅನುಭವದಿಂದ ಪಾಠ ಕಲಿತಿದೆಯೇ ಎಂಬುದನ್ನು ನೋಡಬೇಕಾಗಿದೆ.

ಏನೇ ಇರಲಿ ಬೇರೆ ಯಾವುದೇ ಮಾರ್ಗದಿಂದ ಎಡರಂಗ ಸರ್ಕಾರವನ್ನು ಅಲ್ಲಾಡಿಸಲಾಗದ ತೃಣಮೂಲ ಬಿಜೆಪಿಗಳು ತಮ್ಮ ಕುಯುಕ್ತಿಯ ಮೂಲಕ ಅದನ್ನು ಸಾಧಿಸಹೊರಟಿದ್ದಾರೆ. ಇನ್ನೆಂಟು ತಿಂಗಳಲ್ಲಿ ವಿಧಾನಸಭೆ ಚುನಾವಣೆ ಆ ರಾಜ್ಯದಲ್ಲಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಿ ಆ ಮೂಲಕ ತಮ್ಮ ರಾಜ್ಯಭಾರದಲ್ಲಿ ಚುನಾವಣೆ ನಡೆಸುವ ಇವರು ನಡೆಸುವ ಹುನ್ನಾರ ಸಫಲವಾಗುವುದಿಲ್ಲ. ಬದಲಿಗೆ ಬಂಗಾಳದ ಎಚ್ಚೆತ್ತ ಜನತೆ ಅವರ ಕುತಂತ್ರಕ್ಕೆ ಸರಿಯಾದ ಉತ್ತರ ನೀಡುತ್ತಾರೆ ಮತ್ತು ಈ ಹೋರಾಟದಲ್ಲಿ ಈಗ ಬೇರೆ ಬೇರೆ ಪಕ್ಷಗಳ ಯೋಗ್ಯತೆಗಳು ಜನರ ಮುಂದೆ ತೆರೆದಿಡಲ್ಪಡುತ್ತವೆ. ○

ಬೆದರಿಕೆಗೆ ಎದಿರೇಟು



ಎಷ್ಟೊಂದು ಇಂತಹ ಬೆದರಿಕೆಗಳನ್ನು ಎದುರಿಸಿದ್ದೇವೆ. ಜನಪರ ಚಳುವಳಿಗಳನ್ನು ಕಟ್ಟುವ ಸಂದರ್ಭದಲ್ಲಿ ಆಳುವ ವರ್ಗದ ಕ್ಷುಲ್ಲಕ ಬೆದರಿಕೆಗಳಿಗೆ ಮಣಿಯದೆ ಮುನ್ನುಗ್ಗಿದುದರ ಫಲವಾಗಿ ಜನರ ಬೆಂಬಲ ಗಳಿಸಿ 24 ವರ್ಷಗಳಿಂದ ಅಧಿಕಾರದಲ್ಲಿರಲು ಸಾಧ್ಯವಾಯಿತು. ಜನರಿಂದ ಆಯ್ಕೆಯಾದ ಸರಕಾರವನ್ನು ಉರುಳಿಸಿದ್ದೇ ಆದಲ್ಲಿ ಜನರು ತೀಕ್ಷ್ಣ ಪ್ರತಿಕ್ರಿಯೆ ನೀಡುತ್ತಾರೆ" ಎಂದು ಕಾಂ. ಜ್ಯೋತಿಬಸು ಗುಡುಗಿದ್ದಾರೆ. ಬಂಗಾಳದ 'ಲೇಡಿ ಬಾಳಾ ಠಾಕ್ರೆ' ಎಂದು ಕುಪ್ರಸಿದ್ಧರಾದ ಮಮತಾ ಬ್ಯಾನರ್ಜಿಯ ಒತ್ತಾಯದಮೇರೆಗೆ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲು ಉತ್ಸುಕವಾಗಿರುವ ಸಂದರ್ಭದಲ್ಲಿ ಕಾಂ. ಜ್ಯೋತಿಬಸು ಎಸ್‌ಎಫ್‌ಐ/ಡಿವೈಎಫ್‌ಐ ನೇತೃತ್ವದಲ್ಲಿ ನಡೆದ ಬೃಹತ್ ವಿದ್ಯಾರ್ಥಿ-ಯುವಜನರನ್ನು ಉದ್ದೇಶಿಸಿ ಮಾತನಾಡಿದರು.

ಮಾನವ ಒಮ್ಮೆ ಮಾತ್ರ ಬದುಕುತ್ತಾನೆ, ಬದುಕಿನಲ್ಲಿ ಸಾವು ಒಮ್ಮೆ ಮಾತ್ರ ಬರುತ್ತದೆ. ಆದರೆ ಸಾವು ವ್ಯರ್ಥವಾಗದೆ, ಜನರ ಹೋರಾಟಕ್ಕಾಗಿ ಮುಡಿಪಾಗಿಟ್ಟು ಮಡಿದೆ' ಎಂಬ ಸಾರ್ಥಕವನ್ನು ಕಾಣಬೇಕೆಂದು 87 ವರ್ಷದ 'ಯುವಕ' ಜ್ಯೋತಿ ಬಸು ನವ ಸಹಸ್ರಮಾನದ ಯುವಜನರಿಗೆ ಕರೆ ನೀಡಿದರು.

ಮುಂದಿನ ವರ್ಷ ಅಸೆಂಬ್ಲಿ ಚುನಾವಣೆ ನಡೆಯಲಿದೆ. ಹಿಂದೆ ಐದು ಬಾರಿ ಗೆದ್ದಿದ್ದೇವೆ. ಈ ಬಾರಿ ಹೇಗಾದರೂ ಮಾಡಿ ಅಧಿಕಾರ ಕಿತ್ತುಕೊಳ್ಳಬೇಕೆಂದು ವಿರೋಧಿ ಕೂಟಗಳು ಹೊಂಚು ಹಾಕುತ್ತಿವೆ. ಹಲವು ಪ್ರದೇಶಗಳಲ್ಲಿ ಗಲಭೆಗಳನ್ನು ಹುಟ್ಟು ಹಾಕಿ, ಕೆಲವು ಚುನಾವಣೆಗಳನ್ನು ಗೆಲ್ಲಲು ಸಾಧ್ಯವಾಗಿದ್ದರೂ, ಇಡೀ ರಾಜ್ಯದಲ್ಲಿ ಚುನಾವಣೆ ಗೆಲ್ಲುವುದು ಸಾಧ್ಯವಿಲ್ಲ ಎಂದು ತೃಣಮೂಲ - ಬಿಜೆಪಿ ಕೂಟಕ್ಕೆ ತಿಳಿದಿದೆ. ಆದಕ್ಕಾಗಿಯೇ ಸಂವಿಧಾನದ 356 ನೇ ವಿಧಿಯನ್ನು ಉಪಯೋಗಿಸಿ, ಚುನಾಯಿತ ಸರಕಾರವನ್ನು ಅಧಿಕಾರದಿಂದ ಕಿತ್ತೆಸೆದು ಬಾಡಿಗೆ ಸರಕಾರವನ್ನು ಸ್ಥಾಪಿಸುವ ಕುತಂತ್ರ ನಡೆಯುತ್ತಿದೆ ಎಂದು ಬಸುರವರು ನುಡಿದರು. "ಬಹುಮತ ನಮ್ಮ ಕಡೆಗಿದೆ. ಬಂಗಾಳದ ಬಹುಪಾಲು ಜನರು ನಮ್ಮ ಬೆಂಬಲಕ್ಕಿದ್ದಾರೆ. ಹೀಗಿದ್ದು, ಸರಕಾರ ಉರುಳಿಸುವುದು ಅನಾಗರೀಕತೆಯ ಸಂಕೇತ"ಎಂದು ಹೇಳಿದ ಬಸು ಇದನ್ನು ಪ್ರತಿಭಟಿಸುವುದು ಹೇಗೆ ಎಂದು ಗಂಭೀರವಾಗಿ ಆಲೋಚಿಸುತ್ತಾ ಸಮರಸನ್ನದ್ಧರಾಗಬೇಕೆಂದು ಕರೆ ಇತ್ತರು.

ಭಾರತ ಗಡಿಗಳಲ್ಲಿ ಯೋಧರಿಗೆ ರಕ್ಷಣೆ ನೀಡಲಾಗದ ರಕ್ಷಣಾ ಸಚಿವರು ನೊಂದವರ ಕಣ್ಣೀರಿನಿಂದ ಕಾಲು ತೊಳೆದುಕೊಂಡು ಹೋಗಲು ಬಂದಿದ್ದಾರೆ. ಊರು ಬಿಟ್ಟ ಜನರು ಪರಿಸ್ಥಿತಿ ಶಾಂತವಾದ ನಂತರ ವಾಪಸು ಬರುತ್ತಿರುವ ಸಂದರ್ಭದಲ್ಲಿ ಭೇಟಿ ನೀಡುತ್ತಿರುವ ಫರ್ನಾಂಡೀಸರು ಕಳೆದ ಎರಡೂವರೆ ವರ್ಷಗಳಿಂದ ಬಿಜೆಪಿ-ತೃಣಮೂಲ ಕಾಂಗ್ರೆಸ್ಸಿಗರು ಗಲಭೆಗಳಿಗೆ ಪ್ರಚೋದನೆ ನೀಡುತ್ತಿದ್ದಾಗ ಎಲ್ಲಿ ಹೋಗಿದ್ದರು" ಎಂದು ಕಾಂ. ಬಸು ಪ್ರಶ್ನಿಸಿದರು. ರಾಜೀನಾಮೆ ನೀಡುತ್ತೇವೆಂದು ಭಯ ಹುಟ್ಟಿಸುತ್ತಿರುವ ಮಮತಾ ಬ್ಯಾನರ್ಜಿಯನ್ನು ಓಲೈಸಲು ಈ ನಾಟಕ ನಡೆಯುತ್ತಿದೆ. ಇದಕ್ಕೆ ಬಂಗಾಳದ ಜನತೆ ಖಂಡಿತ ಉತ್ತರ ನೀಡಲಿದ್ದಾರೆ" ಎಂದು ಬಸು ನುಡಿದರು.

ವಿದ್ಯುತ್ ಬಿಲ್ ಬಾಕಿ ವಿರುದ್ಧ ರೈತರ ಸಮಾವೇಶ

ಇತ್ತೀಚಿನ ದಿನಗಳಲ್ಲಿ ಹೊಸಕೋಟೆ ತಾಲೂಕಿನಲ್ಲಿ ರೈತ ಮತ್ತು ಪ್ರಜಾಸತ್ತಾತ್ಮಕ ಚಳುವಳಿಯನ್ನು ಕಾಣುವುದೇ ಅಸಾಧ್ಯವಾದ ಸಂದರ್ಭದಲ್ಲಿ ವಿದ್ಯುತ್ ಪಂಪ್ ಸೆಟ್ ಬಳಕೆದಾರ ರೈತರು ಒಕ್ಕೊರಲಿನಿಂದ ಹೋರಾಟಕ್ಕೆ ಸಿದ್ಧವಾಗಿದ್ದು ರೈತ ಜಾಗೃತಿಯೇ ಸರಿ. ಹೊಸಕೋಟೆ ತಾಲೂಕಿನಲ್ಲಿ ಜನ ಎರಡು ಗುಂಪುಗಳ ನಡುವೆ ಚದುರಿ ಯಾವುದೇ ಪ್ರಜಾಸತ್ತಾತ್ಮಕ ಚಳುವಳಿಗೆ ಸ್ಪಂದಿಸದೇ ಗುಂಪುಗಾರಿಕೆ, ದೊಂಬರಾಟದಲ್ಲಿ ಮುಳಿಗಿರುವಾಗ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ದೌರ್ಜನ್ಯಗಳಿಗೆ ಬಲಿಯಾಗಿ ಬೇರೆ ಮಾರ್ಗವೇ ಇಲ್ಲದೆ ಇರುವ ಈ ತಾಲೂಕಿನಲ್ಲಿ ಹಠಾತ್ತನೆ ರೈತರಿಗೆ ಸಾವಿರ ಸಾವಿರ ಗಟ್ಟಲೆ ಪಂಪ್‌ಸೆಟ್ ವಿದ್ಯುತ್ ಬಿಲ್ ಪಾವತಿ ಮಾಡಲು ವಿದ್ಯುತ್ ಶಕ್ತಿ ಪ್ರಸರಣ ನಿಗಮದ ಯಾವ ವಿವರಗಳನ್ನು ಕಾಣದ ನೋಟಿಸುಗಳು ರೈತರನ್ನು ಕಂಗಾಲುಗೊಳಿಸಿದವು. ಇಂತಹ ಸಂದರ್ಭದಲ್ಲಿ ಸುಮಾರು 3 ತಿಂಗಳುಗಳಿಂದ ರೈತರನ್ನು ಸಂಘಟಿಸಲು ರೈತರ ವಿಚಾರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ವಿದ್ಯುತ್ ನೀತಿಗಳನ್ನು ರೈತರ ಮಧ್ಯೆ ಬಯಲು ಮಾಡಿ ಜಾಗೃತಿಗೊಳಿಸಲು, ರೈತ ವಿರೋಧಿ ನೀತಿಗಳ ವಿರುದ್ಧ ಹೋರಾಟಕ್ಕೆ ಅಣಿಗೊಳಿಸಲು ಸೆ. 12 ರಂದು ರೈತರ ಸಮಾವೇಶವನ್ನು ಸಂಘಟಿಸಲಾಯಿತು. ತಾಲೂಕಿನ ನಾನಾ ಮೂಲೆಗಳಿಂದ 500 ಕ್ಕೂ ಹೆಚ್ಚು ರೈತರು ಈ ಬೃಹತ್ ಸಮಾವೇಶದಲ್ಲಿ ಭಾಗವಹಿಸಿದ್ದರು.

ಸೂ.ರಾ.ರಾಮಯ್ಯ ಅಧ್ಯಕ್ಷತೆ ವಹಿಸಿದ್ದ ಸಮಾವೇಶದಲ್ಲಿ ಮುಖ್ಯಅತಿಥಿಗಳಾಗಿ ಮಾತನಾಡಿದ ಜಿ.ಎನ್.ನಾಗರಾಜ್ ಕೇಂದ್ರ ಮತ್ತು ರಾಜ್ಯ ಸರ್ಕಾರದ ನೀತಿಗಳಿಂದಾಗಿ ರೈತರು ಅನುಭವಿಸುತ್ತಿರುವ ಸಂಕಷ್ಟಗಳನ್ನು ವಿವರಿಸಿದರು. ಕೇಂದ್ರ ಸರ್ಕಾರದ ಮುಕ್ತ ಮಾರುಕಟ್ಟೆ ನೀತಿ ಗ್ಯಾಟ್ ಒಪ್ಪಂದಗಳಿಗೆ ಸಹಿ ಹಾಕಿ ವಿಶ್ವ ಬ್ಯಾಂಕ್, ಅಂತರ್‌ರಾಷ್ಟ್ರೀಯ ಮಾನಿಟರಿ ಫಂಡ್‌ಗಳ ಆದೇಶದಂತೆ ರೈತರಿಗೆ ಕೊಡುತ್ತಿದ್ದ ಸಬ್ಸಿಡಿಗಳನ್ನು ಕಡಿತಗೊಳಿಸಿ ವಿಶ್ವದ ಮುಂದುವರೆದ ರಾಷ್ಟ್ರಗಳಿಂದ ಮುಕ್ತವಾದ ವ್ಯವಸಾಯದ ಪ್ರಾಡಕ್ಟ್‌ಗಳನ್ನು ನಮ್ಮ ದೇಶದಲ್ಲಿ ಮುಕ್ತವಾಗಿ ಮಾರುವುದಕ್ಕೆ ಅನುಮತಿ ಕೊಟ್ಟ ಫಲವಾಗಿ ನಮ್ಮ ರೈತರು ಬೆಳೆಯುವ ಬೆಳೆಗಳಿಗೆ ಸರಿಯಾದ ಬೆಲೆ ಸಿಗದೆ, ಆತ್ಮಹತ್ಯೆಗಳನ್ನು ಮಾಡಿಕೊಳ್ಳುವಷ್ಟು ಹಿನಾಯ ಸ್ಥಿತಿಗೆ ನಮ್ಮ ದೇಶದ ರೈತ ಸಮುದಾಯ ಇಳಿದಿರುವುದಕ್ಕೆ ನಮ್ಮನ್ನು ಆಳುವ ವರ್ಗಗಳ ನೀತಿಗಳೇ ಕಾರಣವೆಂದು ವಿವರಿಸಿದರು. ನಮ್ಮ ದೇಶದ ವಿದ್ಯುತ್ ಶಕ್ತಿ ಉತ್ಪಾದನೆಯನ್ನು ಅಂತರರಾಷ್ಟ್ರೀಯ ಬಂಡವಾಳಗಾರರಾದ ಕೊಜೆಂಟ್ರಿಕ್ಸ್-ಎನ್ರೋನ್ ಮುಂತಾದವರ ಕೈಗೆ ಕೊಟ್ಟು ಉತ್ಪಾದನೆಯಾದ ವಿದ್ಯುತ್‌ನ್ನು ಯೂನಿಟ್ ಒಂದಕ್ಕೆ ನಾಲ್ಕು ರೂ.ಗಳಿಂದ 8ರೂಪಾಯಿಗಳ ವರೆವಿಗೂ ಕೊಂಡುಕೊಳ್ಳಲು ಮಾಡಿಕೊಂಡ ಒಪ್ಪಂದಗಳ ಫಲವಾಗಿ, ಇನ್ನೂ ಮುಂದೆ ರೈತರಿಗೆ ಸಬ್ಸಿಡಿಯಲ್ಲಿ ಕೊಡುತ್ತಿದ್ದ ವಿದ್ಯುತ್ ಶಕ್ತಿಯನ್ನು ನಿಲ್ಲಿಸಿ ಪ್ರತಿ ಪಂಪ್ ಸೆಟ್‌ಗೆ ಮೀಟರ್‌ಗಳನ್ನು ಅಳವಡಿಸುವ ಹುನ್ನಾರಗಳನ್ನು ಬಯಲಿಗೆಳೆದರು. ನಂತರ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಪಿ.ಜಗನ್ನಾಥ್‌ರವರು ಮಾತನಾಡಿ ರೈತರು ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಪಕ್ಷಬೇದ ಮರೆತು ಹೋರಾಟ ಮಾಡಲು ಕರೆಕೊಟ್ಟರು.

ಸಮಾಜವಾದಿಗಳಾದ ಶಿವಣ್ಣನವರು ನಿರ್ಣಯನ್ನು ಮಂಡಿಸಿದರು. ನಿರ್ಣಯಗಳ ಮೇಲೆ ವಕೀಲರಾದ ಪ್ರಸಾದ್, ತಾಲೂಕು ಪಂಚಾಯ್ತಿ ಸದಸ್ಯರಾದ ನಾಗೇಶ್ ಮುನಿಅಣ್ಣಯ್ಯ ಮುಂತಾದ 7-8 ಜನ ರೈತರು ಮಾತನಾಡಿದರು. ಈ ಸಮಾವೇಶದಲ್ಲಿ ರೈತ ಮುಖಂಡ ಎಂ.ಎಂ. ರಾಮಸ್ವಾಮಿ, ಪ್ರಭುದೇವಯ್ಯ, ಚಂದ್ರುತೇಜಸ್ವಿ, ಶಾಮಣ್ಣರೆಡ್ಡಿ, ಅಂಗನವಾಡಿ ಸಂಘದ ನಾಯಕಿ ರಾಜೇಶ್ವರಿ, ವೆಂಕಟಾಚಲಯ್ಯನವರು ಭಾಗವಹಿಸಿದ್ದರು. ಆರ್.ಆರ್. ಮನೋಹರ್‌ರವರು ಸಮಾವೇಶವನ್ನು ಸ್ವಾಗತಿಸಿ ಪ್ರಾಸ್ತಾವಿಕ ಭಾಷಣ ಮಾಡಿದರು. ವಕೀಲರಾದ ಹರೀಂದ್ರರವರು ವಂದನಾರ್ಪಣೆ ಮಾಡಿದರು. ಕೊನೆಗೆ ಬೃಹತ್ ಮೆರವಣಿಗೆಯಲ್ಲಿ ಹೊರಟ ರೈತರು ವಿದ್ಯುತ್ ಮಂಡಳಿಗೆ , ತಹಶೀಲ್ದಾರರಿಗೆ ಮನವಿ ಅರ್ಪಿಸಿ ಬಹಿರಂಗ ಸಭೆಯನ್ನು ನಡೆಸಿ ರೈತರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು.

ಸಮಾವೇಶದಲ್ಲಿ ಕೈಗೊಂಡ ನಿರ್ಣಯಗಳು

1. ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ದರವನ್ನು HP ಒಂದಕ್ಕೆ 300 ರೂ.ಗಳಿಂದ 500 ರೂ.ಗಳವರೆಗೆ ಏರಿಸಿರುವ ವಿದ್ಯುತ್ ನಿಗಮದ ನಿರ್ಧಾರವನ್ನು ಹಿಂದಕ್ಕೆ ಪಡೆಯಬೇಕು.
2. 1980 ರಿಂದ 2000 ವರೆಗಿನ ಹಳೆಯ ಬಾಕಿ ಮನ್ನಾ ಮಾಡಬೇಕು.
3. ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯ ಖಾಸಗೀಕರಣವನ್ನು ಕೈಬಿಡಬೇಕು.
4. ರೈತರ ಪಂಪುಸೆಟ್ಟುಗಳಿಗೆ ಮೀಟರ್ ಹಾಕುವ ಹಾಗೂ ಹೊಸ ಸಂಪರ್ಕ ಪಡೆಯಲು ಹಾಕಿರುವ ದುಬಾರಿ ವೆಚ್ಚವನ್ನು ಹಿಂತೆಗೆದುಕೊಂಡು ಕಂಬ ಮತ್ತು ತಂತಿಯ ವೆಚ್ಚವನ್ನು ಈ ಮೊದಲಿನಂತೆ ನಿಗಮವೇ ಭರಿಸಬೇಕು.

ಸಮಾವೇಶದಲ್ಲಿ ಆಯ್ಕೆಗೊಂಡ ಹೋರಾಟ ಸಮಿತಿ

ಸೂ.ರಂ. ರಾಮಯ್ಯನವರು ಅಧ್ಯಕ್ಷರು, ಆರ್.ಆರ್.ಮನೋಹರ್ ಪ್ರಧಾನ ಕಾರ್ಯದರ್ಶಿಗಳಾಗಿರುವ 10 ಜನ ಪದಾಧಿಕಾರಿಗಳಿರುವ 50 ಜನರ ನೂತನ ಸಮಿತಿಯನ್ನು ರಚಿಸಲಾಯಿತು.

ಹರೀಂದ್ರ, ವಕೀಲರು

ಬರಿಗೈಯಲ್ಲಿ ಜನರ ಕಡೆಗೆ - ಸಮಾವೇಶಕ್ಕೆ ರೈತರ ನಡಿಗೆ

ಹೊಸಕೋಟೆಯಲ್ಲಿ ಯಾವುದೇ ನೀರಾವರಿ ವ್ಯವಸ್ಥೆಯಿಲ್ಲದೆ ರೈತರು 50 ಸಾವಿರದಿಂದ ಒಂದು ಲಕ್ಷದವರೆಗೆ ಹಣ ಖರ್ಚು ಮಾಡಿ ಬೋರ್‌ವೆಲ್‌ಗಳನ್ನು ಕೊರೆದು ವಿದ್ಯುತ್ ಪಂಪ್‌ಸೆಟ್ಟುಗಳನ್ನು ಅಳವಡಿಸಿಕೊಂಡು ವ್ಯವಸಾಯ ಮಾಡುತ್ತಿರುವ ಸಂದರ್ಭದಲ್ಲಿ ಸರ್ಕಾರದ ಆಮದು ಮತ್ತು ರಫ್ತು ನೀತಿಯು ರೈತರನ್ನು ಕಂಗಾಲುಗೊಳಿಸಿದೆ. ಈ ನೀತಿಯ ಫಲವಾಗಿ ಬೆಳೆದ ಬೆಳೆಗಳಿಗೆ ಬೆಲೆ ಇಲ್ಲದೆ ರೈತರು ತತ್ತರಿಸಿರುವ ಈ ಪರಿಸ್ಥಿತಿಯಲ್ಲಿ ವಿದ್ಯುತ್ ಮಂಡಳಿಯು ಪಂಪುಸೆಟ್ಟುಗಳಿಗೆ ಅವೈಜ್ಞಾನಿಕವಾಗಿ ಬಾಕಿಯ ಹೆಸರಿನಲ್ಲಿ ಯಾವುದೇ ವಿವರ ಇಲ್ಲದೆ 10 ಸಾವಿರ ರೂ.ಗಳಿಂದ 30 ಸಾವಿರ ರೂ.ಗಳವರೆವಿಗೂ ಬಿಲ್ ನೀಡುವುದರ ಮೂಲಕ ರೈತ ಸಮುದಾಯಕ್ಕೆ ಶಾಕ್ ನೀಡಿದೆ.

ತಾಲೂಕಿನಲ್ಲಿ 12 ಸಾವಿರ ಪಂಪು ಸೆಟ್ಟುಗಳಿದ್ದು 3 ಕೋಟಿಗೂ ಮಿಕ್ಕ ಬಾಕಿ ಇದ್ದು, ಸರ್ಕಾರದ ಈ ಭಾರೀ ಮೊತ್ತದ ವಿದ್ಯುತ್ ಬಾಕಿ ಬಿಲ್ಲುಗಳು ರೈತರನ್ನು ಕಂಗಾಲುಗೊಳಿಸಿರುವ ಪರಿಸ್ಥಿತಿಯಲ್ಲಿ ರೈತರ ಈ ಸಮಸ್ಯೆಗಳಿಗೆ ದಾರಿ ಕಾಣದಿದ್ದಾಗ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರುಗಳಾದ ಆರ್.ಆರ್.ಮನೋಹರ್, ಪ್ರಭುದೇವಯ್ಯ, ವಕೀಲರಾದ ಹರೀಂದ್ರ, ಸಮಾಜವಾದಿಗಳಾದ ಬಿ.ಶಿವಣ್ಣ, ಸ್ವಾತಂತ್ರ್ಯ ಹೋರಾಟಗಾರರು, ಮಾಜಿ ಶಾಸಕರಾದ ಸೂ.ರಂ. ರಾಮಯ್ಯನವರು ಸಮಸ್ಯೆಗಳಿಗೆ ಪರಿಹಾರ ಕಾಣಲು ಪ್ರಯತ್ನಿಸಿ ರೈತರ ಸಮಸ್ಯೆಗೆ ಹೋರಾಟವೇ ದಾರಿ ಎಂದು ರೈತರ ಸಮಾವೇಶವನ್ನು ನಡೆಸಿ ಹೋರಾಟ ಮಾಡಲು ನಿರ್ಧರಿಸಿದರು. ಈ ಪರಿಸ್ಥಿತಿಯಲ್ಲಿ ಜಿ.ಎನ್.ನಾಗರಾಜ್‌ರವರ ಪ್ರೇರೇಪಣೆ ನಮಗೆ ಈ ತೀರ್ಮಾನ ತೆಗೆದುಕೊಳ್ಳಲು ಸಹಾಯವಾಯಿತು.

ಹೋರಾಟ ಪ್ರಾರಂಭ ಮಾಡಲು ಒಂದು ಬಿಡಿಕಾಸು ಇಲ್ಲದ ಪರಿಸ್ಥಿತಿಯಲ್ಲಿ ಯಾವ ರೀತಿಯಲ್ಲಿ ಹೋರಾಟ ಮಾಡುವುದು ಎನ್ನುವ ಸ್ಥಿತಿಯಲ್ಲಿರುವಾಗ ರೈತರ ಸಮಸ್ಯೆಗಳಿಗೆ ಪ್ರಾಮಾಣಿಕ ಪ್ರಯತ್ನ ನಡೆಸಿದರೆ ಖಂಡಿತ ಎಲ್ಲವೂ ಸಾಧ್ಯ ಎಂಬ ಕರ್ನಾಟಕ ಪ್ರಾಂತ ರೈತ ಸಂಘದ ನಿಲುವಿನಂತೆ ಹೋರಾಟ ಪ್ರಾರಂಭಿಸಲಾಯಿತು.

ರೈತರ ಹೋರಾಟದ ಮೊದಲನೆಯ ಹೆಜ್ಜೆಯಾಗಿ ರೈತರ ನಡುವೆ ಸಮಸ್ಯೆಗಳನ್ನು ಪ್ರಚಾರ ಮಾಡಲು ಜೀಪ್ ಜಾಥಾ ಮೂಲಕ ರೈತ ನಡುವೆ ಹೋದಾಗ ಸಿಕ್ಕ ಸ್ಫೂರ್ತಿ, ಸ್ಪಂದನೆ ನಿಜವಾಗಿಯೂ ಅಪೂರ್ವವಾದುದು.

ರೈತರ ಜಾಥಾವನ್ನು ತಾಲೂಕಿನ ಮುಖ್ಯ ಗ್ರಾಮವಾದ ಸೂಲಿಬೆಲೆಯಲ್ಲಿ ಕೃಷಿಕೂಲಿಕಾರರ ಮುಖಂಡರಾದ ಜಿ.ಎನ್.ನಾಗರಾಜ್‌ರವರು ಉದ್ಘಾಟನೆ ಮಾಡುವುದರ ಮೂಲಕ ಪ್ರಾರಂಭಿಸಿದೆವು. ಹಣದ ಸಮಸ್ಯೆಯಿದ್ದ ನಮಗೆ ಆ ದಿನವೇ ರೈತರು ರೂ. 1000 ಕ್ಕೂ ಮಿಕ್ಕ ಹಣವನ್ನು ಕೂಡಿಸಿಕೊಟ್ಟು ನಮ್ಮ ಜಾಥಾವನ್ನು ಮುಂದುವರಿಸಲು ನಮ್ಮಲ್ಲಿ ಧೈರ್ಯ ತುಂಬಿದರು. ಪೂರ್ವಬಾವಿಯಾಗಿ ಸಭೆಗೆ ಯಾವುದೇ ಸಿದ್ಧತೆ ಮಾಡದಿದ್ದರೂ ಸಭೆಯಲ್ಲಿ 200 ಮಿಕ್ಕ ರೈತರು ಭಾಗವಹಿಸುವುದರ ಮೂಲಕ ಹೋರಾಟ ಮಾಡುವುದಕ್ಕೆ ನೀವು ಪ್ರಾಮಾಣಿಕ ಪ್ರಯತ್ನ ಮಾಡಿದರೆ ನಾವು ಎಲ್ಲದ್ದಕ್ಕೂ ಸಿದ್ದರಿದ್ದೇವೆ ಎಂದು ನಮ್ಮಲ್ಲಿ ವಿಶ್ವಾಸ ತುಂಬಿದರು.

ಮೊದಲನೆಯ ದಿನ ಸಿಕ್ಕ ರೈತರ ಸ್ಪಂದನೆ ಮತ್ತು ಅವರು ಕೊಟ್ಟ ಬೆಂಬಲ, ವಿಶ್ವಾಸಗಳಿಂದ ಮೂರು ದಿನಗಳ ನಮ್ಮ ಜೀಪ್ ಜಾಥಾವನ್ನು ಹತ್ತು ದಿನಗಳವರೆವಿಗೂ ನಡೆಸಲು ಸಾಧ್ಯವಾಯಿತು. ಐದು ಸಾವಿರ ಕರಪತ್ರಗಳನಿನು ಹಾನ್ನು ಕಿದರೆ ಸಾಕು ಎನ್ನುವ ನಮ್ಮ ತೀರ್ಮಾನವು 10-15 ಸಾವಿರ ಕರಪತ್ರಗಳನ್ನು ಮುದ್ರಿಸಲು ಪ್ರೇರೇಪಣೆ ನೀಡಿತು. ಸೂಲಿಬೆಲೆ ಹೋಬಳಿಯಲ್ಲಿ ರೈತರ ಸ್ವಪ್ರಯತ್ನದಿಂದ ಮೂರು ದಿವಸಗಳ ಆಟೋಪ್ರಚಾರ ಮಾಡಲು ಸಾಧ್ಯವಾಯಿತು.

ನಾವು ಹಳ್ಳಿಯಿಂದ ಹಳ್ಳಿಗೆ ಹೋಗುತ್ತಿರುವಾಗ ವಿದ್ಯುತ್ ಬಿಲ್ ಬಾಕಿ ಬಗ್ಗೆ ಮಾತನಾಡಲು ಪ್ರಾರಂಬಿಸಿದಾಗ ರೈತರು ಗುಂಪುಕೂಡಿಕೊಂಡು ತಮ್ಮ ಆಕ್ರೋಶವನ್ನು ಈ ರೈತ ವಿರೋಧಿ ನೀತಿಗಳ ವಿರುದ್ಧ ತೋರಿಸುತ್ತಿದ್ದರು. ಎಷ್ಟೋ ಹಳ್ಳಿಗಳಲ್ಲಿ ರೈತರು ಸಮಾವೇಶ ಮಾತ್ರ ಮಾಡಿದರೆ ಸಾಲದು ಸ್ವಾಮಿ ನಾವು ವಿಧಾನಸೌಧ ಮುತ್ತಿಗೆ ಹಾಕಬೇಕು, ವಿದ್ಯುತ್ ಕಛೇರಿಗೆ ಮುತ್ತಿಗೆ ಹಾಕಬೇಕೆಂದು ಮುಂದಿನ ಹೋರಾಟಕ್ಕೆ ದಿಕ್ಕು ತೋರಿಸುತ್ತಿದ್ದು ರೈತರು ಹೋರಾಟಕ್ಕೆ ಮುಂದಿದ್ದಾರೆ ಎಂಬುದನ್ನು ತೋರಿಸುತ್ತಿತ್ತು. ನಮ್ಮಲ್ಲಿ ಹೋರಾಟದ ಬಗ್ಗೆ ಕೆಲವರಿಗಿದ್ದ ಅಪನಂಬಿಕೆಗಳನ್ನು ತೆಗೆದುಹಾಕಿತು.

ಹಳ್ಳಿ ಹಳ್ಳಿಗಳಲ್ಲಿ ರೈತರು ಗುಂಪುಕೂಡಿಕೊಂಡು ನಮ್ಮ ಭಾಷಣವನ್ನು ಆಲಿಸುತ್ತಿದ್ದರು. ಹಾಗೂ ರೈತ ವಿರೋಧಿ ಈ ನಿಲುವಿನ ಬಗ್ಗೆ ಪ್ರತಿ ಹಳ್ಳಿಯಲ್ಲೂ, ಆಕ್ರೋಶ ತೋರಿಸುತ್ತಿದ್ದರು. ಅಲ್ಲದೆ ನಮ್ಮ ಮುಂದಿನ ಖರ್ಚಿಗೆ ಹಣ ಬೇಕಂತ ಕೇಳಿದಾಗ ಪ್ರೀತಿಯಿಂದ ಹಣವನ್ನು ಕೊಡಿಸಿಕೊಡುತ್ತಿದ್ದದ್ದು ಪ್ರಾಮಾಣಿಕವಾಗಿ ರೈತರಿಗೆ ಕೆಲಸ ಮಾಡಿದರೆ ಯಾವ ತ್ಯಾಗಕ್ಕೂ ರೈತ ಸಿದ್ಧವೆಂದು ತೋರಿಸುತ್ತಿತ್ತು ಹಾಗೂ ಪ್ರತಿ ಹಳ್ಳಿಯಲ್ಲಿಯೂ ಕಾಫಿ, ತಿಂಡಿ, ಹಣ್ಣು ಕೊಡುವುದರ ಮೂಲಕ ತೋರಿಸುತ್ತಿದ್ದ ಪ್ರೀತಿಯು ಅವರಿಗಾಗಿ ಹೋರಾಟವನ್ನು ಮಾಡಿಯೇ ತೀರಬೇಕೆಂಬ ನಿರ್ಧಾರವನ್ನು ಇಮ್ಮಡಿಗೊಳಿಸಿತು.

ಜಾಥವು ಹೊಸಕೋಟೆಯಲ್ಲಿ ಪ್ರಧಾನ ಕೇಂದ್ರವಾದ ಹೆಚ್.ಕ್ರಾಸ್ ಗೆ ಹೋದಾಗ 300 ಕ್ಕೂ ಹೆಚ್ಚಿನ ರೈತರು ಸಭೆಯಲ್ಲಿ(ಯಾವ ಪೂರ್ವ ಪ್ರಚಾರವಿಲ್ಲದೆ) ಭಾಗವಹಿಸಿ ಸಭೆಯಲ್ಲಿ 1000 ಕ್ಕೂ ಮಿಕ್ಕ ಹಣವನ್ನು ಕೂಡಿಸಿಕೊಟ್ಟು ನಾವು ಹೋರಾಟಕ್ಕೆ ಸಿದ್ಧವಿದ್ದೇವೆ ನೀವು ಜೋರಾಗಿ ಹೋರಾಟ ಮುಂದುವರಿಸಿ ಅಂತ ಬೀಳ್ಕೊಟ್ಟರು.

ಜಾಥಾದಲ್ಲಿ ನಾವು ಮುಸ್ಲಿಮರೇ ಪ್ರಧಾನವಾಗಿರುವ ಕಟ್ಟಿಗೆ ಹಳ್ಳಿಗೆ ಹೋದಾಗ ಅಲ್ಲಿನ ಹಿರಿಯ 10-15 ವರ್ಷಗಳ ಕಾಲ ಪ್ರದಾನನಾಗಿದ್ದ ಮುಸ್ಲಿಂ ಮುಖಂಡ ರೈತರ ಪರಿಸ್ಥಿತಿ ಬಗ್ಗೆ ಹೇಳಿದ ಮಾತು ಎಂತಹ ರೈತ ಮುಖಂಡರ ಅನುಭವಕ್ಕೂ ಶ್ರೀಮಂತವಾಗಿತ್ತು. 'ಸ್ವಾಮಿ ನನಗೆ ಈಗ 70 ವರ್ಷ. ನಾನು 20 ವರ್ಷಗಳ ಕೆಳಗೆ ಟೈಲರ್ ಆಗಿದ್ದೆ. ಆಗ 30 ಜೊತೆ ಬಟ್ಟೆ ಇತ್ತು. ಪ್ರತಿದಿವಸ ಇಸ್ತ್ರಿಯಿಲ್ಲದೆ ಬಟ್ಟೆ ಹಾಕಿಕೊಳ್ಳುತ್ತಿರಲಿಲ್ಲ. ಪ್ರತಿದಿವಸ ನಾನು ಮತ್ತು ನನ್ನ ಕುಟುಂಬ ಒಳ್ಳೆಯ ಊಟ ಮಾಡುತ್ತಿದ್ದೆವು. ಈಗ ನಾನು 3 ಪಂಪ್‌ಸೆಟ್‌ಗಳಿಗೆ ಒಡೆಯನಾಗಿದ್ದೇನೆ. 5-10 ಎಕರೆ ತೋಟ ಮಾಡುತ್ತಿದ್ದೇನೆ. ಆದರೆ ಈಗ ನನ್ನಲ್ಲಿ 2 ಜೊತೆ ಮಾತ್ರ ಬಟ್ಟೆ ಇದೆ. ಟೈಲರ್ ಆಗಿದ್ದಾಗ ಸಿಗುತ್ತಿದ್ದ ಊಟ ನಾವು ಈಗ ಮಾಡುತ್ತಿಲ್ಲ. ನಿಮಗೆ ಹಣ ದೊಡ್ಡ ರೀತಿಯಲ್ಲಿ ಕೊಡಬೇಕಂತ ಇದೆ. ಆದರೆ ನನ್ನಲ್ಲಿ ಹಣವಿಲ್ಲ. ಅಂತ 100 ರೂ.ಗಳನ್ನು ಕೊಟ್ಟು "ನನಗೆ ಕಣ್ಣಿಗೆ ಆಪರೇಷನ್ ಆಗಿದೆ. ಇಲ್ಲದಿದ್ದರೆ ಗಾಡಿಗಳಲ್ಲಿ ಜನರನ್ನು ಕರೆದುಕೊಂಡು ಬರುತ್ತಿದ್ದೆ. ಎಷ್ಟೇ ಕಷ್ಟವಾದರೂ ನಾನು ಬಂದೇ ಬರುತ್ತೇನೆ" ಅಂತ ಹೇಳಿ ರೈತರ ನಿಜವಾದ ಪರಿಸ್ಥಿತಿಯನ್ನು ವಿವರಿಸಿದರು.

ರೈತರ ಜಾಥಾ ಅನುಗೊಂಡನಹಳ್ಳಿ ಹೋಬಳಿಯ ಗೂಂಡೂರು ಮುಗಿಸಿಕೊಂಡು ಗಣಗಲೂರಿಗೆ ಹೋದಾಗ. ರಾತ್ರಿ 9 ಗಂಟೆ. ಅಲ್ಲಿ ಭಾಷಣ ಮಾಡಿದಾಗ ಸುಮಾರು 100 ಕ್ಕೂ ಹೆಚ್ಚು ರೈತರು ಹಳ್ಳಿಯಲ್ಲಿ ನಮ್ಮ ಭಾಷಣವನ್ನು ಒಂದು ಗಂಟೆಗೂ ಹೆಚ್ಚು ಕಾಲ ನಿಂತು ಕೇಳಿದ್ದನ್ನು ನೋಡಿದರೆ ರೈತರ ಸಮಸ್ಯೆ ಎಷ್ಟು ತೀವ್ರವಾಗಿದೆಯಂದು ತೋರಿಸಿತು. ನೀವುಸಮಾವೇಶಕ್ಕೆ ಬರಬೇಕಂತ ಕೇಳಿದಾಗ ನಾವು ಟ್ರಾಕ್ಟರ್ ಮಾಡಿಕೊಂಡು ಬರುತ್ತೇವೆ ಎಂದು ಹೇಳಿ ಅದೇ ರೀತಿ ಟ್ರಾಕ್ಟರ್‌ನಲ್ಲಿ ಬಂದರು.

ಜಾಥಾ ಬಾಗೂರಿಗೆ ಬಂದಾಗ ರಾತ್ರಿ 11 ಗಂಟೆಯಾಗಿತ್ತು. ರೈತರು ಮಾಮೂಲಾಗಿ 9 ಗಂಟೆಯೊಳಗೆ ನಿದ್ರೆ ಮಾಡುತ್ತಾರೆ. ನಮ್ಮಲ್ಲಿ ಕೆಲವರಿಗೆ ಇಲ್ಲಿ ಭಾಷಣ ಮಾಡುವುದು ಬೇಡ ಅನಿಸುತಿತ್ತು. ಆದರೆ ಹರೀಂದ್ರರವರು ತೆಲುಗಿನಲ್ಲಿ ಭಾಷಣ ಮಾಡಲು ಪ್ರಾರಂಭಿಸಿದಾಗ ಒಬ್ಬೊಬ್ಬರಾಗಿ ಕಂಬಳಿಗಳನ್ನು ಹೊದ್ದು ಸಭೆಯಲ್ಲಿ ಭಾಗವಹಿಸಿ ಒಂದು ಗಂಟೆಗೂಹೆಚ್ಚು ಕಾಲ ಭಾಷಣವನ್ನು ಕೇಳಿದ ದೃಷ್ಯ ರೋಮಾಂಚನಕಾರಿಯಾಗಿತ್ತು.

ಇದೇ ರೀತಿಯಲ್ಲಿ ಎಲ್ಲಾ ಹಳ್ಳಿಗಳಲ್ಲಿ ರೈತರು ಹಣ, ಊಟ, ತಿಂಡಿ ಕೊಡುವುದರ ಮೂಲಕ ನಮಗೂ ನಮ್ಮ ಜಾಥಾಕ್ಕೂ ಧೈರ್ಯ ಸಹಾಯ ಮತ್ತು ಉತ್ಸಾಹವನ್ನು ತುಂಬಿದರು. ನಾವು 1-2 ಬ್ಯಾನರುಗಳನ್ನು ಹಾಕಿಸಬೇಕೆಂದು ಕೇಳಿದಾಗ 10 ಬ್ಯಾನರುಗಳನ್ನು ಹಾಕಿಸಿಕೊಟ್ಟರು. ಮಾತ್ರವಲ್ಲ ಸಮಾವೇಶದಲ್ಲಿ ಭಾಗವಹಿಸಿದ ಎಲ್ಲರಿಗೂ ಊಟ ಹಾಕಿಸಿದರು. ನಮ್ಮ ನಿರೀಕ್ಷೆಗೂ ಮೀರಿ ರೈತರು ಬಸ್, ಟ್ರಾಕ್ಟರ್, ಟೆಂಪೋ, ಸೈಕಲ್, ಕಾರು, ಸ್ಕೂಟರ್‌ಗಳಲ್ಲಿ 500 ಕ್ಕೂ ಮಿಕ್ಕಿ ಸಮಾವೇಶದಲ್ಲಿ ಭಾಗವಹಿಸಿ ಸಮಾವೇಶವನ್ನು ಯಶಸ್ವಿ ಮಾಡಿದರು.

ಬಹಳ ದೊಡ್ಡರೀತಿಯಲ್ಲಿ ಎರಡು ರಾಜಕೀಯ ಪಕ್ಷದಲ್ಲಿದ್ದ ರೈತರೂ ಸಹ ತಮ್ಮ ಸಮಸ್ಯೆಗಳಿಗೋಸ್ಕರ ಪಕ್ಷ ಬೇಧ ಮರೆತು ತಮ್ಮ ವೈಷಮ್ಯ ಮರೆತು, ಸಮಸ್ಯೆಗಳಿಗಾಗಿ ಒಂದುಗೂಡಿದುದು ಈ ಸಮಾವೇಶದಲ್ಲಿ ಎದ್ದು ಕಾಣುತ್ತಿತ್ತು.




ಕುರುಗೋಡಿನಲ್ಲಿ ವಿದ್ಯುತ್ ಅಭಾವ

ಪಂಪ್‌ಸೆಟ್ ರೈತರ ದಿವಾಳಿ

ಬಳ್ಳಾರಿ ತಾಲೂಕಿನ ಕುರುಗೋಡು ಗ್ರಾಮವು ವಿಧಾನಸಭಾ ಕ್ಷೇತ್ರವಾಗಿದ್ದು, ಬಳ್ಳಾರಿ ಗ್ರಾಮಾಂತರ ಪ್ರದೇಶದಲ್ಲಿ ಕುರುಗೋಡು ಮೊದಲ ಸ್ಥಾನದಲ್ಲಿದೆ. ಕುರುಗೋಡು ಕಂದಾಯ ವ್ಯಾಪ್ತಿಯಲ್ಲಿ 21 ಹಳ್ಳಿಗಳು ಬಂದರೆ ಕುರುಗೋಡಿನ ಪೋಲೀಸ್ ಠಾಣೆ ಹಾಗೂ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಯಲ್ಲಿ ಸರಿಯಾಗಿ 33 ಹಳ್ಳಿಗಳು ಬರುತ್ತವೆ. ಇಷ್ಟು ದೊಡ್ಡ ವ್ಯಾಪ್ತಿಯುಳ್ಳ ಪ್ರದೇಶಕ್ಕೆ ವಿದ್ಯುತ್ತಿನ ಸಾಮರ್ಥ್ಯ ಕೇವಲ 5. ಮೆ.ವಾ.ಮಾತ್ರ. ಮೊದಲು ತೋರಗಲ್ಲು ವಿದ್ಯುತ್ ಘಟಕದಿಂದ ಕುರುಗೋಡು ವಿಭಾಗಕ್ಕೆ ನೇರ ವಿದ್ಯುತ್ ಸರಬರಾಜಾಗುತ್ತಿತ್ತು. ವಿದ್ಯುತ್ತಿನ ಕೆಲವು ತೊಂದರೆಗಳನ್ನು ನಿವಾರಿಸಲು 1988 ರಲ್ಲಿ ಅಂದರೆ ಸುಮಾರು 12 ವರ್ಷಗಳ ಹಿಂದೆ 5 ಮೆ.ವಾ. ಸಾಮರ್ಥ್ಯದ 33.11. ಕಿ.ವ್ಯಾ.ನ ವಿದ್ಯುತ್ ವಿತರಣಾ ಕೇಂದ್ರ ಸ್ಥಾಪಿಸಲಾಯಿತು.

ಈ ಅಲ್ಪ ಸಾಮರ್ಥ್ಯದ ವಿದ್ಯುತ್ತನ್ನು 12 ವರ್ಷಗಳ ಕಾಲ ಈ ವಿಭಾಗಕ್ಕೆ ವಿತರಿಸುತ್ತಾ ಬಂದಿದ್ದಾರೆಂದರೆ ಗ್ರಾಹಕರು ಅದೆಷ್ಟು ತೊಂದರೆಗಳನ್ನು ಅನುಭವಿಸಿರಬಹುದೆಂದು ಊಹಿಸಲೂ ಅಸಾಧ್ಯ. 12 ವರ್ಷಗಳಲ್ಲಿ ಹಳ್ಳಿಗಳು ಬೆಳೆದು ಬದಲಾವಣೆ ಹೊಂದಿಲ್ಲವೇ? ವಿದ್ಯುತ್ತಿನ ಬೇಡಿಕೆ ಇದ್ದಿಲ್ಲವೇ? ಎಂದರೆ ಹಳ್ಳಿಗಳು ಸಾಕಷ್ಟು ಬೆಳೆದು ಈ ಹನ್ನೆರಡು ವರ್ಷಗಳಲ್ಲಿ ಸಾವಿರಾರು ಕುಟುಂಬಗಳು ಬೇರೆ ಬೇರೆ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಮಧ್ಯಮ ವರ್ಗದಿಂದ ಮೇಲ್ವರ್ಗದ ಶೇ 80 ಕ್ಕೂ ಹೆಚ್ಚು ಕುಟುಂಬಗಳ ಮನೆಗಳಲ್ಲಿ ಹೊಸ ಹೊಸ ಯಂತ್ರಗಳು ಹೊಕ್ಕಿವೆ. ಟಿ.ವಿ., ರೇಡಿಯೋ, ಫ್ರಿಜ್, ಗ್ರೈಂಡರ್, ಫ್ಯಾನ್, ಮಿಕ್ಸಿ, ವಾಷಿಂಗ್ ಮೆಷಿನ್‌ನಂತಹ ವಿದ್ಯುತ್ ನುಂಗುವ ವಸ್ತುಗಳು ಸಾಕಷ್ಟು ಬಂದಿವೆ. ಗ್ರಾಮ ಬೆಳೆದಂತೆ ಬೀದಿದೀಪದ ಬೆಳವಣಿಗೆಯೂ ವಿಸ್ತರಿಸಿದೆ. ಈ ವ್ಯಾಪ್ತಿಯಲ್ಲಿ ನೂರಾರು ಹಿಟ್ಟಿನ ಗಿರಣಿಗಳು ಸ್ಥಾಪನೆಯಾಗಿವೆ.

ಇನ್ನು ರೈತರ ಪಂಪ್‌ಸೆಟ್ ವಿಚಾರಕ್ಕೆ ಬಂದರೆ, ಸುಮಾರು 2000 ಪಂಪ್‌ಸೆಟ್‌ಗಳು ಇವೆ. ಹೀಗಾಗಿ ಅದರ 3 ಪಟ್ಟು ಬೇಡಿಕೆ ಇದೆ. ಕುರುಗೋಡು ಭಾಗದಲ್ಲಿ ಬಯಲು ಭೂಮಿ ಮತ್ತು ನೀರಾವರಿ ಪ್ರದೇಶ ಇದ್ದು, ಬಯಲು ಭೂಮಿಯಲ್ಲಿ ತೋಡು ಬಾವಿಗಳು, ಹಾಗೂ ಕೊಳವೆ ಬಾವಿಗಳಿದ್ದರೆ, ನೀರಾವರಿ ಪ್ರದೇಶದಲ್ಲಿ ಕೊಳವೆ ಬಾವಿಗಳೇ ಜಾಸ್ತಿ. ತುಂಗಭದ್ರಾ ಅಚ್ಚುಕಟ್ಟು ಕೆಳಗೆ ಎರಡುದೊಡ್ಡ ಕಾಲುವೆಗಳು ಬಂದಿವೆ. ಒಂದು ತುಂಗಭದ್ರಾ ಬಲದಂಡೆ ಮೇಲ್ಮಟ್ಟದ ಕಾಲುವೆ ಹಾಗೂ ತುಂಗಾಭದ್ರ ಬಲದಂಡೆ ಕೆಳಮಟ್ಟದ ಕಾಲುವೆಗಳಿದ್ದು, ಕಾಲುವೆಯ ಕೆಳಭಾಗದ ಅಚ್ಚುಕಟ್ಟುದಾರರಿಗೆ ತುಂಬಾ ನೀರಿನ ತೊಂದರೆ ಇದ್ದು, ನೀರಿಗಾಗಿ ಹಗಲು-ರಾತ್ರಿ ನಿದ್ದೆಗೆಟ್ಟು ತಿರುಗಿದರೂ ನೀರು ಸಿಗದೇ ಕೆಳಭಾಗದ ಮತ್ತು ಮೇಲ್ಭಾಗದ ರೈತರ ಮಧ್ಯೆ ಭಾರೀ ಜಗಳಗಳೇ ನಡೆದು ಪ್ರಾಣ ಕಳೆದುಕೊಂಡಿದ್ದಾರೆ. ಕೈಗೆ ಬಂದ ಬೆಳೆ ನೀರಿಲ್ಲದೆ ಒಣಗಿ ಹೋಗುವುದನ್ನು ನೋಡಿ ತಡೆಯಲಾರದೇ ಜಗಳವಾಡಿ, ತಲೆಗಳನ್ನು ಹೊಡೆದುಕೊಂಡು ಪೋಲೀಸ್ ಠಾಣೆ ಹಾಗೂ ಕೋರ್ಟು, ಕಛೇರಿಗೆ ಅಲೆಯುತ್ತಿದ್ದಾರೆ. ಇಂತಹ ತೊಂದರೆ ಸಾಕೆಂದು ಬೇಸತ್ತ ರೈತರು ನೀರಾವರಿ ಇಲಾಖೆಗೆ ಹೋಗಿ ನೀರು ಬೇಡವೆಂದು ಬರೆದು ಕೊಟ್ಟು ಕೊಳವೆ ಬಾವಿಗಳನ್ನು ಕೊರೆಸಿಕೊಂಡು ಪಂಪುಸೆಟ್ಟು ಅಳವಡಿಸಿ ಕೊಂಡಿದ್ದಾರೆ. ಆದರೆ ದುರಾದೃಷ್ಟವಶಾತ್ ಪಂಪುಸೆಟ್ಟುದಾರರಿಗೆ ಸರಿಯಾಗಿ ವಿದ್ಯುತ್ ಸರಬರಾಜಿಲ್ಲದೇ, ಪ್ರತಿವರ್ಷ ಬೆಳೆ ವಿಫಲವಾಗಿ ಇಳುವರಿ ಕಡಿಮೆಯಾಗುತ್ತಾ ಬಂದಿದೆ. ಇಲಾಖೆಯು 1 ಹೆಚ್.ಪಿ.ಗೆ ರೂ. 300 ರಂತೆ ನಿಗದಿ ಮಾಡಿದ್ದು, ಪ್ರತಿಯೊಬ್ಬ ರೈತನು 5 ಹೆಚ್.ಪಿ. ಮೋಟಾರುಗಳನ್ನೇ ಹೊಂದಿದವನಾಗಿದ್ದು, ಪ್ರತಿವರ್ಷಕ್ಕೆ ರೂ. 1,500 ಗಳನ್ನು ಇಲಾಖೆಗೆ ತೆತ್ತಬೇಕಾಗಿದೆ. ಒಂದೆಡೆ ಹೊಸ ಆರ್ಥಿಕ ನೀತಿಯ ಭಾಗವಾಗಿ ಬೆಲೆ ಏರಿಕೆಯ ಪರಿಣಾಮ ಮತ್ತು ರೈತನ ಬೆಳೆಗೆ ಉತ್ಪಾದನೆ ವೆಚ್ಚ ಜಾಸ್ತಿಯಾಗುತ್ತಿದ್ದರೆ ಇನ್ನೊಂದೆಡೆ ಬಂದ ಬೆಳೆಗೆ ಮಾರುಕಟ್ಟೆಯಲ್ಲಿ ಬೆಂಬಲ ಬೆಲೆ ಇಲ್ಲದೇ ರೈತರು ದಿವಾಳಿಯಾಗಿ ಸಾಲಗಾರರಾಗುತ್ತಿದ್ದಾರೆ. ಅತ್ತ ಕಾಲುವೆ ನೀರಿಲ್ಲ, ಇತ್ತ ಸರಿಯಾಗಿ ವಿದ್ಯುತ್ ಸರಬರಾಜು ಇಲ್ಲದೇ, ರೈತನು ಪರದಾಡಬೇಕಾಗಿದೆ. ದಿನ ಒಂದಕ್ಕೆ ಕೇವಲ 6 ತಾಸುಗಳು ಮಾತ್ರ ಪಂಪ್‌ಸೆಟ್‌ಗೆ ವಿದ್ಯುತ್ ಸರಬರಾಜಾದರೆ ಅದರಲ್ಲಿ 5-6 ಸಾರಿ ವಿದ್ಯುತ್ ಕಟ್ಟಾಗುತ್ತದೆ. ಇನ್ನು ಬೆಳೆ ಬೆಳೆಯುವುದಾದರೂ ಹೇಗೆ? ಕೆಲವೊಮ್ಮೆ ಮೂರು ದಿನವಾದರೂ ವಿದ್ಯುತ್ ಬಾರದೇ, ಕುಡಿಯುವ ನೀರಿನ ತೊಂದರೆಯಿಂದ ಜನರು ಪರದಾಡುವಂತಾಗಿದೆ. ಬಾವಿಯಲ್ಲಿ ನಿಂತು ಮಲಿನವಾದ ನೀರನ್ನೇ ಕುಡಿದು, ರೋಗರುಜಿನಗಳಿಗೆ ತುತ್ತಾಗುತ್ತಿದ್ದಾರೆ. ಸುಮಾರು 15 ದಿನಗಳ ಹಿಂದೆ ಸಮೀಪದ ಕಪ್ಪಗಲು ಗ್ರಾಮದಲ್ಲಿ ವಿದ್ಯುತ್ ಕಡಿತ ಉಂಟಾಗಿ ಬಾವಿ ನೀರನ್ನು ಕುಡಿದು ಸುಮಾರು 40 ಕ್ಕೂ ಹೆಚ್ಚು ಜನ ಬಳ್ಳಾರಿಯ ಆಸ್ಪತ್ರೆಗೆ ದಾಖಲಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ಆರೋಗ್ಯ ಇಲಾಖೆಯವರೇ ಸದರಿ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ, ಬಾವಿಯ ಮಲಿನವಾದ ನೀರಿನ ತೊಂದರೆಯಿಂದಲೇ ಈ ಕಾಯಿಲೆ ಬಂದಿರುವುದೆಂದು ದೃಢೀಕರಿಸಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿಯೂ ರೈತರಿಂದ ವಿದ್ಯುತ್ತಿನ ಬೇಡಿಕೆಗಾಗಿ, ಸಾಕಷ್ಟು ಅರ್ಜಿಗಳು ಬರುತ್ತಲೇ ಇವೆ. 7-8 ವರ್ಷಗಳ ಹಿಂದಿನಿಂದಲೂ ವಿದ್ಯುತ್ ಮಂಜೂರಾತಿಗಾಗಿ ಪಂಪ್‌ಸೆಟ್ಟು ರೈತರು ಅರ್ಜಿ ಸಲ್ಲಿಸುತ್ತಾ ಬಂದಿದ್ದಾರೆ. ಆದರೆ ಇದುವರೆವಿಗೂ ಅಧಿಕೃತವಾಗಿ ವಿದ್ಯುತ್ ನೀಡಿಲ್ಲ. ವರ್ಷಾನುಗಟ್ಟಲೇ ವಿದ್ಯುತ್ ಇಲಾಖೆಗೆ ಅಲೆದಾಡಿ ಬೇಸತ್ತ ರೈತರು ಗುತ್ತಿಗೆದಾರರಿಗೆ 8-10 ಸಾವಿರ ರೂಪಾಯಿ ಖರ್ಚು ಮಾಡಿ ಸ್ವಂತ ಕಂಬ, ವಿದ್ಯುತ್ ವೈರ್ ತರಿಸಿಕೊಂಡು ವಿದ್ಯುತ್ ಸಂಪರ್ಕ ಕಲ್ಪಿಸಿಕೊಂಡಿದ್ದಾರೆ. ವಿದ್ಯುತ್ ಇಲಾಖೆಯವರೇ ಪಂಪು ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುತ್ತಿದ್ದರಾದರೂ ಇದು ಇಲಾಖೆಯ ವಿದ್ಯುತ್ ತಂತಿ, ಇದು ಎಲ್ಲಿಂದ ಬಂತು ಎಂದು ಇಲಾಖೆಯ ಯಾವುದೇ ಅಧಿಕಾರಿಗಳು, ರೈತರನ್ನು ಕೇಳುತ್ತಿಲ್ಲ. ಇನ್ನು ಇದೇ ಪರಿಸ್ಥಿತಿ ಮುಂದುವರಿಯುತ್ತಲೇ ಇದೆ. ರೈತರಿಗೆ ಕಂಬ, ತಂತಿ ಕೊಡುವುದಾಗಿ ಹೇಳಿ ಹಣ ತಿಂದು ಅಧಿಕಾರಿಗಳು ವರ್ಗವಾಗಿ ಹೋಗಿದ್ದರೂ, ರೈತರ ಅರ್ಜಿಗಳಿಗೆ ಮೋಕ್ಷ ದೊರೆತಿಲ್ಲ. ಸರ್ಕಾರದ ಕಂಬ, ತಂತಿ ಮತ್ತು ಅದಕ್ಕೆ ಬೇಕಾದ ಎಲ್ಲಾ ಸಾಮಾನುಗಳು ಸರಬರಾಜಾಗುತ್ತಿದ್ದರೂ ರೈತರಿಗೆ ಮಾತ್ರ ಸಿಗುತ್ತಿಲ್ಲವೆಂಬ ಅಂಶ ಇದರಿಂದ ಕಂಡು ಬರುತ್ತಿದೆ.



ಇದನ್ನು ತನಿಖೆಗೆ ಒಳಪಡಿಸಿದರೆ ಇದರ ಜಾಲದ ಆಳ ಎಷ್ಟೆಂಬುದು ತಿಳಿಯಬಹುದು.

ಭ್ರಷ್ಟಾಚಾರ ನಿರ್ಮೂಲನೆ ಹಾಗೂ ಸಮರ್ಪಕ ವಿದ್ಯುತ್ ಸರಬರಾಜಿಗಾಗಿ ಕರ್ನಾಟಕ ಪ್ರಾಂತ ರೈತ ಸಂಘವು, ಪ್ರತಿ ವರ್ಷವೂ ಸತತವಾಗಿ ಹೋರಾಟ ಮಾಡುತ್ತಲೇ ಬಂದಿದೆ. 1999 ರಲ್ಲಿ ಸಮರ್ಪಕ ವಿದ್ಯುತ್ ಸರಬರಾಜಿಗಾಗಿ ಆಗ್ರಹಿಸಿ ಕುರುಗೋಡಿನಲ್ಲಿ ಹೋರಾಟ ನಡೆಸಿದೆ. ಹಾಗೂ ಕುರುಗೋಡು ಸುತ್ತಮುತ್ತಲ ಹಳ್ಳಿಗಳ ಪಂಪ್‌ಸೆಟ್ ರೈತರನ್ನು ಸೇರಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ವಿದ್ಯುತ್ ಬಳಕೆದಾರರ ಸಂಘ ಸ್ಥಾಪಿಸಿ, 24 ಜನ ಸದಸ್ಯರಿರುವ ಒಂದು ಸಮಿತಿಯನ್ನು ರಚಿಸಿ, ಸತತವಾಗಿ ಹೋರಾಟ ನಡೆಸಿದುದರ ಫಲವಾಗಿ, 1999 ರ ಕೊನೆಯಲ್ಲಿ 5 ಮೆ.ವಾ. ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್ ಕೊಡಿಸಲಾಯಿತು. ಆದರೆ ಅದಕ್ಕೆ ಬೇಕಾದ ಇನ್ನು ಎರಡು ಬ್ರೇಕರ್‌ಗಳನ್ನು ಅಳವಡಿಸಬೇಕಾಗಿದ್ದರೂ, ಇನ್ನು ವಿದ್ಯುತ್ತಿನ ಕೊರತೆ ಸರಿದೂಗಿಸಲಾಗಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಕುರುಗೋಡಿನಲ್ಲಿರುವ ಕೇವಲ 33.11 ಕೆ.ವಿ. ಇಂದ ಸುಮಾರು 13, 14 ಕಿ.ಮಿ. ದೂರ ಎಮ್ಮಿಗನೂರು ಭಾಗದ ಕೆಲವು ಹಳ್ಳಿಗಳಿಗೆ ವಿದ್ಯುತ್ ಸರಬರಾಜು ಮಾಡುವುದು ಸಾಧ್ಯವಿಲ್ಲ. ಮಧ್ಯದಲ್ಲಿಯೇ ವಿದ್ಯುತ್ ಲಾಸು ಆಗಿ ಹೋಗುತ್ತಿರುವುದರಿಂದ ವಿದ್ಯುತ್ ಒಲ್ಟೇಜ್ ಇಲ್ಲದೇ, ಮನೆಗಳ ಬಲ್ಬುಗಳು ಎಣ್ಣೆಯ ದೀಪದಂತೆ ಉರಿಯುವಾಗ, ಹಿಟ್ಟಿನ ಗಿರಣಿ ಹಾಗೂ ನೀರೆತ್ತುವ ಯಂತ್ರಗಳು ಹೇಗೆ ತಾನೆ ಕೆಲಸ ಮಾಡಲು ಸಾಧ್ಯ. ಇದನ್ನು ಸರಿದೂಗಿಸಲು 110 ಕೆ.ವಿ. ಸಾಮರ್ಥ್ಯದ ಹೊಸ ವಿದ್ಯುತ್ ಘಟಕವನ್ನು ಸ್ಥಾಪಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘವು ಸಂಬಂಧಪಟ್ಟ ಕೆ.ಪಿ.ಟಿ.ಸಿ.ಎಲ್. ಮುಖ್ಯ ಅಧಿಕಾರಿಗಳಲ್ಲಿ ಮನವಿ ಸಲ್ಲಿಸಿ, ವಿನಂತಿಸಿಕೊಂಡಿದೆ.

110 ಕೆ.ವಿ. ವಿದ್ಯುತ್ ಘಟಕ ಸ್ಥಾಪಿಸಲು 1998 ರಲ್ಲಿಯೇ ನಿರ್ಣಯಿಸಿ, 2002 ರೊಳಗೆ ಕೆಲಸ ಮುಗಿಯಬೇಕಾಗಿದೆ. ಇದಕ್ಕಾಗಿ ಕುರುಗೋಡು ಗ್ರಾಮದ ನಾಗೇಂದ್ರಪ್ಪ ತಂದೆ. ಕೆಂಚಪ್ಪನವರಿಗೆ ಸೇರಿದ ಭೂಮಿ ಸರ್ವೆ ನಂ. 599 ಸಿ ಯಲ್ಲಿ 3.72 ಎಕರೆಯನ್ನು ಇಲಾಖೆಯು ತೆಗೆದುಕೊಂಡಿದೆ. ಮುನಿರಾಬಾದ್ - ಬಳ್ಳಾರಿ ಟಾಪ್‌ಲೈನ್ ಹಾಗೂ 10 ಮೆ.ವ್ಯಾ. ಸಾಮರ್ಥ್ಯದ ಒಟ್ಟು ರೂ. 650 ಲಕ್ಷಗಳ ಅಂದಾಜು ವೆಚ್ಚದ ನಿರ್ಮಾಣ ಕಾರ್ಯವನ್ನು 2002 ನೇ ಇಸ್ವಿಯೊಳಗೆ ಮುಗಿಸಬೇಕಾಗಿದೆ. ಆದರೆ 2 ವರ್ಷಗಳಿಂದಲೂ ಪತ್ರ ವ್ಯವಹಾರದ ಕಾರ್ಯವೇ ಮುಗಿದಿಲ್ಲ. ದಿನಾಂಕ 1.3.2000 ಕ್ಕೆ 4.1 ನೋಟಿಫಿಕೇಷನ್ ಆಗಿದ್ದು, ಇಲಾಖೆಯು ಈಗಾಗಲೇ ರೂ. 50,000 ಗಳನ್ನು ಸರ್ಕಾರಕ್ಕೆ ಸಂದಾಯ ಮಾಡಿದೆ. 6.1 ನೋಟಿಫಿಕೇಶನ್‌ಗಾಗಿ 23.3.2000 ದಂದು ಅರ್ಜಿ ಸಲ್ಲಿಸಲಾಗಿದೆ. ಇದು ದೊಡ್ಡ ಯೋಜನೆಯಾದ್ದರಿಂದ ಸರ್ಕಾರದ ಮೇಲೆ ಒತ್ತಡ ತರುವಂತಾಗಬೇಕು. ಶಾಸಕರು, ಸಂಸದರು, ಮಂತ್ರಿಗಳು ಇದರ ಬಗ್ಗೆ ಮಾತನಾಡುವಂತಾಗಬೇಕು. ಆದರೆ ದುರಾದೃಷ್ಟಕರ ಸಂಗತಿಯೆಂದರೆ 3 ಸಾರಿ ಕುರುಗೋಡು ಕ್ಷೇತ್ರದಿಂದ ಚುನಾಯಿತರಾಗಿ ಈಗ ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ತೋಟಗಾರಿಕೆ ಸಚಿವರಾಗಿರುವ, ಶ್ರೀ ಅಲ್ಲಂ ವೀರಭದ್ರಪ್ಪನವರು ಹೇಳಿಕೊಳ್ಳುವುದಕ್ಕಾದರೂ ಈ ಕುರುಗೋಡು ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಮಾಡಿಲ್ಲ. ಇದೇ ಅವರ ಸಾಧನೆಯ ದಾಖಲೆಯಾಗಿದೆ. ತುಂಗಭದ್ರಾ ನದಿ ನೀರಿಗೆ ಸಂಬಂಧಪಟ್ಟಂತೆ ಕುರುಗೋಡು ಕ್ಷೇತ್ರದ ಹೆಚ್.ಎಲ್.ಸಿ. ಹಾಗೂ ಎಲ್.ಐ.ಸಿ. ಕಾಲುವೆಯ ಕೆಳಭಾಗದ ರೈತರು ಪ್ರತಿ ವರ್ಷವೂ ತುಂಗಭದ್ರಾ ಊಳು ತೆಗೆಯಿಸುವ ಸಮಾಂತರ ಜಲಾಶಯಗಳಿಗಾಗಿ ಮತ್ತು ಸಮರ್ಪಕ ನೀರಿಗಾಗಿ ಸುಮಾರು 8 - 10 ವರ್ಷಗಳಿಂದಲೂ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಹೋರಾಟ ಮಾಡುತ್ತಾ ಬಂದ ವಿಷಯ ಸಾಮಾನ್ಯವೇನಲ್ಲ. ಆದರೆ ಶ್ರೀ ಅಲ್ಲಂ ವೀರಭದ್ರಪ್ಪನವರು ಈ ಕ್ಷೇತ್ರದ ಶಾಸಕರಾಗಿ ಹಾಗೂ ತುಂಗಭದ್ರಾ ಜಲಮಂಡಳಿ ಸದಸ್ಯರಾಗಿ ಇದುವರೆವಿಗೂ ಮಾಡಿದ್ದಾದರೂ ಏನು? ಜಲಮಂಡಳಿಯು ಹೆಚ್.ಎಲ್.ಸಿ. ಹಾಗೂ ಎಲ್.ಐ.ಸಿ. ಕಾಲುವೆಗಳಿಗೆ ನೀರು ನಿಲ್ಲಿಸುವಂತ ನಿರ್ಣಯ ಕೈಗೊಂಡಾಗ, ರೈತರ ಕಷ್ಟಗಳನ್ನು ಗಮನಿಸದೇ ನೀರು ನಿಲ್ಲಿಸುವ ನಿರ್ಣಯಕ್ಕೆ ಹಸಿರು ನಿಶಾನೆ ತೋರಿಸಿರುವುದು ಮತ್ತು ರೈತರು ಹೋರಾಟಗಳನ್ನು ಮಾಡಿದರೇ ರೈತರ ಜೊತೆಯಲ್ಲಿ ಧರಣಿ ಕುಳಿತುಕೊಂಡು ರೈತರನ್ನು ವಂಚಿಸುವಂತಹ ಕೀಳು ಮಟ್ಟದ ರಾಜಕೀಯ ಮಾಡುವುದನ್ನು, ನಾವು ಈಗಾಗಲೇ ಕಂಡಿದ್ದೇವೆ. ಇಂತಹ ಗೋಮುಖ ವ್ಯಾಘ್ರರನ್ನು ನಂಬಿ ಕೆಡದೇ ರೈತರೆಲ್ಲರೂ ಒಗ್ಗಟ್ಟಾಗಿ ಹೋರಾಟಕ್ಕೆ ಇಳಿದರೆ ಇಂತಹ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಾದೀತು.

- ಕೆ.ಗಾದಿಲಿಂಗಪ್ಪ

ರೈತ ಸಮ್ಮೇಳನ..............

ಪುಟ 4 ರಿಂದ

ಭಾರತ ರೈತಾಪಿ ವರ್ಗಕ್ಕೆ ಸಾಮ್ರಾಜ್ಯಶಾಹಿಗಳ ಧಾಳಿಯ ಅನುಭವವಾಗತೊಡಗಿದೆ ಎಂದರು. ಪರಂಪರಾಗತ ಕೃಷಿಯನ್ನು ಬದಲಾಯಿಸಿ ಕೃಷಿಯಲ್ಲಿ ರಫ್ತು ಮುಖವಾದ ನೀತಿಯನ್ನು ತರಲಾಗುತ್ತಿದೆ. ಆದರೆ ರಫ್ತು ವ್ಯಾಪಾರದಲ್ಲಿ ನಮ್ಮ ರೈತರು ಲಾಭಗಳಿಸುವುದು ಸಾಧ್ಯವಿಲ್ಲ ಎಂದು ಹೇಳಿದರು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಹೆಚ್ಚೆಚ್ಚು ಸಾಮ್ರಾಜ್ಯಶಾಹಿಗಳ ಪರ ವಾಲುತ್ತಿರುವುದು ಆತಂಕದ ವಿಷಯವಾಗಿದೆ. 1970-80 ರ ಹಸಿರು ಕ್ರಾಂತಿ, ಬಿಳಿ ಕ್ರಾಂತಿಗಳಿಂದ ಕೃಷಿ ಕ್ಷೇತ್ರಕ್ಕೆ ಸ್ವಲ್ಪವಾದರೂ ಅನುಕೂಲವಾಗಿದ್ದನ್ನು ಈಗ ಬದಲಾಯಿಸಲು ಹೊರಟಿದ್ದಾರೆ, ಸಬ್ಸಿಡಿಗಳನ್ನು ಕಡಿತ ಮಾಡುವುದು, ನೀರಾವರಿಯನ್ನು ಖಾಸಗೀಕರಣಗೊಳಿಸುವುದು, ಕೃಷಿ ಭೂಮಿಯನ್ನು ಕಂಪನಿಗಳಿಗೆ ಕೊಟ್ಟು ಗುತ್ತಿಗೆ ಕೃಷಿಯನ್ನು ಜಾರಿಗೆ ತರುವುದು ಮೊದಲಾದ ಕ್ರಮಗಳಿಂದ ಕೃಷಿಯಲ್ಲಿ ದೇಶೀಯ ಹಿತವನ್ನು ಸಂಪೂರ್ಣವಾಗಿ ಕೈಬಿಟ್ಟಂತಾಗಿದೆ. ಈ ನೀತಿಗಳಿಂದಾಗಿ ಶ್ರೀಮಂತ ರೈತರಿಗೂ ಧಕ್ಕೆಯಾಗುತ್ತಿದ್ದು ಸಣ್ಣ ಮತ್ತು ಮಧ್ಯಮ ರೈತ ತೀವ್ರ ಸಂಕಷ್ಟಕ್ಕೆ ಒಳಗಾಗುತ್ತಿದ್ದಾನೆ. ಖಾಸಗಿ ಸಾಲದ ಹಿಡಿತ ಹೆಚ್ಚುತ್ತಿದ್ದು ವಿಪರೀತ ಬಡ್ಡಿಯ ಸಾಲವನ್ನು ತೀರಿಸಲಾಗದೆ ಸಣ್ಣ ರೈತರು ಭೂಮಿಯನ್ನು ಮಾರಿಕೊಳ್ಳುತ್ತಿದ್ದಾರೆ.

ಕೇಂದ್ರ ಸರ್ಕಾರದ ವಿನಾಶಕಾರಿ ಕೃಷಿ ನೀತಿಯ ವಿರುದ್ಧ ಮತ್ತು ಮುಕ್ತ ಆಮದು ನೀತಿಯ ವಿರುದ್ಧ ದೇಶವ್ಯಾಪಿ ಹೋರಾಟ ನಡೆಸಲು ಅಖಿಲ ಭಾರತ ಕಿಸಾನ್ ಸಭಾ ಹಾಗೂ ಇತರ ಎಡ ರೈತ ಹಾಗೂ ಕೂಲಿಕಾರರ ಸಂಘಟನೆಗಳು ತೀರ್ಮಾನಿಸಿದೆ. ಈ ಹೋರಾಟದ ಕಾರ್ಯಕ್ರಮವನ್ನು ಕರ್ನಾಟಕದಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸುವ ಬಗ್ಗೆ ಸಮ್ಮೇಳನ ಚರ್ಚಿಸಬೇಕು ಎಂದು ಅವರು ಹೇಳಿದರು.

ರೈತರು ಎದುರಿಸುತ್ತಿರುವ ಪ್ರಶ್ನೆಗಳು ತುಂಬಾ ಗಂಭೀರವಾಗಿವೆ. ಅವುಗಳನ್ನು ಎದುರಿಸಲು ನಮ್ಮ ರೈತ ಸಂಘಟನೆ ಸಮರ್ಥವಾಗಬೇಕು. ಸರಿಯಾದ ಪ್ರಶ್ನೆಯನ್ನು ಎತ್ತಿ ಸರಿಯಾದ ಸಮಯದಲ್ಲಿ ಮಧ್ಯ ಪ್ರವೇಶ ಮಾಡಲು ನಮ್ಮ ಸಂಘಟನೆಗೆ ಸಾಧ್ಯವಾಗಬೇಕು. ಸಂಘಟನೆಯನ್ನು ಪ್ರಜಾಸತ್ತಾತ್ಮಕವಾಗಿ ನಡೆಸಬೇಕು. ರಾಜ್ಯ ಕೇಂದ್ರವನ್ನು ಜಿಲ್ಲಾ ಕೇಂದ್ರಗಳನ್ನು ಗಟ್ಟಿಗೊಳಿಸಬೇಕು. ರೈತ ಸಂಘದ ಕೆಲಸಕ್ಕಾಗಿಯೇ ಪೂರ್ಣಕಾಲದ ಕಾರ್ಯಕರ್ತರನ್ನು ನೇಮಿಸುವುದಾಗಬೇಕು. ಕಾರ್ಯಕರ್ತರಿಗೆ ತರಬೇತಿ ನೀಡಲು ಪ್ರಾದೇಶಿಕ ಶಿಬಿರಗಳನ್ನು ನಡೆಸಬೇಕು.

ರಾಜ್ಯ/ ಜಿಲ್ಲಾ ಸಮಿತಿಗಳ ಸಭೆಗಳು ತಪ್ಪದೆ ಕ್ರಮಬದ್ಧವಾಗಿ ನಡೆಯಬೇಕು. ಸ್ಥಳೀಯ ಘಟಕಗಳು ಪ್ರತಿವರ್ಷ ಘಟಕದ ಸಮ್ಮೇಳನವನ್ನು ನಡೆಸಿ ಕೆಲಸದ ವಿಮರ್ಶೆ ನಡೆಸಬೇಕು ಹಾಗೂ ನಾಯಕತ್ವವನ್ನು ಪುನರಾಯ್ಕೆ ಮಾಡಬೇಕು. ಕೃಷಿಕೂಲಿಕಾರರ ಹಾಗೂ ಮಹಿಳಾ ಸಂಘಟನೆಗಳೊಂದಿಗೆ ರೈತ ಸಂಘವು ಹೆಚ್ಚೆಚ್ಚು ಸಮನ್ವಯದಿಂದ ಕೆಲಸಮಾಡಬೇಕು. ಪ್ರಸ್ತುತ ಪ್ರಶ್ನೆಗಳನ್ನು ವಿವರವಾಗಿ ಚರ್ಚಿಸಿ ಸಮ್ಮೇಳನವು ಮುಂದಿನ ಅವಧಿಗೆ ನಿರ್ದಿಷ್ಟ ಕರ್ತವ್ಯಗಳನ್ನು

ಪುಟ 11 ಕ್ಕೆ

ಹತಾಶೆಯ ಬಿಜೆಪಿ ಆಕ್ರಮಣ

ಸೆಪ್ಟೆಂಬರ್ 17 ರಂದು ವಿರಾಜಪೇಟೆ ತಾಲೂಕು ಬೇಟೋಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಪೆರುಂಬಾಡಿ ಎಂಬಲ್ಲಿ ಡಿವೈಎಫ್‌ಐ ಮುಖಂಡ ಪೀಟರ್ ಲೋಬೋ ಮತ್ತಿತರರ ಮೇಲೆ ಆರ್‌ಎಸ್‌ಎಸ್ ಗೂಂಡಾಗಳು ಧಾಳಿ ನಡೆಸಿದ್ದಾರೆ. ಈ ಕೃತ್ಯಕ್ಕೆ ಪೋಲೀಸ್ ಇಲಾಖೆಯ ಸಂಪೂರ್ಣ ಬೆಂಬಲ ಕೂಡ ಇದೆ.

ಈಹಿಂದೆ ಪೋಲೀಸ್ ಇಲಾಖೆಯು ಪೊನ್ನಂಪೇಟೆ ಪೋಲೀಸ್ ಠಾಣೆಯಲ್ಲಿ ಲಾಕಪ್‌ಡೆತ್ ಆದ ಸಂದರ್ಭದಲ್ಲಿ ವಿರಾಜಪೇಟೆಯ ಪೋಲೀಸ್ ಅಧಿಕಾರಿ ಡಿವೈಎಸ್‌ಪಿಯವರೇ ಈ ಲಾಕಪ್‌ಡೆತ್‌ಗೆ ಕಾರಣವೆಂದು ಗುರುತಿಸಿ ಸಿಪಿಐ(ಎಂ) ಪಕ್ಷವು ಇದರ ವಿರುದ್ಧ ಪ್ರತಿಭಟನೆಯನ್ನು ನಡೆಸಿತ್ತು. ಈ ಪ್ರತಿಭಟನೆಯ ನಂತರ ಡಿವೈಎಸ್‌ಪಿ ಮೋಹನ್ ಹಾಗೂ ಮುಖ್ಯಪೇದೆ ಸುಬ್ರಮಣಿ ಇತರರು ಸಂಘಟನೆಯ ಮತ್ತು ಪಕ್ಷದ ಚಟುವಟಿಕೆಗಳನ್ನು ವಿರೋಧಿಸುವ ಆರ್‌ಎಸ್‌ಎಸ್ ಗೂಂಡಾಗಳನ್ನು ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ಉಪಯೋಗಿಸುತ್ತಿದ್ದಾರೆ. ಪಕ್ಷದ ಪ್ರಮುಖರ ಕಾಲುಕೈ ಮುರಿದು ನೇರವಾಗಿ ಪೋಲೀಸ್ ಠಾಣೆಗೆ ಬನ್ನಿ ತಾವು ನಿಮ್ಮೊಂದಿಗೆ ಇದ್ದೇವೆ ಎಂದು ಪೋಲೀಸ್ ಅಧಿಕಾರಿ ಡಿವೈಎಸ್‌ಪಿ ಮೋಹನ್ ಮತ್ತು ಅವರ ಸಹವರ್ತಿಗಳು ಬಿಟ್ಟಂಗಾಲದಲ್ಲಿರುವ ಯಜ್ಞ ಟ್ರಾವೆಲ್ಸ್‌ನಲ್ಲಿ ಆರ್‌ಎಸ್‌ಎಸ್ ನ ಗೂಂಡಾಗಳಾದ ಗಣೇಶ(ಬೇಟೋಳಿ ಪಂಚಾಯ್ತಿ ಉಪಾಧ್ಯಕ್ಷ) ಬಾಬು, ಹೇಮಂತ್, ಆಟೋಗಣೇಶ, ರತ್ನ, ಪವನ್, ಜೀವನ್, ಮಂಜು, ಗಿರೀಶ್, ಶರಣ, ಲವ, ಬೆಳ್ಳಿಯಪ್ಪ, ಜನಾರ್ಧನ, ವಾಸು ಇವರಿಗೆ ಹೇಳಿದ್ದಾಗಿ ತಿಳಿದುಬಂದಿದೆ. ಈ ಪೋಲೀಸ್‌ಅಧಿಕಾರಿಯಿಂದ ಪ್ರೇರಿತರಾಗಿ ಈ ಮೇಲೆ ಹೇಳಿದವರು ಏಕಾಏಕಿಯಾಗಿ ಕತ್ತಿ, ದೊಣ್ಣೆ, ರಿವಾಲ್ವರ್, ಕೋವಿಗಳಿಂದ ಹಲ್ಲೆ ನಡೆಸಿದ್ದಾರೆ.


ಡಿವೈಎಫ್‌ಐ ನ ಕಾರ್ಯಕರ್ತರಿಗೆ ಇದರಿಂದ ತೀವ್ರ ಪೆಟ್ಟಾಗಿದೆ. ಹಲ್ಲೆ ನಡೆದ ಬಳಿಕ ಈ ವಹಿಸಿಲ್ಲ.

ಪೋಲೀಸ್ ಇಲಾಖೆ ಊರಿನಲ್ಲಿ ಶಾಂತಿ ಸಭೆ ಕರೆದು ಸಮಿತಿ ಮಾಡಿರುತ್ತಾರೆ. ಈ ಸಮಿತಿಯ ಸದಸ್ಯರು ಈ ಮೇಲೆ ಕಾಣಿಸಿದ ಆರ್.ಎಸ್.ಎಸ್.-ಬಿಜೆಪಿ ಗೂಂಡಾಗಳಾಗಿದ್ದಾರೆ. ಪೋಲೀಸ್ ಇಲಾಖೆಯ ಕಣ್ಣು ಮುಚ್ಚಾಲೆ ಆಟ ಇದಾಗಿದೆ. ಶಾಂತಿ ಸಭೆಯಲ್ಲಿ ಪರಊರಿನವರು ಸಂಘ ಮಾಡಲು ಇಲ್ಲಿ ಬರಬಾರದೆಂದು ಡಿವೈಎಸ್‌ಪಿ ಹೇಳಿದ್ದಾರೆ.

ಜಿಲ್ಲಾ ತಾಲ್ಲೂಕು ಪಂಚಾಯ್ತಿ ಚುನಾವಣೆಯಲ್ಲಿ ಬೇಟೋಳಿ ಕ್ಷೇತ್ರದಲ್ಲಿ ಸಿಪಿಐ(ಎಂ) ಪಕ್ಷವು ಎರಡನೇ ಸ್ಥಾನದಲ್ಲಿ ಬಂದಿದ್ದು, ಹಿಂದೆ ಗೆದ್ದಿದ್ದ ಬಿಜೆಪಿ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದು ಸಹಾ ಈ ಆರ್‌ಎಸ್‌ಎಸ್ ಗೂಂಡಾಗಳಿಗೆ ಸಹಿಸಲು ಸಾಧ್ಯವಾಗಲಿಲ್ಲ.

ಈ ಹಲ್ಲೆಗೆ ಇಡೀ ಗ್ರಾಮದಲ್ಲಿ ಪೆರುಮೆಕಾಡು ಸರ್ಕಾರಿ ಜಾಗ ಬಡವರಿಗೆ ಹಂಚಬೇಕೆಂಬ ನಮ್ಮ ಬೇಡಿಕೆಯ ಹಿನ್ನೆಲೆ ಕೂಡ ಇದೆ. ತೆರೆಮೆಕಾಡಿನ ಪೈಸಾರಿ ಜಾಗವನ್ನು ಹಂಚುವುದರ ಬಗ್ಗೆ ಪೀಟರ್‌ಲೋಬೋ ಹರಿಜನ-ಗಿರಿಜನರ ಪರವಾಗಿ ಹೋರಾಟ ನಡೆಸಿದ ಕಾರಣವಾಗಿ ಆರ್‌ಎಸ್‌ಎಸ್ ನವರು ಪ್ರಮುಖ ಸಿಪಿಐ(ಎಂ)-ಡಿವೈಎಫ್‌ಐ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ್ದಾರೆ.

ಈ ದೌರ್ಜನ್ಯವನ್ನು ಸಿಪಿಐ(ಎಂ) ವಿರಾಜಪೇಟೆ ಹಾಗೂ ಕೊಡಗು ಜಿಲ್ಲಾ ಸಮಿತಿ, ಡಿವೈಎಫ್‌ಐ-ಎಸ್‌ಎಫ್‌ಐ ಸಂಘಟನೆಗಳು ಉಗ್ರವಾಗಿ ಖಂಡಿಸಿವೆ. ಕೊಡಗು ಪ್ರಾದೇಶಿಕ ಸಮಿತಿ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್ ಸದಸ್ಯ ಕಾಳಯ್ಯನವರ ನೇತೃತ್ವದಲ್ಲಿ ಎಸ್.ಪಿ.ಯವರಿಗೆ ನಿಯೋಗ ಮನವಿ ಸಲ್ಲಿಸಿ ದುಷ್ಕರ್ಮಿಗಳ ಮೇಲೆ ಕ್ರಮ ಜರುಗಿಸಲು ಆಗ್ರಹಿಸಿದ್ದಾರೆ. ಬೆಂಗಳೂರಿನಲ್ಲಿ ರಾಜ್ಯ ಪೋಲೀಸ್ ಮಹಾನಿರ್ದೇಶಕರಾದ ಸಿ.ದಿನಕರರವರನ್ನು ರಾಜ್ಯ ಮುಖಂಡರಾದ ಎಸ್.ವೈ.ಗುರುಶಾಂತ್, ಬಾಲಕೃಷ್ಣ ಶೆಟ್ಟಿ,



ಹಲ್ಲೆಗೊಳಗಾದ ಡಿವೈಎಫ್‌ಐ ಮುಖಂಡ ಪೀಟರ್ ಲೋಬೋ


ಆರ್‌ಎಸ್‌ಎಸ್ ಗೂಂಡಾಗಳ ತಂಡ ನೇರವಾಗಿ ಪೋಲೀಸ್ ಠಾಣೆಗೆ ಹೋಗಿ ನೀವು ಹೇಳಿದ ಹಾಗೆ ಮಾಡಿದ್ದೇವೆಂದು ಪೋಲೀಸರಿಗೆ ತಿಳಿಸಿದ್ದಾರೆ. ಇದರಿಂದ ಸ್ಪಷ್ಟವಾಗುತ್ತದೆ ಪೋಲೀಸರ ಕುಮ್ಮಕ್ಕಿನಿಂದಲೇ ಈ ದಾಳಿ ನಡೆದಿದೆಯೆಂದು.

ಅಲ್ಲದೆ ಈ ಮೊದಲು ಇದೇ ತಂಡದವರು ವಿರಾಜಪೇಟೆ ಅಲ್ಪಸಂಖ್ಯಾತರ ಮೇಲೆ ಮಾರಕ ಅಸ್ತ್ರಗಳಿಂದ ಹಲ್ಲೆ ನಡೆಸಿರುತ್ತಾರೆ. ಪೆರುಂಬಾಡಿ, ಆರ್ಜಿ, ಹೆಗ್ಗಳ ಭಾಗದಲ್ಲಿ ಇವರ ದಾಂಧಲೆ ಹೆಚ್ಚಿ ಈ ಕುರಿತು ಪೋಲೀಸ್ ಠಾಣೆಯಲ್ಲಿ ದೂರು ನೀಡಿದರೂ ಇವರ ಬಗ್ಗೆ ಯಾವುದೇ ಕ್ರಮ ಕೆ.ಮಹಾಂತೇಶ್‌ರವರಿದ್ದ ರಾಜ್ಯ ಸಮಿತಿ ನಿಯೋಗವು ಭೇಟಿ ಮಾಡಿ ಹಲ್ಲೆಕೋರರು ಮತ್ತು ಶಾಮೀಲಾಗಿರುವ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲು ಒತ್ತಾಯಿಸಿದೆ. ಡಿವೈಎಫ್‌ಐ ರಾಜ್ಯಸಮಿತಿ ರಾಜ್ಯದ ಎಲ್ಲಾ ಜಿಲ್ಲಾ ಘಟಕಗಳು ಕೊಡಗು ಎಸ್‌ಪಿಯವರಿಗೆ ತಂತಿ ಸಂದೇಶ ಕಳಿಸಿ, ಖಂಡಿಸಲು ಹಾಗೂ ಕ್ರಮ ವಹಿಸಲು ಕರೆ ನೀಡಿದೆ. ಆದರೆ ವಿರಾಜಪೇಟೆ ಪೋಲೀಸ್ ಅಧಿಕಾರಿಗಳು ಕೊಲೆ ಯತ್ನದ ಮೊಕದ್ದಮೆ ಬದಲು ಗುಂಪುಗಲಭೆ ಯತ್ನ ಎಂದಷ್ಟೇ ನಮೂದಿಸಿ, ಆರೋಪಿಗಳ ಬಂಧನದ ನಾಟಕವಾಡುತ್ತಿದ್ದಾರೆ. ಇದನ್ನು ಪ್ರತಿಭಟಿಸಲು ನಿರ್ಧರಿಸಲಾಗಿದೆ.

ಯುದ್ಧ ಹಾಗೂ ಅನಭಿವೃದ್ಧಿಯಿಂದ ವಿಶ್ವವನ್ನು ವಿಶ್ವಸಂಸ್ಥೆ ರಕ್ಷಿಸಬೇಕು

ಫಿಡೆಲ್ ಕ್ಯಾಸ್ಟ್ರೋ

ಸೆಪ್ಟೆಂಬರ್ 6 ರಂದು ವಿಶ್ವಸಂಸ್ಥೆಯ ಸಹಸ್ರಮಾನ ಸಮಾವೇಶದಲ್ಲಿ ಫಿಡೆಲ್ ಕ್ಯಾಸ್ಟ್ರೋ ನೀಡಿದ ಭಾಷಣದ ಸಾರಾಂಶ



ಗಡಿಯ ಒಳಗೆ ಹಾಗೂ ಹೊರಗೆ ನಮ್ಮ ವಿಶ್ವದಲ್ಲಿಂದು ಗೊಂದಲ ಉಂಟಾಗಿದೆ. ನಮ್ಮಗ್ರಹಕ್ಕೆ ಅತಿ ಅಗತ್ಯವಿರುವ ಶಾಂತಿ, ಸುವ್ಯವಸ್ಥೆ ಹಾಗೂ ಭದ್ರತೆಯನ್ನು ತರುತ್ತೇವೆಂದು ಕೆಲವು ಅಂಧ ಕಾನೂನುಗಳನ್ನು ದೈವಿ ನಿಯಮಗಳಂತೆ ಮಂಡಿಸಲಾಗಿದೆ. ಅದನ್ನೇ ನಾವು ನಂಬಬೇಕೆಂದು ಅವರು ಬಯಸಿದ್ದಾರೆ.

ನಮ್ಮನ್ನು ನಿರಂತರವಾಗಿ ಬಡವರನ್ನಾಗಿ, ಶೋಷಿತರನ್ನಾಗಿ ಹಾಗೂ ಪರಾವಲಂಬಿಗಳನ್ನಾಗಿಸಿದ-ಅದೇ ಮಾತುಗಳನ್ನು ಹೇಳಲೆಂದು ಆರ್ಥಿಕ, ತಾಂತ್ರಿಕ ಹಾಗೂ ರಾಜಕೀಯ ಶಕ್ತಿಯ ಮೇಲೆ ಗುತ್ತಿಗೆಯನ್ನು ಸಾಧಿಸಿರುವ 30 ಅಭಿವೃದ್ಧಿ ಹೊಂದಿದ ಹಾಗೂ ಶ್ರೀಮಂತ ರಾಷ್ಟ್ರಗಳು ನಮ್ಮೊಂದಿಗೆ ಇಂದು ಇಲ್ಲಿ ಸೇರಿವೆ.

50 ವರ್ಷಕ್ಕೂ ಹೆಚ್ಚು ಕಾಲ ಅಸ್ತಿತ್ವದಲ್ಲಿರುವ ಈ ಸಂಸ್ಥೆಯನ್ನು, ಕ್ರಾಂತಿಕಾರಕವಾಗಿ ಸುಧಾರಿಸುವ ಯಾವುದೇ ಪ್ರಸ್ತಾಪವಿಲ್ಲ. ಕೆಲವೇ ಕೆಲವು ಸ್ವತಂತ್ರ ರಾಷ್ಟ್ರಗಳಿದ್ದ ಸನ್ನಿವೇಶದಲ್ಲಿ ರೂಪಿಸಲಾಗಿದ್ದ ನಿಯಮಗಳನ್ನೇ ಇಂದು ಸಹಾ ಮುಂದುವರಿಸಲಾಗುತ್ತಿದೆ. ಇಡೀ ವಿಶ್ವದ ಜನತೆಯ ಹಿತಾಸಕ್ತಿಯನ್ನು ಪ್ರತಿನಿಧಿಸುವಂತಹ ಸಂಸ್ಥೆಯನ್ನಾಗಿ, ಯಾವುದೇ ಒಬ್ಬರಿಗೆ ಮತ್ತೊಂದು ರಾಷ್ಟ್ರಕ್ಕೆ ಕಿರಿಕಿರಿಯುಂಟುಮಾಡುವ ಪ್ರಜಾಪ್ರಭುತ್ವ ವಿರೋಧಿ ವಿಟೋ ಅಧಿಕಾರ ಉಪಯೋಗಿಸಲಾಗದಂತಹ ಪರಿಸ್ಥಿತಿ ನಿರ್ಮಿಸಲು ಸಾಧ್ಯವಾಗಿಲ್ಲ. ಅಂತೆಯೆ ಮಧ್ಯಪ್ರವೇಶ ಹಾಗೂ ಶಕ್ತಿಯ ಪ್ರಯೋಗದಂತಹ ಪ್ರಮುಖ ವಿಷಯಗಳ ಬಗ್ಗೆ ನಿರ್ಣಯಿಸುವಂತಹ ಭದ್ರತಾ ಮಂಡಳಿಯನ್ನು ವಿಸ್ತರಿಸಿ ಹೊಸ ಸದಸ್ಯರನ್ನು ಒಳಗೊಂಡು, ಸಾಮಾನ್ಯ ಸಭೆಯ ಅಧೀನದಲ್ಲಿರುವ ಕಾರ್ಯಕಾರಿ ಮಂಡಳಿಯನ್ನಾಗಿ ಮಾರ್ಪಡಿಸಲು ಸಾಧ್ಯವಾಗಿಲ್ಲ.

ತನ್ನ ಅಧಿಕಾರ ಹಾಗೂ ಶಕ್ತಿಯನ್ನು ಪ್ರಯೋಗಿಸಿ ಸರ್ವಾಧಿಕಾರಿ ಸೂಪರ್ ಪವರ್ ಎಲ್ಲವನ್ನು ನಿರ್ಣಯಿಸುವಂತಹ ಶೋಷಣೆ, ಅಸಮಾನ ವ್ಯವಸ್ಥೆಗಾಗಿ ಸಾರ್ವಭೌಮತೆಯ ನಿಯಮವನ್ನು ಬಲಿಕೊಡಲು ಸಾಧ್ಯವಿಲ್ಲ. ಕ್ಯೂಬಾ ಇದನೆಂದಿಗೂ ಒಪ್ಪಿಕೊಳ್ಳಲಾರದು.

ವಿಶ್ವದ ಬಹಳಷ್ಟು ರಾಷ್ಟ್ರಗಳಲ್ಲಿ ತಾಂಡವವಾಡುತ್ತಿರುವ ಬಡತನ ಹಾಗೂ ಅನಭಿವೃದ್ಧಿ ಹಾಗೂ ಸಂಪತ್ತಿನ ಮತ್ತು ಜ್ಞಾನದ ಅಸಮಾನ ಹಂಚಿಕೆಯಲ್ಲಿ ಪ್ರಸ್ತುತ ಘರ್ಷಣೆಗಳ ಹಿಂದಿನ ಮೂಲಭೂತ ಕಾರಣಗಳನ್ನು ಕಾಣಬೇಕಿದೆ. ಈ ಅನಭಿವೃದ್ಧಿ ಹಾಗೂ ಬಡತನಕ್ಕೆ ನೇರ ಕಾರಣವಾದ ವಸಾಹತುಶಾಹಿ ಆಕ್ರಮಣ, ವಸಾಹತುಗಳ ದಾಸ್ಯ, ಭೂಮಿಯ ಸಂಪತ್ತಿನ ದರೋಡೆ, ಸಾಮ್ರಾಜ್ಯ ಶಾಹಿಯ ಉಗಮ ಹಾಗೂ ವಿಶ್ವದ ಮೇಲಿನ ಅಧಿಪತ್ಯ ಸ್ಥಾಪನೆಗಾಗಿ ಆಗಿಂದ್ದಾಗ್ಗೆ ನಡೆದ ಯುದ್ಧಗಳನ್ನು ಮರೆಯುವಂತಿಲ್ಲ. ನಮ್ಮ ದೇಶಗಳಿಗೆ ಅವರುಂಟು ಮಾಡಿದ ನಷ್ಟಗಳಿಗೆ ಪರಿಹಾರ ಒದಗಿಸುವ ನೈತಿಕ ಜವಾಬ್ದಾರಿಯನ್ನು ಅವರಿಂದು ಹೊರಬೇಕಿದೆ.

ಮಾನವ ಕುಲಕ್ಕೆ ನಾವೇನಾಗಿದ್ದವು ಮತ್ತು ಏನಾಗುತ್ತಿದ್ದೇವೆ ಎಂಬುದರ ಅರಿವಾಗಬೇಕಿದೆ. ಮುಂದಿನ ಹೊಸ ಐತಿಹಾಸಿಕ ಘಟ್ಟವಾದ ನೈಜ ನ್ಯಾಯ ಹಾಗೂ ಮಾನವೀಯತೆಯ ಹಂತಕ್ಕೆ ಮುನ್ನಡೆಯಲು ಅಗತ್ಯವಿರುವ ಜ್ಞಾನ, ನೈತಿಕ ಮೌಲ್ಯಗಳು ಹಾಗೂ ವೈಜ್ಞಾನಿಕ ಸಂಪನ್ಮೂಲಗಳನ್ನು ಇಂದು ಮಾನವ ಸಂತತಿ ಗಳಿಸಿಕೊಂಡಿದೆ.

ಪ್ರಸ್ತುತ ಆರ್ಥಿಕ ಹಾಗೂ ರಾಜಕೀಯ ವ್ಯವಸ್ಥೆಯು ಮಾನವ ಕುಲಕ್ಕೆ ಉಪಯುಕ್ತವಾಗಿಲ್ಲ. ಇದನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ. ಇದನ್ನು ಬದಲಿಸಬೇಕಿದೆ. ನಾವೀಗ ಆರು ಬಿಲಿಯನ್ ನಿವಾಸಿಗಳಾಗಿದ್ದೇವೆ. ಅದರಲ್ಲಿ ಶೇ 80 ರಷ್ಟು ಬಡವರಿದ್ದಾರೆ ಎಂಬುದನ್ನು ನಾವು ಅರಿಯಬೇಕಿದೆ. ಶತಮಾನಗಳಷ್ಟು ಹಳೆಯದಾದ ಮಲೇರಿಯಾ, ಕ್ಷಯ ಹಾಗೂ ಇತರೆ ರೋಗಗಳನ್ನು ನಿವಾರಿಸಿಕೊಳ್ಳಲು ಇಂದಿಗೂ ತೃತೀಯ ಜಗತ್ತಿನ ರಾಷ್ಟ್ರಗಳಿಂದ ಸಾಧ್ಯವಾಗಿಲ್ಲ. ಹೊಸ ಸಾಂಕ್ರಮಿಕ ರೋಗಗಳಾದ ಏಡ್ಸ್‌ನಂತಹವು ಇಡೀ ಮಾನವ ಕುಲವನ್ನೇ ನಾಶ ಮಾಡುವಂತಹ ಬೆದರಿಕೆಯನ್ನು ಒಡ್ಡುತ್ತಿವೆ. ಶ್ರೀಮಂತ ರಾಷ್ಟ್ರಗಳು ಮಿಲಿಟರಿ ಹಾಗೂ ಮೋಜಿಗಾಗಿ ಬಂಡವಾಳ ಹೂಡುತ್ತಿವೆ. ಪ್ರತಿದಿನ ತ್ರಿಲಿಯಾಂತರ ಡಾಲರ್‌ಗಳಷ್ಟು ಮೌಲ್ಯವುಳ್ಳ ನೈಜ ಹಾಗೂ ಕಾಲ್ಪನಿಕ ಆಸ್ತಿಯ ಪರಭಾರೆಯನ್ನು ಹಣದ ಹಾಗೂ ಶೇರುಗಳ ವಿನಿಮಯದ ಹೆಸರಿನಲ್ಲಿ ಲೂಟಿ ಮಾಡುತ್ತಿದ್ದಾರೆ. ಪ್ರಕೃತಿಯನ್ನು ಹಾಳುಗೆಡವಲಾಗಿದೆ. ಪರಿಸರವು ಕಣ್ಣಿಗೆ ರಾಚುವಂತೆ ಬದಲಾಗುತ್ತಿದೆ, ಮಾನವ ಬಳಕೆಗೆ ನೀರು ಸಾಕಾಗುತ್ತಿಲ್ಲ ಮತ್ತು ಕಲುಷಿತಗೊಂಡಿದೆ. ಮನುಷ್ಯರ ಆಹಾರವಾಗಿದ್ದ ಸಮುದ್ರದ ಸಂಪನ್ಮೂಲಗಳು ಬರಿದಾಗುತ್ತಿವೆ,ಮೋಜಿಗಾಗಿ ಅಪಾರ ಮೌಲ್ಯವುಳ್ಳ ಸಂಪನ್ಮೂಲ ವ್ಯರ್ಥವಾಗುತ್ತಿದೆ.

ಈ ವಿಶ್ವವನ್ನು ಕೇವಲ ಯುದ್ಧದಿಂದ ಮಾತ್ರವಲ್ಲದೆ ಅನಭಿವೃದ್ಧಿ,ಹಸಿವು, ರೋಗ,ಬಡತನ ಹಾಗೂ ಮಾನವ ಅಸ್ತಿತ್ವಕ್ಕೆ ಅಗತ್ಯವಾದ ನೈಸರ್ಗಿಕ ಸಂಪನ್ಮೂಲದಿಂದ ರಕ್ಷಿಸುವಉದ್ದೇಶವು ಮುಂದಿನ ಶತಮಾನಗಳಲ್ಲಿ ವಿಶ್ವಸಂಸ್ಥೆಯ ಮೂಲಭೂತ ಉದ್ದೇಶವಾಗಬೇಕಿದೆ. ತಡವಾಗುವ ಮುನ್ನ ಇದನ್ನು ತುರ್ತಾಗಿ ಮಾಡಬೇಕಿದೆ.

ಮನುಷ್ಯನ ಭವಿಷ್ಯವನ್ನು ರೂಪಿಸುವ ನ್ಯಾಯ ಸಮ್ಮತವಾದ ಹಾಗೂ ಸಮನಾದ ನಿಯಮಗಳನ್ನು ರೂಪಿಸುವ ಕನಸು ಕೆಲವರಿಗೆ ಅಸಾಧ್ಯವಾಗಿ ಕಾಣಬಹುದು. ನಮ್ಮನ್ನು ಇಲ್ಲಿ ಇಂದು ಒಂದುಗೂಡಿಸಿರುವ ಈ ಸಂಸ್ಥೆಯ ಮುಖ್ಯ ಉದ್ದೇಶ ಅಸಾಧ್ಯವಾದುದನ್ನು ಗಳಿಸುವುದಕ್ಕಾಗಿ ಹೋರಾಟ ನಡೆಸುವುದಾಗಬೇಕೆಂಬುದು ನಮ್ಮ ನಂಬಿಕೆ.

ಸಮುದಾಯದ "ನೀರು" ನಾಟಕ

ಯುವ ನಿರ್ದೇಶಕನ ಉತ್ತಮ ಪ್ರಯತ್ನ

ದಂತಚೋರ ವೀರಪ್ಪನ್‌ನ ಹಾವಳಿಯಿಂದಾಗಿ ಕರ್ನಾಟಕದ ಜನ ಸಂಗೀತ ನಾಟಕ ಮತ್ತು ಸಿನಿಮಾಗಳಿಂದ ವಂಚಿತರಾಗಿದ್ದಾರೆ ಎಂಬ ಅಭಿಪ್ರಾಯ ಇದೆ! ಚಿತ್ರಮಂದಿರಗಳಲ್ಲಿ ಸಿನಿಮಾ ಪ್ರದರ್ಶನ ಹಾಗೂ ಚಿತ್ರೀಕರಣಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳು ನಿಂತುಹೋಗಿರುವುದು ನಿಜ. ಆದರೆ ಪುಟ್ಟಪರದೆ (ದೂರದರ್ಶನ) ಯ ಮೇಲೆ ಎಲ್ಲಾ ರೀತಿಯ ಮನರಂಜನೆಗಳೂ ವಿಜೃಂಭಿಸುತ್ತಿವೆ. ಎಲ್ಲಾ ರೀತಿಯ ಜನಗಳೂ ನೋಡಿ ಆನಂದಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಸಮುದಾಯದಿಂದ ನೀರು ನಾಟಕ ಪ್ರದರ್ಶನ ಬೆಂಗಳೂರಿನ ಎಡಿಎ ರಂಗ ಮಂದಿರದಲ್ಲಿ ಆಗಸ್ಟ್ 21 ,2000 ದಂದು ನಡೆಯಿತು. ಜ್ಞಾನಪೀಠ ಪ್ರಶಸ್ತಿ ವಿಜೇತೆ ಶ್ರೀಮತಿ ಮಹಾಶ್ವೇತಾದೇವಿ ಯವರ ಬಂಗಾಳಿಮೂಲದ ಜಲ್' ನ ಕನ್ನಡಾನುವಾದ " ನೀರು".

ಬಡವ-ಶ್ರೀಮಂತ ಗಂಡು ಹೆಣ್ಣು ಅಜ್ಞಾನಿ-ಸುಜ್ಞಾನಿ ಕಲಿತವ ಕಲಿಯದವ ಹೀಗೆ ಎಲ್ಲರ ಬದುಕಿಗೂ ತೀರ ಅವಶ್ಯವಾದ ನೀರಿನ ಸುತ್ತ ಈ ನಾಟಕದ ವಸ್ತು ಕೇಂದ್ರೀಕೃತವಾಗಿದೆ. ನೀರಿನ ಮೂಲಕ ಈ ವ್ಯವಸ್ಥೆಯ ಗರ್ಭದಲ್ಲಿ ಅಡಗಿರುವ ಅಮಾನವೀಯ ಹಿಂಸೆ, ಕ್ರೌರ್ಯ ಸುಲಿಗೆ ಮುಂತಾದವುಗಳನ್ನು ಬಯಲಿಗೆಳೆಯುತ್ತದೆ ಈ ನಾಟಕವು ನೀರಿನ ಮೂಲ ಹುಡುಕಿ ಕೊಡಲು ನೀರಿನ ಬಾವಿ ತೋಡಲು ಕೆಳವರ್ಗದ ಕೆಳ ಜಾತಿಯ ಜನ ಬೇಕು. ಬಾವಿ ಸಿದ್ಧವಾದ ಮೇಲೆ ಆ ಬಾವಿಯ ನೀರನ್ನು ಮುಟ್ಟಿದರೆ ಅದು ಮೈಲಿಗೆಯಾಗುತ್ತದೆ ಎಂಬ ಸಿದ್ಧಾಂತ ನಮ್ಮಲ್ಲಿ ಈಗಲೂ ಪ್ರಚಲಿತವಾಗಿರುವ ಸಂಗತಿ. ಆದರೆ ನಮ್ಮನ್ನು ಆಳುವವರು ಆ ಪದ್ದತಿ ನಿರ್ಮೂಲನವಾಗಿದೆ ಎಂದು ಅಬ್ಬರದ ಪ್ರಚಾರ ಮಾಡಿಯೇ ಇದ್ದಾರೆ. ಸ್ವಾತಂತ್ರ್ಯ ಬಂದು ಐವತ್ಮೂರು ವರ್ಷಗಳ ನಂತರವೂ ಆ ಪದ್ಧತಿ ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಜೀವಂತವಾಗಿದೆ. ದಲಿತರ ಹೆಸರಿನಲ್ಲಿ ಅನೇಕ ಯೋಜನೆಗಳು ಆರಂಭವಾಗಿದ್ದರೂ ಅದರ ಬಹುಪಾಲು ಲಾಭವನ್ನು ಮೇಲ್ವರ್ಗದ ಜನರೇ ತಿಂದು ಹಾಕುತ್ತಾರೆ ದಲಿತ ಜನ ಇನ್ನೂ ದಲಿತರಾಗಿಯೇ ಒಂದ್ಹೊತ್ತಿನ ಊಟಕ್ಕೆ ಪರದಾಡುವ ಸ್ಥಿತಿ. ಈ ಎಲ್ಲಾ ಸತ್ಯ ಸಂಗತಿಗಳನ್ನು "ನೀರು" ನಾಟಕ ಪರಿಣಾಮ ಕಾರಿಯಾಗಿ ಬಿಂಬಿಸುವುದರಲ್ಲಿ ಯಶಸ್ವಿಯಾಗಿದೆ.

ಕಥೆ:

ಬಂಗಾಳದ ಒಂದು ಹಳ್ಳಿ ಅಲ್ಲಿಗೆ ಬಂದಿದ್ದ ಮೂವರು ನಕ್ಸಲೈಟ್‌ರಿಗಾಗಿ ಪೋಲೀಸರು ಹುಡುಕಾಡುವುದರೊಂದಿಗೆ ನಾಟಕ ಪ್ರೇಕ್ಷಕರಿಗೆ ಬಿಚ್ಚಿಕೊಳ್ಳುತ್ತದೆ, ಆ ಊರಿನ ಮುಖ್ಯಸ್ಥ ಸಂತೋಷ್ ಬಾಬು, ಪಂಚಾಯತಿ ಅಧ್ಯಕ್ಷ. ಬುಟ್ಟಿ ಹೆಣೆಯುವ ಕೆಲಸದಲ್ಲಿ ಹಳ್ಳಿಯ ದಲಿತರು ನಿಪುಣರು. ಅವರ 'ಹಿರಿಟ' ಮೊಘಾಯ್ ಆ ಪ್ರದೇಶದಲ್ಲೆಲ್ಲಾ ನೀರಿನ ನೆಲೆಯನ್ನು ಹುಡುಕಿಕೊಡುವುದರಲ್ಲಿ ಪರಿಣಿತ ಹಾಗೆಯೇ ಬಾವಿ ತೋಡಿಕೊಡುವ ಕೆಲಸದಲ್ಲಿ ತಮ್ಮವರನ್ನೆಲ್ಲ ತೊಡಗಿಸಿಕೊಂಡು ಮುಗಿಸಿಕೊಡುತ್ತಿದ್ದ. ಆದರೆ ಅಂತಹ ಬಾವಿಯ ನೀರನ್ನು ಅವರೇ ಉಪಯೋಗಿಸಲು ಬಿಡುತ್ತಿರಲಿಲ್ಲ


"ಸಂತೋಷ ಬಾಬು ಆ ಭಾಗದ ಜನರಿಗೆ ಸರ್ಕಾರದಿಂದ ಮಂಜುರಾದ ಬಾವಿ ತೋಡಿಸಿಕೊಡುತ್ತಿದ್ದ. ಅದಕ್ಕೆ ಮೊಘಾಯ್ ಅನಿವಾರ್ಯವಾಗಿ ಸಹಾಯಮಾಡಬೇಕಾಗುತ್ತಿತ್ತು. ಆದರೆ ಸಿಗುತ್ತಿದ್ದ ಕೂಲಿ ಅತ್ಯಲ್ಪ. ತುಳಿತಕ್ಕೊಳಗಾದವರ ಉದ್ಧಾರಕ್ಕೆಂದು ಬರುತ್ತಿದ್ದ ಸರ್ಕಾರಿ ಯೋಜನೆಗಳ ಹಣವನ್ನೆಲ್ಲ ಸಂತೋಷ್ ಬಾಬು ನುಂಗಿ ಹಾಕುತ್ತಿದ್ದ ಜಿಲ್ಲಾಧಿಕಾರಿಗಳ ಕುಮ್ಮಕ್ಕೂ ಅವನಿಗಿತ್ತು.

ಆ ಭಾಗಕ್ಕೆ ಹೊಸದೊಂದು ಶಾಲೆ ಮಂಜೂರಾಗಿ ಮಾಸ್ತರರ ಆಗಮನವಾಗುತ್ತಿದೆ 1942 ರಿಂದಲೂ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ದೇಶದ ಬಗ್ಗೆ ಕನಸು ಕಾಣುವ ಆದರ್ಶವಾದಿ ಆ ಮಾಸ್ತರರು. ಸಹಜವಾಗಿಯೇ ಆ ಹಳ್ಳಿಯ ದಲಿತರ ಮಕ್ಕಳಿಗೆ ಶಿಕ್ಷಣ ಸಿಗುತ್ತದೆ. ಮೊಘಾಯ್ ಮತ್ತು ಅವನ ಹೆಂಡತಿ ಘೊಲಬನಿ ಅವರ ಮಗ ಧೂರನೂ ಶಾಲೆಗೆ ಹೋಗಿ ಕಲಿಯುತ್ತಾನೆ ವಿಚಾರಗಳನ್ನು ಗ್ರಹಿಸುತ್ತಾನೆ. ಆ ಪ್ರದೇಶದಲ್ಲಿ ಈ ಕೆಳಗಿನ ಜನರಿಗೆ ಆಗುತ್ತಿದ್ದ ಅನ್ಯಾಯದ ಬಗ್ಗೆ ಮಾಸ್ತರರು ನೊಂದುಕೊಳ್ಳುತ್ತಾರೆ. ಜಿಲ್ಲಾಧಿಕಾರಿಯವರಿಗೂ ದೂರು ಕೊಡುತ್ತಾರೆ. ಆದರೆ ಪ್ರಯೋಜನವಾಗುವುದಿಲ್ಲ.

ಆ ಪ್ರದೇಶದಲ್ಲಿ ಹರಿಯುತ್ತಿದ್ದ ಚಾರ್ಯಾನದಿ ಕೆಳವರ್ಗದ ಜನರ ಬದುಕಿನ ಅವಿಭಾಜ್ಯ ಅಂಗವಾಗಿತ್ತು. ಮಳೆಗಾಲದಲ್ಲಿ ತುಂಬಿ ಹರಿಯುತ್ತಿದ್ದ ಚಾರ್ಯ ಬೇಸಿಗೆಯಲ್ಲಿ ಬತ್ತಿಹೋಗಿ ಅವರ ಬದುಕು ನೀರಿಲ್ಲದೆ ಅಸಹನೀಯವಾಗುತ್ತಿತ್ತು. ಶಾಲೆಯ ಮಾಸ್ತರು ಅವರಿಗೊಂದು ಯೋಜನೆ ರೂಪಿಸುತ್ತಾರೆ. ನದಿಗೆ ಕಟ್ಟುಹಾಕಿ ನೀರನ್ನು ಶೇಖರಿಸಿದರೆ ಬೇಸಿಗೆಯಲ್ಲಿ ಉಪಯೋಗಕ್ಕೆ ಬರುತ್ತದೆ ಎಂದು ತಿಳಿಸುತ್ತಾರೆ. ತಮಗೊಂದು ಬಾವಿಯಿಲ್ಲವೆಂದು ಪರಿತಪಿಸುತ್ತಿದ್ದ ಮೋಘಾಯ್‌ನ ಜನರು ಈ ಯೋಜನೆಯಿಂದ ಪ್ರಳಕಿತರಾಗಿ ಅಣೆಕಟ್ಟು ಕಟ್ಟುತ್ತಾರೆ ಆನಂದಪಡುತ್ತಾರೆ.

ತಮಗೆ ಗೊತ್ತಿಲ್ಲದೆ ಇವರು ಸ್ವಾವಲಂಬಿಗಳಾಗಿರುವ ಸಂಗತಿ ಸಂತೋಷ್ ಬಾಬು ಮತ್ತು ಜಿಲ್ಲಾಧಿಕಾರಿಗಳನ್ನು ಸಹಜವಾಗಿಯೇ ಕುದಿಯುವಂತೆ ಮಾಡುತ್ತದೆ. ಕಟ್ಟು ಒಡೆಯಬೇಕೆಂದು ಅವರು ನಿರ್ಧರಿಸುತ್ತಾರೆ. ಮೊಘಾಯ್‌ನ ಜನ ಪ್ರತಿರೋಧಿಸುತ್ತಾರೆ ಪೋಲಿಸರ ದಬ್ಬಾಳಿಕೆ ಮತ್ತು ಹಿಂಸಾಚಾರ ನಡೆಯುತ್ತದೆ ಕಟ್ಟು ಒಡೆಯುವುದನ್ನು ತಡೆಯಲು ಹೋದ ಮೊಘಾಯ್ ನದಿಯಲ್ಲಿ ಹೆಣವಾಗಿ ತೇಲಿಹೋಗುವುದರೊಂದಿಗೆ ನಾಟಕ ಮುಕ್ತಾಯವಾಗುತ್ತದೆ.

ಯಾವುದೇ ಕೃತಿ- ಅದು ಕತೆಯಾಗಿರಲಿ ನಾಟಕವಾಗಿರಲಿ, ಸಿನಿಮಾವಾಗಿರಲಿ ಅದನ್ನು ಓದಿದಾಗ ಅಥವಾ ನೋಡಿದಾಗ ಗಾಢ ಅನುಭವ



ನೀಡಬೇಕು. ಆಗ ಮಾತ್ರ ಆ ಕೃತಿ ತನ್ನ ಉದ್ದೇಶವನ್ನು ಸಾಕಲು ಸಾಧ್ಯ. ಈ ನಿಟ್ಟಿನಲ್ಲಿ " ನೀರು " ನಾಟಕ ನಿರೀಕ್ಷೆಯ ಮಟ್ಟ ತಲುಪಲಿಲ್ಲವೆಂದೇ ಹೇಳಬೇಕಾಗುತ್ತದೆ.

ಯುವ ನಿರ್ದೇಶಕ ಯಾದವ್ ತನ್ನ ಕೈಚಳಕ ಪ್ರದರ್ಶಿಸಿದ್ದಾರೆ ಎನ್ನುವುದರಲ್ಲಿ ಎರಡುಮಾತಿಲ್ಲ. ಆದರೆ ಇಡೀ ತಂಡ ಸಾಮೂಹಿಕವಾಗಿ ನಾಟಕದ ವಸ್ತುವನ್ನು ಪ್ರೇಕ್ಷಕರಿಗೆ ತಲುಪಿಸುವಲ್ಲಿ ಸೋತಿದೆಯಷ್ಟೆ. ಯಾದವ್‌ರವರು ಉತ್ತಮ ನಿರ್ದೇಶಕರಾಗಬಲ್ಲರು ಎಂಬುದನ್ನಂತೂ ಈ ನಾಟಕ ಸಾಬೀತುಮಾಡಿದೆ. ಇನ್ನು ನಾಟಕದಲ್ಲಿ ಮಾಘಾಯ್ ಪಾತ್ರದ ಗುಂಡಣ್ಣ ಮೊಟ್ಟಮೊದಲ ಬಾರಿಗೆ ತಮಗೆ ನೀಡಿದ ಅಷ್ಟು ದೊಡ್ಡಪಾತ್ರವನ್ನು ಸಲೀಸಾಗಿ ಮಾಡಿ ನ್ಯಾಯ ಒದಗಿಸಿದ್ದಾರೆ. ಹಾಗೆಯೇ ಅವನ ಪತ್ನಿ ಪಾತ್ರ ಮಾಡಿದ ತಾಜುಯಾ ನಾಟಕಕ್ಕೆ ಕಳೆ ಕೊಟ್ಟಿದ್ದಾರೆ. ಇಡೀ ನಾಟಕದಲ್ಲಿ ಭರವಸೆ ಮೂಡಿಸುವ ನಟ ಹರ್ಷ ನಾಟಕದ ಕೇಂದ್ರ ಬಿಂದುವಾದ 'ದೂರ ' ನ ಪಾತ್ರ ನಿರ್ವಹಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸಂತೋಷ್‌ಬಾಬು ಹಾಗೂ ಶಾಲಾಮಾಸ್ತರರ ಪಾತ್ರ ಮಾಡಿದ್ದ ಶಂಕರ್ ಮತ್ತು ರವಿಕುಮಾರ್ ಜನರ ಗಮನ ಸೆಳೆಯುವಲ್ಲಿ ಸಫಲರಾಗಿದ್ದಾರೆ. ಆದರೆ ಶಂಕರ್ ತಮ್ಮ ಇಡೀ ನಾಟಕದ ಒಟ್ಟು ಚೌಕಟ್ಟಿನಿಂದ ಹೊರಗುಳಿದಂತೆ ಅನಿಸುತ್ತದೆ ಅವರೂ ಕೂಡ ನಾಟಕದ ಒಟ್ಟು ಆಶಯದ ಜತೆ ಹೋಗಿದ್ದಿದ್ದರೆ ಹೆಚ್ಚು ಉಪಯೋಗವಾಗುತ್ತಿತ್ತು.

ಇಕ್ಬಾಲ್ ಅಹಮದ್‌ರ ರಂಗವಿನ್ಯಾಸ ಪ್ರೇಕ್ಷಕರ ಕಣ್ಣಿಗೆ ಕಟ್ಟುವಂತಿತ್ತು. ಬೆಳಕಿನ ವ್ಯವಸ್ಥೆಯಲ್ಲಿ ಹೆಸರು ಮಾಡಿರುವ ಮುದ್ದಣ್ಣ ಈ ನಾಟಕದಲ್ಲಿ ತನ್ನ ಕೈಚಳಕ ತೋರುವಲ್ಲಿ ಹೆಚ್ಚು ಮನಸ್ಸು ಮಾಡಿಲ್ಲವೆಂಬುದು ಎದ್ದು ಕಾಣಿಸುತ್ತಿತ್ತು. ಧ್ವನಿ ವ್ಯವಸ್ಥೆ ಗೊಂದಲದಲ್ಲಿ ತುಂಬಿತ್ತು. ಗಜಾನನ ನಾಯ್ಕರ ಸಂಗೀತ ನಾಟಕದ ಒಟ್ಟು ಆಶಯಕ್ಕೆ ಭಾವನೆಗಳಿಗೆ ಪೂರಕವಾಗಿರದೆ ನಮ್ಮನ್ನು ನಿರಾಸೆಗೊಳಿಸಿತು.

ಜಿಟಿ ಜಿಟಿ ಮಳೆ ಬೆಳಗಿನಿಂದ ಜಿನುಗುತ್ತಿದ್ದರೂ ಎಡಿಎ ರಂಗಮಂದಿರದಲ್ಲಿ ಪ್ರೇಕ್ಷಕರ ಸಂಖ್ಯೆ ಹೆಚ್ಚಾಗಿಯೇ ಇತ್ತು ಎಂಬ ಅಂಶ ಸಂಗೀತ-ನಾಟಕಗಳಿಗೆ ಜನ ಬರುವುದಿಲ್ಲ ಎಂಬ ಮಾತನ್ನು ಸುಳ್ಳಾಗಿಸಿದೆ.

ಅಂತೂ "ನೀರು" ನಾಟಕ ಭರವಸೆ ಮಾಡಿಸಿದೆ. ಸಮುದಾಯದ ಬಗ್ಗೆ ಹೆಮ್ಮೆ ಮೂಡಿಸುವ ಪ್ರಯತ್ನ.

ಸಂಪತ್ತನ್ನು ಸೃಷ್ಠಿ ಮಾಡುವ ದುಡಿಯುವ ಜನ ಈ ವ್ಯವಸ್ಥೆಯಲ್ಲಿ ಶೋಷಿತರಾಗಿಯೇ ಮುಂದುವರಿಯುತ್ತಾರೆ. ಸಂಪತ್ತನ್ನು ಅನುಭವಿಸುವ ಮೇಲ್ವರ್ಗದ ಜನ ತಮ್ಮ ಕಬಂಧ ಬಾಹುಗಳನ್ನು ಈ ಸಮಾಜದ ಮೇಲೆ ಹಿಡಿತವಿಟ್ಟುಕೊಂಡೇ ಇರುತ್ತಾರೆ. ಸಂಪತ್ತನ್ನು ಉತ್ಪಾದಿಸುವ ಬಹುಜನರು ದುಡಿಯುವ ಜನರು, ಪ್ರಭುತ್ವ ಹಿಡಿಯುವ ಮೂಲಕ ಮತ್ತು ಈ ಅಮಾನವೀಯ ಹಿಂಸಾತ್ಮಕ ಕ್ರೌರ್ಯದ ಶೋಷಣೆಯ ವ್ಯವಸ್ಥೆಯನ್ನು ಕೊನೆಗಾಣಿಸಲು ಸಾಧ್ಯ ಎಂಬ ಅರಿವು ಅವರಲ್ಲಿ ಮೂಡುವ ತನಕ ಇದು ಮುಂದುವರಿಯುತ್ತದೆ. ಅಂತಹ ಒಂದು ಅರಿವು ಮೂಡಿಸುವ ಪ್ರಯತ್ನದಲ್ಲಿ ಸಮುದಾಯದ ಈ ನಾಟಕ ಒಂದು ಹೆಜ್ಜೆಯಾಗಬಲ್ಲುದು. ಆ ನಿಟ್ಟಿನಲ್ಲಿ ರಾಜ್ಯಾದ್ಯಂತ ಈ ನಾಟಕಗಳು ಪ್ರದರ್ಶನವಾಗಬೇಕು. ಅದೂ ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ ಪ್ರದರ್ಶನವಾಗಲೇಬೇಕು.

- ಎನ್. ನಾಗರಾಜ್

..............ರೈತ ಸಮ್ಮೇಳನ

ಪುಟ 9 ರಿಂದ

ನಿಗದಿಪಡಿಸಬೇಕು ಎಂದು ಹೇಳಿದರು.

ಅನಂತರ ರೈತ ಸಂಘದ ಪ್ರಧಾನ ಕಾರ್ಯದರ್ಶಿಗಳು 68 ಪುಟಗಳ ಮುದ್ರಿತ ಕರಡು ವರದಿಯನ್ನು ಪ್ರತಿನಿಧಿಗಳ ಚರ್ಚೆಗಾಗಿ ಮಂಡಿಸಿದರು. 13 ಜಿಲ್ಲೆಗಳನ್ನು ಪ್ರತಿನಿಧಿಸಿ ಒಟ್ಟು 30 ಜನ ಪ್ರತಿನಿಧಿಗಳು ಕರಡು ವರದಿಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದರು. ಚರ್ಚೆಯಲ್ಲಿ ಎತ್ತಲಾದ ಪ್ರಶ್ನೆಗಳಿಗೆ ರಾಜ್ಯಸಮಿತಿಯ ಪರವಾಗಿ ಪ್ರಧಾನ ಕಾರ್ಯದರ್ಶಿಯವರು ನೀಡಿದ ಉತ್ತರದ ಆಧಾರದಲ್ಲಿ ಕರಡು ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪತಿಯಿಂದ ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದ ಸುನಿತ್ ಭೋಪ್ರಾರವರು ಹೋರಾಟದ ದಾರಿಯಲ್ಲಿ ರೈತರು ಮತ್ತು ಕೂಲಿಕಾರರು ಒಟ್ಟೊಟ್ಟಿಗೆ ಹೋಗಬೇಕು ಎಂದು ಹೇಳಿದರು. ಅಖಿಲ ಭಾರತ ಕಿಸಾನ್ ಸಭಾದ ಮುಖಂಡರಾಗಿದ್ದ ಸ್ವಾಮಿ ಸಹಜಾನಂದ ಸರಸ್ವತಿ ಅವರ ಮಾತನ್ನು ನೆನಪಿಸಿದ ಅವರು ರೈತರು ತಮ್ಮ ಎತ್ತುಗಳ ಚಾಕರಿ ಮಾಡುವ ಕೂಲಿಕಾರರನ್ನು ಮರೆಯಬಾರದು ಎಂದರು. ರೈತರು ಮತ್ತು ಕೂಲಿಕಾರರು ಒಂದಾಗಿ ಹೋಗುವುದು ಅಷ್ಟೇನು ಸುಲಭದ ವಿಷಯವಲ್ಲ. ಕೂಲಿಕಾರರು ಹೆಚ್ಚಾಗಿ ಕೆಳಜಾತಿಗಳಿಗೆ ಸೇರಿದವರಾಗಿದ್ದಾರೆ. ಜಾತಿ ಪದ್ಧತಿ ಗುಲಾಮಗಿರಿಯ ಸಂಕೇತವಾಗಿದೆ. ರಾಜರಿಗೆ ಜಾತಿ ಇಲ್ಲ ಎಂದು ಉದಾಹರಣೆಗಳನ್ನು ನೀಡಿದ ಅವರು ನಾವು ಇಂದು ಭಾರತ ದೇಶದ ಪ್ರಭುಗಳು, ನಮಗೆ ಯಾಕೆ ಜಾತಿ? ಎಂದು ಪ್ರಶ್ನಿಸಿದರು.



ಸಮ್ಮೇಳನದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು

ರೈತ ಸಂಘ ಜಾತಿ ಪದ್ಧತಿ- ಅಸ್ಪೃಶ್ಯತೆಯ ವಿರುದ್ಧ ಹೋರಾಡಬೇಕು. ರೈತರು ಭೂಮಿ ಕಳೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಭೂಮಿಗಾಗಿ ರೈತರು ಮತ್ತು ಕೂಲಿಕಾರರು ಒಟ್ಟಾಗಿ ಹೋರಾಡಬೇಕು ಎಂದು ಬನಾರಸ್ ಭೂ ಹೋರಾಟದ ಅನುಭವವನ್ನು ವಿವರಿಸಿದರು. ರೈತರ ಫಸಲಿಗೆ ಯೋಗ್ಯ ಬೆಲೆ ಹಾಗೂ ಸಮರ್ಪಕವಾದ ಪಡಿತರ ಪದ್ಧತಿಗಾಗಿ ರೈತರು ಮತ್ತು ಕೂಲಿಕಾರರು ಒಟ್ಟಿಗೆ ಹೋರಾಡ ಬೇಕು. ಕೇರಳದಲ್ಲಿ ಕೂಲಿಕಾರರಿಗೆ ಒಂದು ಕಾನೂನು ಇದೆ. ಇಡೀ ದೇಶದಲ್ಲಿ ಅಂತಹ ಕಾನೂನು ಬರಬೇಕಾಗಿದೆ. ಕೂಲಿಕಾರರ ಬಗ್ಗೆ ಕಾನೂನು ಬಂದರೆ ಗ್ರಾಮಗಳಲ್ಲಿ ಜಗಳಗಳಿಗೆ ಆಸ್ಪದ ಇಲ್ಲದೆ ಶಾಂತಿ ನೆಲೆಸುತ್ತದೆ ಎಂದರು.

ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ.ಸೂರ್ಯನಾರಾಯಣ ರಾವ್, ಕೃಷಿಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಎನ್.ನಾಗರಾಜ್, ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ರಾಮಕೃಷ್ಣ, ಅಂಗನವಾಡಿ ನೌಕರರ ಸಂಘದ ರಾಜ್ಯ ಅಧ್ಯಕ್ಷೆ ಶಾಂತಾ ಘಂಟಿ, ರಾಜ್ಯ ರೈತ ಸಂಘದ ಮುಖಂಡರಾದ ಬಸವರಾಜ ತಂಬಾಕೆ ಅವರು ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು.

ಸಿಡ್ನಿ ಒಲಂಪಿಕ್ಸ್ ಕನಸಿನಾಳದ ವಾಸ್ತವಗಳು

ಶತಮಾನದ ಮೊದಲ ಒಲಂಪಿಕ್ಸ್ ಉದ್ಘಾಟನಾ ಸಮಾರಂಭ ಜನಪದ, ನಾದ ನೃತ್ಯಗಳ ಅಮೋಘ ರಸ ಪ್ರವಾಹಗಳ ಮಧ್ಯೆ ನಡೆಯಿತು. ಆಸ್ಟ್ರೇಲಿಯದ ಮೂಲ ನಿವಾಸಿಗಳ ಅಪೂರ್ವ ಸಂಸತಿಗೆ ಹಿಡಿದ ಕೈಗನ್ನಡಿಯಾಗಿ ಈ ಮೇಳ ನಡೆಯಿತು. ಇಷ್ಟೇ ಅಲ್ಲದೆ ಮುಂಧಿನ ದಿನಗಳಲ್ಲಿ ಮೂಲ ನಿವಾಸಿಗಳೊಂದಿಗೆ ಜೊತೆ ಜೊತೆಯಾಗಿ ಹೆಜ್ಜೆ ಇಡುವ ಆಶಯ ಸಾರುವ ನಿಟ್ಟಿನಲ್ಲಿ ಈ ಸಾಂಸತಿಕ ಮೇಳ ನಡೆಯಿತು.

ಸಿಡ್ನಿಯ ಹೊಂಬುಶ್‌ಬೆಯಲ್ಲಿನ ಒಲಂಪಿಕ್ಸ್‌ನ ಮುಖ್ಯ ಕ್ರೀಡಾಂಗಣಕ್ಕೆ ಸೆಪ್ಟೆಂಬರ್ 15 ರ ಸಂಜೆ ಕಣ್ಮನ ಸೂರೆಗೊಂಡ ಬಣ್ಣದ ಮೋಡಗಳು ಮೂಡಿದ್ದವು. ಮೂಲನಿವಾಸಿಗಳ ಸ್ವಾಭಿಮಾನದ ಸಂಕೇತವಾದ ಅದ್ಭುತ ಶ್ರೇಷ್ಠ ಪ್ರತಿಭೆ 'ಕಪ್ಪು ಹುಡುಗಿ' ಕ್ಯಾಥ ಫ್ರಿಮನ್ ಚಾರಿತ್ರಿಕ ಒಲಂಪಿಕ್ಸ್ ಜ್ಯೋತಿ ಬೆಳಗಿಸಿದರು. ಆದರೆ ಒಲಂಪಿಕ್ಸ್ ಕ್ರೀಡೆಗಳ ಉದ್ಘಾಟನೆಯ ಸಂದರ್ಭದಲ್ಲಿ ಈ ಜನಾಂಗ ತನ್ನ ನೋವನ್ನು ಪ್ರತಿಭಟನೆಯ ಮೂಲಕ ತೋಡಿಕೊಂಡಿತು. 13 ರ ನಿಕಿ ವೆಬ್‌ಸ್ಟರ್ ವರ್ಣರಂಜಿತವಾದ ಈ ಬೃಹತ್ ಮೈದಾನದ ಮಧ್ಯೆ ಬಂದು ನಿದ್ದೆ ಬಂದಂತೆ ಮಲಗಿ ಕನಸು ಕಾಣಲಾರಂಭಿಸಿದಂತೆ ಜೊತೆಗೆ ಕ್ರೀಡಾಳುಗಳು ತಮ್ಮ ಕನಸಿನ ಪದಕಗಳ ನನಸಿಗಾಗಿ ಸನ್ನದ್ಧರಾದರು.



400 ಮೀಟರ್ಸ್ ಮಹಿಳೆಯರ ವೈಯಕ್ತಿಕ ಈಜು ಸ್ಪರ್ದೆಯಲ್ಲಿ ವಿಶ್ವ ದಾಖಲೆ ಸ್ಥಾಪಿಸಿದ ಉಕ್ರೇನಿನ ಯಾನಾ ಕ್ಲೊಚಕೊವಾ

ಇಪ್ಪತ್ತನೇಳನೆ ಈ ಒಲಂಪಿಕ್ಸ್ ಕ್ರೀಡೋತ್ಸವ 199 ರಾಷ್ಟ್ರಗಳ 10 ಸಾವಿರಕ್ಕೂ ಹೆಚ್ಚು ಕ್ರೀಡಾ ಪಟುಗಳಾಗಿ 28 ಸ್ಪರ್ಧೆಗಳಲ್ಲಿ 300 ಪದಕಗಳನ್ನು ಸ್ಪರ್ಧೆಗೆ ಒಡ್ಡಿದೆ. ಭಾರತವು ಕಳೆದ ಬಾರಿಯ ಪದಕ ವಿಜೇತ ಲಿಯಾಂಡರ್ ಪೇಸ್ ನೇತೃತ್ವದಲ್ಲಿ 116 ಕ್ರೀಡಾಳುಗಳನ್ನು ಕಳುಹಿಸಿದೆ.

ಭಾರೀ ನಿರೀಕ್ಷೆಗಳ ಜೊತೆ ಸಿಡ್ನಿಗೆ ತಲುಪಿದ ಭಾರತದ ಸ್ಪರ್ಧಿಗಳನೇಕರು ಭಾಗವಹಿಸಿದ್ದಾರೆ. ಆದರೆ ಶೂಟಿಂಗ್‌ನಲ್ಲಿ ಅಂಜಲಿ, ಅಭಿನವ ಬಿಂದ್ರಾ, ಅನ್ವರ್ ಸುಲ್ತಾನ, ಟೇಬಲ್ ಟೆನ್ನಿಸ್‌ನಲ್ಲಿ ಪೌಲೋಮಿ, ಬ್ಯಾಂಡ್ಮಿಂಟನ್‌ನಲ್ಲಿ ಅಪರ್ಣಾ, ಗೋಪಿಚಂದ್, ಈಜಿನಲ್ಲಿ ನಿಷಾ ಮಿಲ್ಲೆಟ್, ಹಕಿಮುದ್ದೀನ್ ಮತ್ತು ಬಾಕ್ಸಿಂಗ್‌ನಲ್ಲಿ ಜಿತೇಂದ್ರ ಕುಮಾರ್, ಗುರುಚರಣಸಿಂಗ್ ಪದಕ ಗಳಿಸಲಾಗಲಿಲ್ಲ.


ಈ ಬಾರಿ ಪದಕದ ನಿರೀಕ್ಷೆ ಇಟ್ಟುಕೊಂಡಿದ್ದ ಟೆನಿಸ್‌ನ ಸಿಂಗಲ್ಸ್‌ನಲ್ಲಿ ಲಿಯಾಂಡರ್ ಫೇಸ್ ಮೊದಲಿನ ಸುತ್ತಿನಲ್ಲಿ ಸೋತು ನಿರ್ಗಮಿಸಿ ನಿರಾಶೆಗೊಳಿಸಿದ್ದಾರೆ. ಡಬಲ್ಸ್‌ನಲ್ಲಿ ಫೇಸ್ ಮತ್ತು ಭೂಪತಿ ಜೋಡಿ ಮೊದಲ ಸುತ್ತಿನಲ್ಲಿ ಗೆದ್ದು ಆಸೆ ಚಿಗುರಿಸಿದರೆ ಎರಡನೇ ಪಂದ್ಯದಲ್ಲಿ ಆಸ್ಟ್ರೇಲಿಯಾದ ವುಟ್ ಜೋಡಿಗೆ ಶರಣಾಗಿ ಸಿಡ್ನಿಯಿಂದ ಹೊರ ನೆಡೆದ ಮತ್ತೊಂದು ಅಂತಹದು ಪ್ರಸಂಗ.

ಹಾಕಿ ಕಠಿಣ ಸವಾಲು: 8 ಬಾರಿ ಒಲಂಪಿಕ್ಸ್ ಚಾಂಪಿಯನ್ ಭಾರತ 80 ರ ದಶಕದಿಂದೀಚೆಗೆ ಕಳಪೆ ಪ್ರದರ್ಶನ ನೀಡುತ್ತಾ ಬಂದಿದ್ದರು. ಈ ಬಾರಿ ಪ್ರಾರಂಭದಲ್ಲಿ ಪ್ರಬಲ ಅರ್ಜೆಂಟೈನಾ ವಿರುದ್ಧ ಭರ್ಜರಿ ಗೆಲುವು ಸಾಧಿಸಿದೆ. ನಂತರ ನಡೆದ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ಡ್ರಾ ಮಾಡಿಕೊಳ್ಳುವಲ್ಲಿ ಶಕ್ತವಾಗಿದ್ದ ಭಾರತ ದ.ಕೋರಿಯ ವಿರುದ್ಧಸೋತು ನಿರ್ಗಮಿಸುವ ಹಂತದಲ್ಲಿದ್ದಾಗ ಸ್ಪೇನ್ ವಿರುದ್ಧ ಗೆದ್ದು ಭಾರತೀಯರ ಆಸೆಗೆ ಜೀವ ತುಂಬಿದೆ. ಆದರೂ ಭಾರತಕ್ಕೆ ಪದಕದ ದಾರಿ ಕಷ್ಟಕರವಾದ ಹಳ್ಳ ದಿಣ್ಣೆಗಳಿಂದಲೇ ಕೂಡಿದೆ.

ಇಲ್ಲಿವರೆಗೆ ಇತ್ಯರ್ಥವಾಗಿರುವ 108 ಚಿನ್ನದ ಪದಕಗಳಿಗೆ 30 ರಾಷ್ಟ್ರಗಳು ತಮ್ಮ ರಾಷ್ಟ್ರಗೀತೆ ನುಡಿಸಿವೆ. ಒಟ್ಟು 55 ರಾಷ್ಟ್ರಗಳು ಪದಕಗಳ ಪಟ್ಟಿಯಲ್ಲಿ ತಮ್ಮ ದೇಶದ ಹೆಸರು ನಮೂದಿಸಿವೆ.

ಒಲಂಪಿಕ್ಸ್‌ನಲ್ಲಿ ಪದಕ ಪಡೆದ ಚೊಚ್ಚಲ ಮಹಿಳೆ

ಸಿಡ್ನಿ ಒಲಂಪಿಕ್ಸ್‌ನಲ್ಲಿ ಸೆಪ್ಟೆಂಬರ್ 19 ಭಾರತದ ಪಾಲಿಗೆ ಅವಿಸ್ಮರಣೀಯ ದಿನ. ನೂರು ಕೋಟಿ ಜನಸಂಖ್ಯೆಯ ಭಾರತಕ್ಕೆ ಆಂಧ್ರ ಮೂಲಕ ಕರ್ಣಂ ಮಲ್ಲೇಶ್ವರಿ ವೈಟ್‌ಲಿಫ್ಟಿಂಗ್‌ನಲ್ಲಿ ಕಂಚು ಗೆಲ್ಲುವ ಮೂಲಕ ಈ ದೇಶಕ್ಕೆ ಒಲಂಪಿಕ್ಸ್‌ನಲ್ಲಿ ಪದಕ ದೊರಕಿಸಿಕೊಟ್ಟ ಪ್ರಥಮ ಮಹಿಳೆಯಾಗಿ ಭಾರತೀಯರಿಗೆ ಹರ್ಷ ತಂದಿದ್ದಾರೆ.



ಕರ್ಣಂ ಮಲ್ಲೇಶ್ವರಿ ವೇಟ್‌ಲಿಫ್ಟಿಂಗ್‌ನಲ್ಲಿ ಭಾರತ ಕಂಡ ಏಕೈಕ ಮಹಿಳಾ ಚಾಂಪಿಯನ್. 63 ಕೆ.ಜಿ. ವಿಭಾಗದಲ್ಲಿ ಹಲವು ವರ್ಷಗಳ ಕಾಲ ವಿಶ್ವಚಾಂಪಿಯನ್ ಆಗಿದ್ದ ಮಲ್ಲೇಶ್ವರಿ ಸಿಡ್ನಿಯಲ್ಲಿ 69 ಕೆ.ಜಿ. ವಿಭಾಗದಲ್ಲಿ ಒಟ್ಟು 240 ಕೆ.ಜಿ.ಭಾರ ಎತ್ತಿ ಮೂರನೇ ಸ್ಥಾನ ಪಡೆಯುವ ಮೂಲಕ ಕಂಚು ಗೆದಲ್ಲ ಮಹಿಳಾ ಸಾಮರ್ಥ್ಯಕ್ಕೊಂದು ಇತಿಹಾಸ ನಿರ್ಮಿಸಿದ್ದಾರೆ. ಈ ಹಿಂದೆ 1952 ರಲ್ಲಿ ಕೆ.ಜಿ.ಜಾಧವ್ ಕುಸ್ತಿಯಲ್ಲಿ ಮತ್ತು 1996 ರಲ್ಲಿ ಲಿಯಾಂಡರ್ ಫೇಸ್ ಟೆನಿಸ್‌ನಲ್ಲಿ ಕಂಚು ಗೆದ್ದಿದ್ದರು. ಈ ಬಾರಿ ಮಲ್ಲೇಶ್ವರಿ ಗೆದ್ದಿರುವುದು ವೈಯಕ್ತಿಕ ಸ್ಪರ್ದೆಗಳಲ್ಲಿ ಭಾರತಕ್ಕೆ ದೊರೆತ ಮೂರನೇ ಪದಕ.

ಅಭಿನಂದನೆಗಳು: ಒಲಂಪಿಕ್ಸ್‌ನ ಪದಕಗಳ ಪಟ್ಟಿಯಲ್ಲಿ ಭಾರತದ ಹೆಸರು ನಮೂದಿಸಿದ ಕರ್ಣಂ ಮಲ್ಲೇಶ್ವರಿಯವರಿಗೆ ದೇಶದಾದ್ಯಂತ ಅಭಿನಂದನೆಗಳ ಮಹಾಪೂರ ಹರಿದು ಬರುತ್ತಿದೆ. ದುಡಿಯುವ ಜನರ ಪ್ರಾಣಮಿತ್ರ 'ಐಕ್ಯರಂಗ'ವು ತನ್ನ ಹರ್ಷವನ್ನು ವ್ಯಕ್ತಪಡಿಸುತ್ತದೆ.

ಆಸೆಗಳನ್ನು ಜೀವಂತವಾಗಿರಿಸಿರುವ ಭಾರತೀಯ ಹಾಕಿ ತಂಡ



ಮಹಿಳೆಯರ 53 ಕೆ.ಜಿ.ವಿಭಾಗದ ವೈಟ್‌ಲಿಫ್ಟಿಂಗ್‌ನಲ್ಲಿ ವಿಶ್ವ ದಾಖಲೆ ಸ್ಥಾಪಿಸಿ ಚಿನ್ನ ಗೆದ್ದ ಚೀನಾದ ಕ್ಸಿಯಾ ಯಾಂಗ್



PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India (Marxist), Karnataka State Committee. Editor : G.N. NAGARAJ